ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 12 ಮಾರ್ಚ್ 17-23, 1997 ಬೆಲೆ ರೂ. 2.00

ರಾಜ್ಯ ಸರಕಾರದ ತಪ್ಪು ನೀತಿಗಳ ವಿರುದ್ಧ ಕಾರ್ಮಿಕರ ತೀವ್ರ ಚಳುವಳಿ

ಮೇ 1ರಿಂದ 15: ರಾಜ್ಯವ್ಯಾಪಿ ಆಂದೋಲನ - ಸಿಐಟಿಯು ರಣಕಹಳೆ

ಕರ್ನಾಟಕ ರಾಜ್ಯ ಸರಕಾರದ ಭೂಮಾಲಕ-ಬಂಡವಾಳಶಾಹಿಗಳ ಪರವಾದ ಆರ್ಥಿಕ-ಕೈಗಾರಿಕಾ ನೀತಿಗಳ ವಿರುದ್ಧ, ಮಾಲಕರುಗಳ ಪರ ನಿಲುವುಗಳ ವಿರುದ್ಧ ಒಂದು ದಿಟ್ಟ ಸಮರದ ರಣಕಹಳೆಯನ್ನು ರಾಜ್ಯದ ಕಾರ್ಮಿಕರು ಮೊಳಗಿಸಿದ್ದಾರೆ.


ರಾಜ್ಯದ ಕಾರ್ಮಿಕ ಆಂದೋಲನ ದಲ್ಲಿ ಪ್ರಧಾನ ಪಾತ್ರ ವಹಿಸುತ್ತಿರುವ ಸಿಐಟಿಯು ಬೆಂಗಳೂರಿನಲ್ಲಿ ಮಾರ್ಚ್ 13ರಿಂದ 16ರವರೆಗೆ ನಡೆದ ತನ್ನ 7ನೇ ಸಮ್ಮೇಳನದಲ್ಲಿ ರಾಜ್ಯದಲ್ಲಿ ದುಡಿಯುವ ಜನರ ಸ್ಥಿತಿ-ಗತಿಗಳನ್ನು ವಿಮರ್ಶಿಸಿ ಒಂದು ತೀವ್ರ ಹೋರಾಟದ ಕಾರ್ಯಕ್ರಮವನ್ನು ರೂಪಿಸಿ ರಾಜ್ಯದ ಕಾರ್ಮಿಕ ವರ್ಗದ ಮುಂದಿಟ್ಟಿದೆ.

- **ಈ ವರ್ಷದ ಮೇ ದಿನದಿಂದ ಒಂದು ವಾರ ಅಂದರೆ ಮೇ 7ರವರೆಗೆ ರಾಜ್ಯಾದ್ಯಂತ ಕಾರ್ಮಿಕರ ಮತ್ತು ದುಡಿಯುವ ಜನರ ಸಭೆಗಳ ಮೂಲಕ ಹೋರಾಟ ಸಿದ್ಧತೆ.**
- **ಮೇ 8ರಿಂದ 14ರವರೆಗೆ ರಾಜ್ಯದೆಲ್ಲೆಡೆ ರಾಜ್ಯ ಸರಕಾರದ ಕಚೇರಿಗಳ ಮುಂದೆ ಪಿಕೆಟಿಂಗ್**
- **ಮೇ 15ರಂದು ರಾಜ್ಯವ್ಯಾಪಿ ಮುಷ್ಕರ.**

ಸಿಐಟಿಯು ತನ್ನ ಹಿಂದಿನ ರಾಜ್ಯ ಸಮ್ಮೇಳನ ನಡೆಸಿದ ವೇಳೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್(ಐ) ಪಕ್ಷ ಅಧಿಕಾರದಲ್ಲಿತ್ತು. ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದ ನರಸಿಂಹರಾವ್ ಸರಕಾರ ಉದಾರೀಕರಣ, ಖಾಸಗೀಕರಣದ ನೀತಿಯನ್ನೇ ಅನುಸರಿಸಿದ ರಾಜ್ಯ ಕಾಂಗ್ರೆಸ್ ಸರಕಾರ ಬೆಲೆಯೇರಿಕೆಯನ್ನು ತಡೆಗಟ್ಟಲಿಲ್ಲ. ಮುಚ್ಚಿದ ಕಾರ್ಖಾನೆಗ ಳನ್ನು ತೆರೆಯುವ ಗೋಜಿಗೆ ಹೋಗಲಿಲ್ಲ. ವ್ಯಾಪಕ ಭ್ರಷ್ಟಾಚಾರದಿಂದ ಇಡೀ ಆಡಳಿತ ಯಂತ್ರ ಸ್ಥಗಿತಗೊಂಡಿತ್ತು. ಬೇಸತ್ತ ಜನ ಆ ಪಕ್ಷವನ್ನು ಅಧಿಕಾರದಿಂದಿಳಿಸಿದರು. ಸರಕಾರಗಳೇನೋ ಬದಲಾದವು. ಆದರೆ ಧೋರಣೆಗಳಲ್ಲಿ ಮಾತ್ರ ನಿರೀಕ್ಷಿತ ಬದಲಾವಣೆಗಳಾಗಲಿಲ್ಲ. ರಾಜ್ಯದ ಸಮಗ್ರ ಹಾಗೂ ಸಮಾನ ಅಭಿವೃದ್ಧಿಗೆ ಸಹಾಯವಾಗಬಲ್ಲ ಪರ್ಯಾಯ ನೀತಿ ಬರಲೇ ಇಲ್ಲ ಎಂದು ಸಿಐಟಿಯುವಿನ 7ನೇ ರಾಜ್ಯ ಸಮ್ಮೇಳನ ಅಂಗೀಕರಿಸಿದ ಒಂದು ನಿರ್ಣಯ ಖೇದ ವ್ಯಕ್ತಪಡಿಸಿದೆ(ಈ ನಿರ್ಣಯದ ಕೆಲವು ಭಾಗಗಳನ್ನು ಪುಟ 5ರಲ್ಲಿ ಕೊಡಲಾಗಿದೆ).

ಉದಾರೀಕರಣ, ಖಾಸಗೀಕರಣದ ನೀತಿಗಳು ಮುಂದುವರೆಯುತ್ತಲೇ ಇವೆ. ರಾಜ್ಯ ಸರಕಾರದ ಒಡೆತನದಲ್ಲಿರುವ ಉದ್ದಿಮೆಗಳ ಪುನರುಜ್ಜೀವನದ ಯೋಚನೆಯಿಲ್ಲ. ಸಾರ್ವಜನಿಕ ರಂಗದಲ್ಲಿ ಹೊಸ ಕಾರ್ಖಾನೆಗಳನ್ನು ಸ್ಥಾಪಿಸುವ ಅವಕಾಶವಿದ್ದಲ್ಲೂ ಖಾಸಗಿಯವರಿಗೆ ಸೌಲಭ್ಯ, ಮುಚ್ಚುತ್ತಿರುವ, ರೋಗಗ್ರಸ್ತವಾಗುತ್ತಿರುವ ಕಾರ್ಖಾನೆಗಳ ಪುನಶ್ಚೇತನಕ್ಕೆ ರಾಜ್ಯ ಸರಕಾರದಿಂದ ಯಾವುದೇ ಕಾರ್ಯಕ್ರಮವಿಲ್ಲ. ಅತ್ತ ಕಾರ್ಖಾನೆಗಳು ಮುಚ್ಚಿ ಕಾರ್ಮಿಕ ಕುಟುಂಬಗಳು ಬೀದಿ ಪಾಲಾಗುತ್ತಿರುವ ಬಗ್ಗೆ ಕನಿಷ್ಟ ಕಾಳಜಿಯೂ ಇಲ್ಲ. ಕನಿಷ್ಟ ವೇತನ ನಿಗದಿಪಡಿಸಿ ಜ್ಯಾರಿಗೊಳಿಸುವಲ್ಲಿ ಸರಕಾರದ ಅಕ್ಷಮ್ಯ ಹಿಂದೇಟು, ಕಾರ್ಮಿಕ ಇಲಾಖೆ ಸರಿಸುಮಾರು ನಿಷ್ಪ್ರಯೋಜಕವಾಗುತ್ತಿದೆ. ಕಾರ್ಮಿಕರನ್ನು ಸತಾಯಿಸಲಾಗುತ್ತಿದೆ.

ಇವೆಲ್ಲಕ್ಕೆ ಮುಕುಟವಿಟ್ಟಂತೆ ರಾಜ್ಯ ಸರಕಾರಕ್ಕೆ ಆಡಳಿತದ ಮೇಲೆ ಹಿಡಿತ ತಪ್ಪಿಹೋಗಿದೆ. ಒಂದೆಡೆ ಭ್ರಷ್ಟಾಚಾರದ ತಾಂಡವ, ಇನ್ನೊಂದೆಡೆ ಮತ್ತೆ ಪೋಲೀಸ್ ದರ್ಬಾರು. ಮಾಲಕರ ಪರವಾಗಿ ಪೋಲೀಸರ ಹಸ್ತಕ್ಷೇಪ ಹೆಚ್ಚುತ್ತಿದೆ. ವಳ್ಳಿಯಪ್ಪ ಟೆಕ್ಸ್‌ಟೈಲ್ಸ್‌ನಲ್ಲಿ ಮೂವರು ಅಮಾಯಕರ ಸಾವಿಗೆ, ಅನೇಕರಿಗೆ ಗಾಯಗಳಾಗಲು ಕಾರಣರಾದ ಪೋಲೀಸ್ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲು ಸರಕಾರ ಹಿಂದೇಟು ಹಾಕುತ್ತಿದೆ. ಹಾಗೆಯೇ ಗಂಗಾವತಿ ಮೊದಲಾದ ಕಡೆ ಕೂಲಿ ಹೆಚ್ಚಳಕ್ಕಾಗಿ ಆಗ್ರಹಿಸುತ್ತಿದ್ದ ಕೃಷಿ ಕೂಲಿಕಾರರ ಮೇಲೆ ಭೂಮಾಲಕರ ಗೂಂಡಾಗಳು ಮರಣಾಂತಿಕ ಹಲ್ಲೆ ಮಾಡಿದಾಗಲೂ ಅವರಿಗೆ ನ್ಯಾಯ ಒದಗಿಸಲು ರಾಜ್ಯ ಸರಕಾರದ ಪೋಲೀಸ್ ಮುಂದೆ ಬರಲಿಲ್ಲ ಎಂದು ಖಂಡಿಸಿರುವ ಸಿಐಟಿಯು ಸಮ್ಮೇಳನ 16 ಬೇಡಿಕೆಗಳನ್ನು(ಪುಟ 8 ನೋಡಿ) ಮುಂದಿಟ್ಟುಕೊಂಡು ಈ ರಾಜ್ಯವ್ಯಾಪಿ ತೀವ್ರ ಹೋರಾಟಕ್ಕೆ ಕರೆ ನೀಡಿದೆ. □



"ಕಾರ್ಮಿಕ ವರ್ಗದ ದನಿಗೆ ಕಿವಿಗೊಡಿ"

ಸಂಯುಕ್ತ ರಂಗ ಸರಕಾರಕ್ಕೆ ಡಾ.ಎಂ.ಕೆ.ಫಂದೆ ಕರೆ

ರಾವ್-ಸಿಂಗ್ ಹೇಳುತ್ತಿದ್ದರು- ಆರ್ಥಿಕ ಸಮಸ್ಯೆಗಳನ್ನು ವಿಪರ್ಯಯ ಗೊಳಿಸಲು ಸಾಧ್ಯವಿಲ್ಲ ಎಂದು. ಈ ವಿಷಯದಲ್ಲಿ ಹಿಂದೆ ಹೋಗಲು ಸಾಧ್ಯವಿಲ್ಲ ಎನ್ನುತ್ತಿದ್ದರು. ಆದರ ಫಲವಾಗಿ ಐದು ವರ್ಷಗಳಲ್ಲಿ ಸಾರ್ವಜನಿಕ ವಲಯದಲ್ಲಿ ಹೆಚ್ಚೆಚ್ಚು ಉದ್ದಿಮೆಗಳು ರೋಗಗ್ರಸ್ತವಾದವು, ಕಾರ್ಖಾನೆಗಳು ಮುಚ್ಚಿಹೋದವು, ದುಡಿಯುವ ಜನಗಳ ಜೀವನ ಮಟ್ಟ ಇಳಿಯಿತು. ಇದರಿಂದ ಕಾಂಗ್ರೆಸ್ ಅಧಿಕಾರ ಕಳಕೊಂಡು ಅದರ ಸ್ಥಾನದಲ್ಲಿ ಬಂದ ಸಂಯುಕ್ತ ರಂಗ ಸರಕಾರ ಈ ಬಗ್ಗೆ ಯೋಚಿಸುತ್ತಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಆ ಆರ್ಥಿಕ ನೀತಿಗಳೇ ಮುಂದುವರೆದಿವೆ. ದುಡಿಯುವ ಜನ ಈ ನೀತಿಗಳ ಮರುವಿಮರ್ಶೆಯಾಗಬೇಕು ಎಂದು ಒತ್ತಾಯಿಸುತ್ತಾರೆ. ಇಲ್ಲವಾದರೆ ತೀವ್ರ, ಸಾಮೂಹಿಕ ಹೋರಾಟಗಳು ಎದ್ದು ಬರುವುದು ಖಚಿತ. ಆದ್ದರಿಂದ ಕಾರ್ಮಿಕರ ಈ ದನಿಗೆ ಕಿವಿಗೊಡಿ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿಗಳಾದ ಡಾ.ಎಂ.ಕೆ.ಫಂದೆ ಸಂಯುಕ್ತ ರಂಗ ಸರಕಾರಕ್ಕೆ ಎಚ್ಚರ ನೀಡಿದ್ದಾರೆ. ಅವರು ಮಾರ್ಚ್ 13ರಂದು ಬೆಂಗಳೂರಿನಲ್ಲಿ ಸಿಐಟಿಯುವಿನ 7ನೇ ಕರ್ನಾಟಕ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು.

ಈಗ ಜಾಗತೀಕರಣ, ಜಾಗತಿಕ ಹಳ್ಳಿ ಮುಂತಾದ ಪದಗಳು ಬಹಳ ಕೇಳಿಬರುತ್ತಿವೆ. ಹೀಗೆಂದರೇನು? ವಿಶ್ವ ಸಂಸ್ಥೆಯ ವರದಿಯ ಪ್ರಕಾರ ಮುಂದುವರಿದ ಬಂಡವಾಳಶಾಹಿ ದೇಶಗಳ ತಲಾ ಆದಾಯ ಇತರ ದೇಶಗಳ ಜನರ ತಲಾ ಆದಾಯಕ್ಕಿಂತ 60 ಪಟ್ಟು ಹೆಚ್ಚು. ಮೂರು ದಶಕಗಳ ಹಿಂದೆ ಈ ಅಂತರ 30 ಪಟ್ಟು ಇತ್ತು. ಅಂದರೆ ಈ ಮೂರು ದಶಕಗಳಲ್ಲಿ ಅಸಮಾನತೆ ದ್ವಿಗುಣಗೊಂಡಿದೆ. ಈ ಅಸಮಾನತೆಗೆ ಅಸಮಾನ ವ್ಯಾಪಾರ ಸಂಬಂಧಗಳೇ ಕಾರಣ ಎಂದಿದೆ ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಓ)ದ ವರದಿ. 1995ರಲ್ಲಿ ಅಸ್ತಿತ್ವಕ್ಕೆ ಬಂದ ವಿಶ್ವ ವ್ಯಾಪಾರ ಸಂಘಟನೆ ಅಥವಾ ಡಬ್ಲ್ಯುಟಿಓ ಈ ಅಸಮಾನ ಸಂಬಂಧಗಳನ್ನು ಕಾನೂನುಬದ್ಧಗೊಳಿಸಿದೆ ಎಂದು ಡಾ.ಫಂದೆ ವ್ಯಂಗ್ಯವಾಡಿದರು.


"ಇದೊಂದು ಮೋಸದ ಬಜೆಟ್"

ಸಂಯುಕ್ತ ರಂಗ ಸರಕಾರದ ಆರ್ಥಿಕ ನೀತಿಗಳ ಬಗ್ಗೆ ಮಾತನಾಡುತ್ತಾ ಡಾ.ಫಂದೆ ಇತ್ತೀಚಿನ ಕೇಂದ್ರ ಬಜೆಟ್ ಬಗೆಗೆ

ಪುಟ 2 ಕ್ಕೆ

ಸಮಾನ ಕೆಲಸಕ್ಕೆ ಸಮಾನ ವೇತನಕ್ಕಾಗಿ ಹೋರಾಟ

- ವಿಮಲಾ ರಣದಿವೆ



ದುಡಿಯುವ ಮಹಿಳೆಯರಿಗೆ ನೀಡುತ್ತಿರುವ ವೇತನದಲ್ಲಿ, ಪುರುಷರಿಗೆ ಹೋಲಿಸಿದರೆ ತಾರತಮ್ಯವಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಬೀಡಿ ಉದ್ದಿಮೆಯಲ್ಲಿ ಮಹಿಳೆಯರಿಗೆ ನೀಡುವ ವೇತನ ಪುರುಷರಿಗಿಂತ ಕಡಿಮೆ ಇದೆ. ಕಾರಣ ಕೇಳಿದರೆ ಗುಣಮಟ್ಟ ಕಡಿಮೆ ಇರುತ್ತದೆ, ಆದರಿಂದಾಗಿ ಕಡಿಮೆ ವೇತನ ಎನ್ನುತ್ತಾರೆ. ಈ ತಾರತಮ್ಯವಿಲ್ಲದೆ ಕಟ್ಟಡ ಕೆಲಸ, ಅಗರಬತ್ತಿ, ಗಾರ್ಮೆಂಟ್ಸ್ ಹಾಗೂ ಕೃಷಿ ಕಾರ್ಮಿಕರಲ್ಲೂ ಲಿಂಗ ಭೇದ ತಾರಕ ಮಟ್ಟಕ್ಕೇರಿದೆ ಎಂದು ಮುಂದುವರಿದು ಮಾತನಾಡಿದ ಕಾಂ.ವಿಮಲಾ ರಣದಿವೆ ತಿಳಿಸಿದರು. ದುಡಿಯುವ ಮಹಿಳೆಯರು ಜವಾಬ್ದಾರಿಯೊಂದಿಗೆ ಸಂಘಟನೆ ಹಾಗೂ ಸಂಘಟನಾ ಸಮಿತಿಗಳಲ್ಲಿ ನಾಯಕತ್ವ ವಹಿಸಿ

ದುಡಿಯುವ ಮಹಿಳೆಯರ ಸಮಾವೇಶ

ಮಾರುಕಟ್ಟೆಯಲ್ಲಿ ಮಾತ್ರ ಪುರುಷರ ಶ್ರಮದಿಂದ, ಮಹಿಳೆಯರ ಶ್ರಮದಿಂದ ಬಂದವಸ್ತುವೆಂಬ ಬೇಧವಾಗಲೀ, ತಾರತಮ್ಯವಾಗಲಿ ಕಾಣದೆ ಒಂದೇ ಬೆಲೆಗೆ ಮಾರಾಟವಾಗಿ ಒಂದೇ ಲಾಭ ಬರುತ್ತದೆ. ಆದ್ದರಿಂದ ಹೆಚ್ಚು ಕಡಿಮೆ ಎನ್ನುವ ಈ ವಾದ ತರವಾದುದ್ದಲ್ಲ ಎಂದು ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಸಂಚಾಲಕರಾದ ಕಾಂ.ವಿಮಲಾ ರಣದಿವೆ ಹೇಳಿದ್ದಾರೆ. ಅವರು ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ಮಾರ್ಚ್ 12ರಂದು ನಡೆದ ಸಿಐಟಿಯುವಿನ ರಾಜ್ಯ ಮಟ್ಟದ ದುಡಿಯುವ ಮಹಿಳೆಯರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ದುಡಿಯುವ ಮಹಿಳೆಯರೇ ಮುಂದಾಗಿ ಕೇವಲ ಬೀಡಿ ಉದ್ದಿಮೆಯಲ್ಲಿ ಮಾತ್ರ ಪರಿಣಾಮಕಾರಿ ಬದಲಾವಣೆಗಳನ್ನು ಕರ್ನಾಟಕದ ದುಡಿಯುವ ವರ್ಗದ ಚಳುವಳಿಯಲ್ಲಿ ತರಬೇಕು ಹಾಗೂ ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಬೇಕು ಎಂದು ಕರೆ ನೀಡಿದರು.

ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರ ಕಥೆ ಇದಾದರೆ ಸಂಘಟಿತ ವಲಯವಾದ ಬ್ಯಾಂಕ್, ಎಲ್‌ಐಸಿ ಸರಕಾರಿ ಇಲಾಖೆ ಇನ್ನಿತರ ಕಡೆ ದುಡಿಯುವ

ಪುಟ 2 ಕ್ಕೆ

ಕಾರ್ಮಿಕ ವರ್ಗದ ದನಿಗೆ ಕಿವಿಗೊಡಿ

ಪುಟ 1ರಿಂದ

ಪ್ರಸ್ತಾಪಿಸದಿರಲು ಸಾಧ್ಯವಿರಲಿಲ್ಲ. ಇದೊಂದು ಮೋಸದ ಬಜೆಟ್ ಎಂದು ಅವರು ಉದ್ಗರಿಸಿದರು. ದೇಶೀ-ವಿದೇಶೀ ಹಣಕಾಸು ಬಂಡವಾಳಿಗರಿಗೆ ಅವರು ಕನಸು ಮನಸಿನಲ್ಲೂ ಎಣಿಸದ ಭಾರೀ ರಿಯಾಯ್ತಿಗಳು ದೊರೆತಿವೆ. ತಾವು ಕೇಳಿದ್ದನ್ನೆಲ್ಲಾ ಹಣಕಾಸು ಮಂತ್ರಿಗಳು ಕೊಟ್ಟಿದ್ದಾರೆ ಎಂದು ಬಂಡವಾಳಿಗರು ಸಂತಸದಿಂದ ನಲಿಯುತ್ತಿದ್ದಾರೆ. ಅತ್ತ ಬಡವರಿಗೂ ತಾನು ಬಹಳಷ್ಟು ಕೊಟ್ಟಿರುವುದಾಗಿ ಹಣಕಾಸು ಮಂತ್ರಿಗಳು ಹೇಳಿದ್ದಾರೆ. ಆದರೆ ಬಜೆಟ್ ಭಾಷಣದಲ್ಲಿ ಅವರು ಬಡವರಿಗಾಗಿ ಘೋಷಿಸಿದ ಬಹಳಷ್ಟು ರಿಯಾಯ್ತಿಗಳು ನಿಜವಾಗಿ ಬಜೆಟ್‌ನ ಲೆಕ್ಕಾಚಾರದಲ್ಲೇ ಬರುವುದಿಲ್ಲ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿಗಳು ಈ ಬಜೆಟ್‌ನ ಹಿಂದಿರುವ ಮೋಸದತ್ತ ಗಮನ ಸೆಳೆದರು.

ಕಾರ್ಮಿಕ ಸಂಘಟನೆಗಳು ಒಕ್ಕೂರಲಿನಿಂದ ಹಲವು ರಿಯಾಯ್ತಿಗಳನ್ನು ಕೇಳಿದ್ದವು. ಆದಾಯ ತೆರಿಗೆ ವಿನಾಯ್ತಿಮಿತಿಯನ್ನು 60000 ರೂ.ಗೆ ಏರಿಸಬೇಕು ಎಂದು ಕೇಳಿದ್ದವು. ಅದನ್ನು ಈಡೇರಿಸಿಲ್ಲ. ಬದಲಿಗೆ ತೆರಿಗೆ ದರಗಳನ್ನು ಇಳಿಸಲಾಗಿದೆ. ಈ ಇಳಿಕೆ ಮೇಲಿನ ಆದಾಯ ಹಂತಗಳಲ್ಲಿ ಶೇ. 10 ಆದರೆ ಕೆಳಗಿನ ಹಂತಗಳಲ್ಲಿ ಕೇವಲ ಶೇ. 5. ಇದರಿಂದ ಹೆಚ್ಚು ಪ್ರಯೋಜನವಾಗಿರುವುದು ಸಿರಿವಂತರಿಗೆ ಮಾತ್ರ. ಬೋನಸ್ ಮಿತಿಗಳನ್ನು ತೆಗೆಯಬೇಕೆಂಬ ಬೇಡಿಕೆಯನ್ನು ಪರಿಗಣನೆಗೆ ತಗೊಂಡಿಲ್ಲ. ಇ.ಎಸ್.ಐ. ಮಿತಿ ಹೆಚ್ಚಿಸಿ ಇತರ ವೈದ್ಯಕೀಯ ಸೌಲಭ್ಯಗಳಿಂದ ವಂಚಿಸಲಾಗಿದೆ.

ಜನಸಾಮಾನ್ಯರ ಸಮಸ್ಯೆಗಳಿಗೆ ಸಮಯವಿಲ್ಲ!

ಸಂಯುಕ್ತ ರಂಗದ 'ಸಮಾನ ಕನಿಷ್ಟ ಕಾರ್ಯಕ್ರಮ' ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳ ಮಾನ್ಯತೆಯ ಬಗ್ಗೆ ಹೇಳಿದೆಯಾದರೂ ಇದುವರೆಗೂ ಈ ಬಗ್ಗೆ ಮಸೂದೆಯನ್ನು ತಯಾರಿಸಿಲ್ಲ. ಆಡಳಿತದಲ್ಲಿ ಕಾರ್ಮಿಕರ ಪಾತ್ರ ಕುರಿತಾದ ಪ್ರಶ್ನೆಯಂತೂ ಹಾಗೆಯೇ ಉಳಿದಿದೆ ಎಂದು ಉದಾಹರಣೆಗಳ ಮೂಲಕ ವಿವರಿಸಿದ ಕಾ.ಫಂದೆ ಈ ಸರಕಾರಕ್ಕೆ ಬಂಡವಾಳಿಗರಿಗೆ ಅನುಕೂಲವಾಗುವ ನಿರ್ಣಯಗಳನ್ನು ಕೈಗೊಳ್ಳಲು ಯಾವ ಸಮಯದ ಅಭಾವವೂ ತಡೆಯಾಗುವುದಿಲ್ಲ. ಆದರೆ ಕಾರ್ಮಿಕರ, ಜನಸಾಮಾನ್ಯರ ಸಮಸ್ಯೆಗಳನ್ನು ಚರ್ಚಿಸಲು ಮಾತ್ರ ಸಮಯವೇ ಸಿಗುವುದಿಲ್ಲ ಎಂದು ಗೇಲಿ ಮಾಡಿದರು.

ಒಬ್ಬ ಅಮೇರಿಕನ್ ಪ್ರಾಧ್ಯಾಪಕರ ಲೆಕ್ಕಾಚಾರದ ಪ್ರಕಾರ ಭಾರತ-ಅಮೇರಿಕಾ ವ್ಯಾಪಾರ ವಹಿವಾಟಿನಲ್ಲಿ ಭಾರತ ಪ್ರತಿವರ್ಷ ಸುಮಾರು 50000 ಕೋಟಿ ರೂ.ಗಳನ್ನು ಕಳೆದುಕೊಳ್ಳುತ್ತಿದೆ. ಆದರೆ ನಮ್ಮ ಹಣಕಾಸು ಮಂತ್ರಿಗಳು ಇದನ್ನು ತಡೆದು ಈ ಅಪಾರ ಹಣವನ್ನು ಜನಸಾಮಾನ್ಯರ ಒಳಿತಿನ ಯೋಜನೆಗಳಲ್ಲಿ ಹೂಡುವ ಬಗ್ಗೆ ಯೋಚಿಸುವ ಬದಲು ಈ ಮೋಸವನ್ನು ಕಾನೂನುಬದ್ಧಗೊಳಿಸಲು ವಿದೇಶೀ ವಿನಿಮಯ ತಡೆಯುವ ಶಾಸನ(ಫೆರಾ)ವನ್ನೇ ಬದಲಿಸಲು, ನಿಜವಾಗಿ ಹೇಳಬೇಕಾದರೆ ರದ್ದು ಮಾಡಲು ಮುಂದಾಗಿದ್ದಾರೆ ಎಂದು ಡಾ.ಫಂದೆ ಖೇದ ವ್ಯಕ್ತಪಡಿಸಿದರು. ಈಗಾಗಲೇ ಚಂದ್ರಾಸ್ವಾಮಿಯಂತವರು ಫೆರಾ ಉಲ್ಲಂಘಿಸಿದ ಉದಾಹರಣೆಗಳು ಬೆಳಕಿಗೆ ಬಂದಿವೆ. ಆದರೆ ಈಗ "ಧಾಳಿ, ರಾಜ್ಯ"ವಿಲ್ಲ ಅಂದರೆ ಹಣವಂತರ ಮನೆಗಳಿಗೆ ಧಾಳಿ ನಡೆಸುವುದಿಲ್ಲ ಎಂಬ ವಚನ ನೀಡಿ ಹಣಕಾಸು ಮಂತ್ರಿಗಳು ಫೆರಾ ಉಲ್ಲಂಘನೆಗೆ ಪೂರ್ಣ ಸ್ವಾತಂತ್ರ್ಯನೀಡಿದ್ದಾರೆ, ಈ ಮೂಲಕ ತಪ್ಪು ಸಂದೇಶ ನೀಡಿದ್ದಾರೆ ಎಂದು ಫಂದೆಯವರು ಟೀಕಿಸಿದರು.

ಬೇರೆ ದೇಶಗಳ ಉದ್ಯಮಿಗಳಿಗಾಗಿ ನಮ್ಮ ಉದ್ದಿಮೆಗಳ ನಾಶ!

ಆಮದು ಸುಂಕಗಳನ್ನು ಕಡಿತ ಮಾಡಿರುವ ಬಗ್ಗೆ ವಿಶ್ಲೇಷಿಸುತ್ತಾ ಇದರಿಂದ ನಮ್ಮ ಉಕ್ಕು, ರಾಸಾಯನಿಕಗಳು, ಪ್ಲಾಸ್ಟಿಕ್, ಪೈಂಟ್, ಇಲೆಕ್ಟ್ರಾನಿಕ್ಸ್, ಪೇಪರ್ ಉದ್ದಿಮೆಗಳು ನಾಶವಾಗುತ್ತವೆ ಎಂದ ಡಾ.ಫಂದೆ ಚಿದಂಬರಂರವರು ನಮ್ಮ ಉದ್ದಿಮೆಗಳನ್ನು ನಾಶ ಮಾಡುತ್ತಾ ಬೇರೆ ದೇಶಗಳ ಉದ್ದಿಮೆಗಳನ್ನು ಬೆಳೆಸಲು ಕಾತುರರಾಗಿದ್ದಾರೆ ಎಂದು ಡಾ.ಫಂದೆ ಟೀಕಿಸಿದರು.

ಕಾರ್ಮಿಕ ಸಂಘಗಳು ಈ ಎಲ್ಲದರ ಬಗ್ಗೆ ಯೋಚಿಸಬೇಕಾಗಿದೆ, ಈ ನೀತಿಗಳ ಪರಿಣಾಮಗಳ ಬಗ್ಗೆ ಚಿಂತಿಸಬೇಕಾಗಿದೆ. "ನಾವು ಕಾರ್ಮಿಕ ವರ್ಗಕ್ಕೆ ರಾಜಕೀಯ ಹೇಳಿ ಕೊಡುತ್ತೇವೆ" ಎಂದು ಆಪಾದಿಸಲಾಗುತ್ತಿದೆ ಎಂದ ಡಾ.ಫಂದೆ "ಹೌದು, ನಾವು ರಾಜಕೀಯ ಹೇಳಿಕೊಡುತ್ತೇವೆ. ರಾಜಕೀಯವನ್ನು ಜಯಲಲಿತಾಗಳಿಗೆ, ಮಾಯಾವತಿಗಳಿಗೆ ಬಿಟ್ಟುಕೊಡಬೇಕು ಎಂದು ಇವರು ಬಯಸುತ್ತಾರೆಯೇ?" ಎಂದು ಪ್ರಶ್ನಿಸಿದರು. ನಾವು ನಮ್ಮ ರೊಟ್ಟಿ-ಬಟ್ಟೆಗಾಗಿ ಮಾತ್ರವಲ್ಲ, ಸಮಾಜಕ್ಕಾಗಿಯೂ ಹೋರಾಡುತ್ತೇವೆ ಎಂದು ಅವರು ಕಾರ್ಮಿಕ ವರ್ಗದ ರಾಜಕೀಯವನ್ನು ಸ್ಪಷ್ಟಪಡಿಸಿದರು.

ದೇಶದ ಪ್ರಗತಿಯಾಗಬೇಕಾದರೆ, ಸಮೃದ್ಧಿ ಬರಬೇಕಾದರೆ ಕಾರ್ಮಿಕರು ಕೆಲಸ ಕಳಕೊಳ್ಳಬೇಕು ಎಂಬ ವಿಚಿತ್ರ ತತ್ವವನ್ನು ಪ್ರತಿಪಾದಿಸಲಾಗುತ್ತದೆ. ಈ ತತ್ವದ ಪ್ರಕಾರ ಕಾರ್ಮಿಕ ವರ್ಗದ ಮೇಲೆ ಧಾಳಿಗಳು ಹೆಚ್ಚುತ್ತವೆ. ಇದನ್ನು ಎದುರಿಸಿ ನಿಲ್ಲಬೇಕು. ಇದಕ್ಕಾಗಿ ಐಕ್ಯತೆ ಬೇಕು ಎಂದು ಡಾ.ಫಂದೆ ಕರೆ ನೀಡಿದರು. ಜಾಗತೀಕರಣದ ವಿರುದ್ಧ ಭಾರತದ ಕಾರ್ಮಿಕರು ಮಾತ್ರವಲ್ಲ ವಿಶ್ವದ ಎಲ್ಲೆಡೆ ಕಾರ್ಮಿಕರು ಹೋರಾಟ ನಡೆಸುತ್ತಿದ್ದಾರೆ ಎಂದು ನೆನಪಿಸಿದ ಡಾ.ಫಂದೆ ಇತ್ತೀಚೆಗೆ ಕಲ್ಕತ್ತೆಯಲ್ಲಿ ನಡೆದ ಹಿಂದೂ ಮಹಾಸಾಗರದ ದೇಶಗಳ ಕಾರ್ಮಿಕ ಸಂಘಗಳ ಸಮ್ಮೇಳನದ ಅನುಭವಗಳನ್ನು ವಿವರಿಸಿದರು. ಏಶ್ಯಾದ, ಆಫ್ರಿಕಾದ ದೇಶಗಳೇ, ಮೂರನೇ ಜಗತ್ತಿನ ದೇಶಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಯಜಮಾನಿಕೆಗೆ ಸವಾಲು ಒಡ್ಡಲಾಗುತ್ತಿದೆ ಎಂದರು. ಬಂಡವಾಳಶಾಹಿ ದಾರಿಯ 'ಆದರ್ಶ'ಯೆನಿಸಿಕೊಂಡ ದಕ್ಷಿಣ ಕೊರಿಯಾದ ಕಾರ್ಮಿಕ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು, ಅಲ್ಲಿಯ ದುಡಿಯುವ ಜನರ ಆಕ್ರೋಶವನ್ನು ಎತ್ತಿ ತೋರಿದರು. ಮುಂದಿನ ಆಗಸ್ಟ್‌ನಲ್ಲಿ ಅಮೇರಿಕಾದಿಂದ ಕೇವಲ 80 ಕಿ.ಮೀ. ದೂರದಲ್ಲಿ ಅದರ ಹಿತ್ತಲಿನಲ್ಲೇ ಅಂದರೆ ಕ್ಯೂಬಾದ ರಾಜಧಾನಿ ಹವಾನಾದಲ್ಲಿ ನಡೆಯಲಿರುವ ಸಮ್ಮೇಳನದ ಬಗ್ಗೆಯೂ ಪ್ರಸ್ತಾಪಿಸುತ್ತಾ ಇದೀಗ ಹೊಸ ಜಾಗತಿಕ ಸನ್ನಿವೇಶ ಎಂದರು.

ಕರ್ನಾಟಕದಲ್ಲಿ ಅವಕಾಶ

ಕರ್ನಾಟಕದಲ್ಲಿ ಕಾರ್ಮಿಕ ಆಂದೋಲನದ ಬೆಳವಣಿಗೆಗೆ ಪೂರಕವಾದ ವಾತಾವರಣವಿದೆ, ಅದನ್ನು ಬಳಸಿಕೊಳ್ಳಬೇಕು, ಸಿಐಟಿಯುವನ್ನು ದಮನ ಮಾಡಬೇಕು ಎಂದು ರಾಜ್ಯ ಸರಕಾರ ದೃಢ ನಿರ್ಧಾರ ಮಾಡಿದಂತಿದ್ದರೂ ಜಗ್ಗದೆ ಈ ಸಮ್ಮೇಳನದ ಉದ್ಘಾಟನೆ ಸಮಾರಂಭವನ್ನು ವರ್ಣರಂಜಿತವಾಗಿ ನಡೆಸಲು ಸಾಧ್ಯವಾಗಿರುವುದಕ್ಕೆ ಕರ್ನಾಟಕದ ಕಾರ್ಮಿಕ ಸಂಗಾತಿಗಳನ್ನು ಅವರು ಅಭಿನಂದಿಸಿದರು. ಮೂವರು ಹುತಾತ್ಮರ ಬಲಿದಾನ ವ್ಯರ್ಥವಾಗುವುದಿಲ್ಲ ಎಂದು ಅವರು ಹೇಳಿದರು.

ಒಂದು ತಿಂಗಳ ಹಿಂದೆ ನಗರದಿಂದ 28 ಕಿ.ಮೀ. ದೂರದ ಹೆಜ್ಜಾಲದಲ್ಲಿ ಮಾಲೀಕರ ದಮನಕ್ಕೆ ಪೋಲೀಸರ ಗುಂಡುಗಳಿಗೆ ಬಲಿಯಾದ ಮೂವರ ನೆನಪಿನ ಹುತಾತ್ಮ ಜ್ಯೋತಿಯನ್ನು ಉದ್ಘಾಟನಾ ಸಮಾರಂಭ ನಡೆಯಲಿದ್ದ ಪುರಭವನದಲ್ಲಿ ಬರಮಾಡಿಕೊಂಡ ಸಿಐಟಿಯುವಿನ ಕೆಂಬಾವುಟದ ಆರೋಹಣ ಕೆಂಪು ಸ್ವಯಂಸೇವಕರ ಗೌರವ ರಕ್ಷೆ ಹಾಗೂ ಹುತಾತ್ಮರಿಗೆ ಶ್ರದ್ಧಾಂಜಲಿ ಹಾಗೂ ಕ್ರಾಂತಿಗೀತೆಗಳೊಂದಿಗೆ ಉದ್ಘಾಟನಾ ಸಮಾರಂಭ ಆರಂಭವಾಯಿತು. ಸಿ.ನಂಜುಂಡಪ್ಪ ಸಂತಾಪ ನಿರ್ಣಯಗಳನ್ನು ಮಂಡಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಪಿ.ಜಗನ್ನಾಥ್ ಬೆಂಗಳೂರಿನಲ್ಲಿ ನಡೆಯುತ್ತಿರುವ ಈ ಸಮ್ಮೇಳನದ ಮಹತ್ವದ ಬಗ್ಗೆ ಹೇಳುತ್ತಾ ಪ್ರತಿನಿಧಿಗಳನ್ನು ಹಾಗೂ ಇತರ ಸಭಿಕರನ್ನು ಸ್ವಾಗತಿಸಿದರು. ಹಲವು ಸೋದರ ಕಾರ್ಮಿಕ ಸಂಘಟನೆಗಳ ಮುಖಂಡರು ಅಭಿನಂದನಾ ಸಂದೇಶದ ನಂತರ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ವಿ.ಶ್ರೀನಿವಾಸನ್‌ರ ವಂದನಾರ್ಪಣೆ ಮಾಡಿದರು. □





ಸಮಾನ ಕೆಲಸಕ್ಕೆ .....

ಪುಟ 1ರಿಂದ

ಮಹಿಳೆಯರು ಸಮರ್ಪಕವಾದ ಸೌಲಭ್ಯಗಳಿಲ್ಲದೆ ಸಂಕಷ್ಟಕ್ಕೊಳಗಾಗಿರುವಾಗಲೇ ಜಾಗತೀಕರಣದಿಂದಾಗಿ ಹೊಸ ಹೊಸ ಸವಾಲುಗಳನ್ನು ಇಡೀ ದುಡಿಯುವ ವರ್ಗ ಎದುರಿಸುತ್ತಿರುವ ಸಂದರ್ಭದಲ್ಲಿ ದುಡಿಯುವ ಮಹಿಳೆಯರು ಉದ್ಯೋಗ ಕಡಿತದಂತಹ ಸಮಸ್ಯೆಗಳನ್ನು ಎದುರಿಸಬೇಕಾಗಿದೆ, ಈ ಕಡಿತ ಮೊದಲು ಮಹಿಳೆಯರನ್ನು ಬಾಧಿಸುತ್ತಿದೆ ಎಂದು ಎಚ್ಚರಿಸಿದರು.

ದೇಶದ ಭೂಮಾಲಕ, ಪಾಳೇಗಾರಿ ವ್ಯವಸ್ಥೆ ಬದಲಾಗದೆ ಮಹಿಳಾ ಮೀಸಲಾತಿಯಾಗಲಿ, ಸಮಾನತೆಯಾಗಲಿ ಲೈಂಗಿಕ ತಾರತಮ್ಯವಾಗಲಿ ಬದಲಾಗದು ಎನ್ನುವುದು ಅವರ ಅನುಭವದ ಅಭಿಪ್ರಾಯವಾಗಿತ್ತು.

ಜಾತಿ-ಧರ್ಮದಿಂದ ವರ್ಗಕ್ಕೆ

ಸಮಾವೇಶದಲ್ಲಿ ಪಾಲ್ಗೊಂಡಿದ್ದ ತಮಿಳುನಾಡಿನ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ರಾಜೇಶ್ವರಿ ಮಾತನಾಡಿ ಶೇ. 25ರಷ್ಟು ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜೆ, ಪಿಎಫ್, ಇಎಸ್ಐ ಮತ್ತಿತರ ಮೂಲಭೂತ ಸೌಲಭ್ಯ ಗಳನ್ನು ದೊರಕಿಸಿ ಕೊಡಲು ಹೋರಾಡು ವುದರ ಜೊತೆಗೆ, ಮಹಿಳೆಯರ ಸಮಸ್ಯೆಗಳ ಪರವಾಗಿ ಕೆಲಸ ಮಾಡುವ ಜನಪ್ರತಿನಿಧಿ ಗಳನ್ನು ನಾವು ಆಯ್ಕೆ ಮಾಡಬೇಕಿದೆ. ಮನಸ್ಸಿದ್ದರೆ ಮಾರ್ಗ ಎಂಬ ರೀತಿಯಲ್ಲಿ ಮಹಿಳೆಯರು ಯಾವ ಕೆಲಸವನ್ನಾದರೂ ಸಾಧಿಸಬಲ್ಲರು. ಜಾತಿ, ಧರ್ಮ, ಭಾಷೆ, ಗಡಿ ಹೆಸರಿನಲ್ಲಿ ಸಂಘಟನೆಯನ್ನು ಭಾಗ ಮಾಡುವವರನ್ನು ಪ್ರಭಲವಾಗಿ ವಿರೋಧಿಸುವುದರ ಜೊತೆಗೆ ಒಂದು ಆರೋಗ್ಯ ಸಮಾಜ ನಿರ್ಮಿಸಲು ಸಾಧ್ಯವೆಂದರು.

ಹೆಣ್ಣು ಮಕ್ಕಳಲ್ಲಿ ಮೌಢ್ಯವನ್ನು ಬೆಳೆಸಲು ಪುರುಷರು ಪ್ರಯತ್ನಿಸುವ ಜೊತೆಯಲ್ಲೇ ಕೆಲವು ಉದ್ಯೋಗಕ್ಕೆ ಮಹಿಳೆಯರು ಸೂಕ್ತವಲ್ಲ ಎಂಬ ಭಾವನೆ ಇದೆ. ಇದನ್ನು ಮಹಿಳೆಯರು ಮುಂದೆ ಬಂದು ಹೋಗಲಾಡಿಸಬೇಕೆಂದು ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ.ಸೂರ್ಯನಾರಾಯಣರಾವ್ ತಿಳಿಸಿದರು.

ಈ ಸಮಾವೇಶದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್.ವಿಮಲಾ ಮುಂತಾದವರು ಮಾತನಾಡಿದರು. ಕರ್ನಾಟಕ ರಾಜ್ಯ ಸಮನ್ವಯ ಸಮಿತಿಯ ಎಸ್.ವರಲಕ್ಷ್ಮಿ ವರದಿ ಮಂಡಿಸಿದರು. ಜಿಐಸಿ ಉದ್ಯೋಗಿ ವಿಜಯ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು.

ಉದ್ದೇಶ ಮತ್ತು ಗುರಿ

ದುಡಿಯುವ ಮಹಿಳೆಯರ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರವನ್ನು ಕಂಡು ಹಿಡಿಯುವ ನಿಟ್ಟಿನಲ್ಲಿ ಸಿಐಟಿಯು 1979ರಲ್ಲಿ ಮದ್ರಾಸ್‌ನಲ್ಲಿ ಪ್ರಥಮ ಬಾರಿಗೆ ದುಡಿಯುವ ಮಹಿಳೆಯರನ್ನು ಸಮಾವೇಶಗೊಳಿಸಿತು. ಜನಸಂಖ್ಯೆಯ ಹಾಗೂ ದುಡಿತದ ಅರ್ಧಕ್ಕಿಂತಲೂ ಹೆಚ್ಚು ಮಹಿಳೆಯರೇ ಇದ್ದರೂ ಸಮಾಜದಲ್ಲಿ ತಾವು ದುಡಿಯುವ ಕ್ಷೇತ್ರಗಳಲ್ಲಿ ಸಂಘಟಿತರಾಗಿರುವ ಯೂನಿಯನ್‌ಗಳಲ್ಲಿ ಮಹಿಳೆಯರ ಪಾತ್ರ ನಗಣ್ಯವಾಗಿರುವುದನ್ನು ಗುರುತಿಸಿ ಅವರು ಎದುರಿಸುತ್ತಿರುವ ಸಮಸ್ಯೆಗಳಾದ ಲಿಂಗ ತಾರತಮ್ಯ, ಉದ್ಯೋಗದಲ್ಲಿ ಸಮಾನ ಅವಕಾಶ ಇಲ್ಲದಿರುವುದು ದೊಡ್ಡ ದೊಡ್ಡ ಕಂಪನಿಗಳಲ್ಲಿ ಅರ್ಹತೆ ಇದ್ದರೂ ಉನ್ನತ ಹುದ್ದೆಗಳಿಗೆ ಆಯ್ಕೆ ಮಾಡದೆ ಇರುವುದು, ಕೆಲಸ ಮಾಡುವ ಹಾಗೂ ಸಮಾಜದಲ್ಲಿ ಲೈಂಗಿಕ ಕಿರುಕುಳ ಅನುಭವಿಸುವುದು, ಕುಟುಂಬದಲ್ಲಿ ಮಹಿಳೆಯ ಆದಾಯವನ್ನು ಪೂರಕ ವರಮಾನವೆಂದು ಪರಿಗಣಿಸಿ 2ನೇ ದರ್ಜೆ ಪ್ರಜೆಯಾಗಿ ಕಾಣುವುದು ಇತ್ಯಾದಿಗಳ ಜೊತೆಯಲ್ಲೇ, ತಾವು ಸಂಘಟಿತವಾಗಿರುವ ಯೂನಿಯನ್‌ಗಳಲ್ಲಿ ಪಾಳೇಗಾರಿ ಮನೋಭಾವಗಳ ವಿರುದ್ಧ ಮಹಿಳೆಯರನ್ನು ಸಂಘಟಿಸಿ ಅವರನ್ನು ದಿಟ್ಟ ಹೆಜ್ಜೆಗಳ ಮೂಲಕ ಮುಂದೊಯ್ಯಲು ಸಿಐಟಿಯು ನಿರ್ಧರಿಸಿತು.

ಈ ಹಿನ್ನೆಲೆಯಲ್ಲಿ ಮಾರ್ಚ್ 12ರಂದು ನಡೆದ ಕರ್ನಾಟಕ ರಾಜ್ಯದ 3ನೇ ದುಡಿಯುವ ಮಹಿಳೆಯರ ಸಮಾವೇಶಕ್ಕೆ ರಾಜ್ಯದ ನಾನಾ ಭಾಗಗಳಿಂದ ಅಸಂಘಟಿತ ವಲಯವಾದ ಬೀಡಿ, ಗಾರ್ಮೆಂಟ್ಸ್, ಅಗರಬತ್ತಿ, ಅಂಗನವಾಡಿ, ನೀರಾವರಿ ಇಲಾಖೆ, ತೋಟಗಾರಿಕೆ ಮತ್ತು ಕೃಷಿ ಕೂಲಿಕಾರರ ಜೊತೆಗೆ ಸಂಘಟಿತ ವಲಯವಾದ ಬ್ಯಾಂಕ್, ಎಲ್‌ಐಸಿ, ಆರೋಗ್ಯ ಇಲಾಖೆ, ಸಾರ್ವಜನಿಕ ಉದ್ದಿಮೆ, ಸರಕಾರಿ ನೌಕರರು, ನ್ಯಾಯಾಂಗ ಇಲಾಖೆ ಮತ್ತು ಪತ್ರಿಕೋದ್ಯಮ ಸೇರಿದಂತೆ 17 ವಿವಿಧ ರಂಗಗಳಲ್ಲಿ ದುಡಿಯುವ ನೂರಾರು ಮಹಿಳೆಯರು ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದರು.

ಎಲ್ಲಾ ರಂಗಗಳ ಮಹಿಳೆಯರು ತಮ್ಮ ಸಮಸ್ಯೆಗಳಾದ ಸಮಾನ ಕೆಲಸಕ್ಕೆ ಸಮಾನ ವೇತನ, ಇಎಸ್ಐ ಮತ್ತು ಪಿಎಫ್, ಬೋನಸ್ ಇಲ್ಲದೆ ಇರುವುದು, ಉದ್ಯೋಗದ ಅಸ್ಥಿರತೆ, ಓವರ್ ಟೈಮ್ ಕೆಲಸಕ್ಕೆ ಹೆಚ್ಚಿನ ಸಂಬಳ ಇಲ್ಲದೆ ಇರುವುದು, ಶಿಶುಪಾಲನಾ ಕೇಂದ್ರಗಳು ಹಾಗೂ ಲೈಂಗಿಕಕಿರುಕುಳಗಳಬಗ್ಗೆ ಗಂಭೀರವಾಗಿ ಚರ್ಚಿಸಿ ಠರಾವು ತೀರ್ಮಾನಗಳನ್ನು ಸಮಾವೇಶವು ಕೈಗೊಂಡಿತು.

ನಿರ್ಣಯಗಳು

ಶಾಸನ ಸಭೆಗಳಲ್ಲಿ ಶೇ. 33 ಮೀಸಲಾತಿ, ಅಸಂಘಟಿತ ವಲಯದ ಕಾರ್ಮಿಕರಿಗೆ ಕನಿಷ್ಟ ಕೂಲಿ ನಿಗದಿಪಡಿಸುವುದು, 5ನೇ ವೇತನ ಆಯೋಗದ ಮಹಿಳಾ ವಿರೋಧಿ ದೋಷಪೂರಿತ ವಿಚಾರಗಳನ್ನು ಕೈಬಿಡುವುದು, ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸುವುದು, ವಿಶ್ರಾಂತಿ ಕೊಠಡಿ, ಶೌಚಾಲಯ, ಕುಡಿಯುವ ನೀರು, ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ, ಲೈಂಗಿಕ ಕಿರುಕುಳ ತಪ್ಪಿಸುವುದು ಮುಂತಾದ ನಿರ್ಣಯಗಳನ್ನು ಸಮಾವೇಶ ಕೈಗೊಂಡಿತು.

ನೂತನ ಸಮನ್ವಯ ಸಮಿತಿ

ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕಿಯಾಗಿ ಎಸ್.ವರಲಕ್ಷ್ಮಿ ಸದಸ್ಯರುಗಳಾಗಿ ವಿಜಯಾಮೂರ್ತಿ, ಲಲಿತಾ ಶೈಣೈ, ಕೆ.ಎಸ್.ವಿಮಲಾ, ಪದ್ಮಾವತಿ ಶೈಣೈ, ಪದ್ಮಾವತಿ, ರಮಣಿ, ಎನ್.ಪ್ರಭಾವತಿ, ಭಾರತಿ, ಲೀಲಾವತಿ, ಯಶೋಧ, ಖುರ್ಷಿದಾ ಬೇಗಂ, ರಾಧ, ಗೌರಿ, ಸಂತಾನಲಕ್ಷ್ಮಿ ಸುಜಾತ, ಉಮಾ, ಅಶ್ವಿನಿ, ಗೀತಾ ಮತ್ತು ಷಹನಾಜ್ ಆಯ್ಕೆಗೊಂಡಿದ್ದಾರೆ. □

ಪ್ಲಾಂಟೇಷನ್ ಕಾರ್ಮಿಕರ ಸಂಘಟನೆಯ ಬೆಳವಣಿಗೆಗೆ ಐದನೆಯ ಸಮ್ಮೇಳನದ ಕರೆ

ಕರ್ನಾಟಕ ರಾಜ್ಯ ಪ್ಲಾಂಟೇಷನ್ ಕಾರ್ಮಿಕರ ಒಕ್ಕೂಟದ 5ನೇ ಸಮ್ಮೇಳನವು 1997 ರ ಫೆಬ್ರವರಿ 15 ಮತ್ತು 16 ರಂದು ಕೊಡಗಿನ ಸಿದ್ದಾಪುರದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಸಿ.ನಂಜುಂಡಪ್ಪನವರು ವಹಿಸಿದ್ದರು.

ಸಮ್ಮೇಳನದಲ್ಲಿ ರಾಜ್ಯದ ಹಾಸನ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳಿಂದ 24 ಮಹಿಳೆಯರನ್ನೊಳಗೊಂಡು 133 ಪ್ರತಿನಿಧಿಗಳು ಭಾಗವಹಿಸಿದ್ದರು. ಆಲ್ ಇಂಡಿಯಾ ಪ್ಲಾಂಟೇಷನ್ ವರ್ಕರ್ಸ್ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ ಪಿ.ಲಾಲಾಜಿ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಾ ಕರ್ನಾಟಕದಲ್ಲಿ ಸಿಐಟಿಯು ನೇತೃತ್ವದ ಸಂಘಟನೆಯನ್ನು ಬಲಿಷ್ಠಗೊಳಿಸಿದರೆ ಮಾತ್ರ ಕಾರ್ಮಿಕರು ತಮ್ಮ ಸಂಬಳ ಸೌಲಭ್ಯಗಳನ್ನು ಕೇರಳದ ತೋಡ ಕಾರ್ಮಿಕರು ಪಡೆಯುವಷ್ಟು ಪಡೆಯಲು ಸಾಧ್ಯವೆಂದು ತಿಳಿಸಿದರು.

ಎಐಪಿಡಬ್ಲ್ಯೂಎಫ್ ಕಾರ್ಯದರ್ಶಿ ಜೆ.ಹೇಮಚಂದ್ರನ್ ಕರ್ನಾಟಕದಲ್ಲಿ ಸಿಐಟಿಯು ಸಂಘಟನೆಯನ್ನು ತೋಟಕಾರ್ಮಿಕರ ಮಧ್ಯೆ ಬಲಪಡಿಸಬೇಕಾದ ಅಗತ್ಯವನ್ನು ತಿಳಿಸಿ ಮಾತನಾಡಿದರು.

ಕಳೆದ 6 ವರ್ಷಗಳಲ್ಲಿ ತಮ್ಮ ಸೀಮಿತ ಶಕ್ತಿಯೊಳಗೆ ಕರ್ನಾಟಕ ರಾಜ್ಯ ಪ್ಲಾಂಟೇಷನ್ ಕಾರ್ಮಿಕರ ಒಕ್ಕೂಟದ ನೇತೃತ್ವದಲ್ಲಿ ರಾಜ್ಯದ ಪ್ಲಾಂಟೇಷನ್ ಕಾರ್ಮಿಕರು ತಮ್ಮ ಕನಿಷ್ಠ ವೇತನದ ಹೆಚ್ಚಳಕ್ಕೋಸ್ಕರ ವಿವಿಧ ಹಂತಗಳಲ್ಲಿ ನಡೆಸಿದ ಮುಷ್ಕರಗಳು, ನಾನಾ ರೀತಿಯ ಚಳುವಳಿಗಳಲ್ಲದೆ, ಪಿ.ವಿ.ನರಸಿಂಹರಾವ್ ಸರಕಾರದ ಅಪಾಯಕಾರಿ ಹೊಸ ಆರ್ಥಿಕ ಹಾಗೂ ಕೈಗಾರಿಕಾ ನೀತಿಗಳ ವಿರುದ್ಧ ಹೊಸ ಪೆನ್ಷನ್ ಯೋಜನೆಯಿಂದ ಕಾರ್ಮಿಕರಿಗಾಗುವ ಅಪಾರ ಅನ್ಯಾಯದ ವಿರುದ್ಧ ಸಮರಧೀರ ಹೋರಾಟಗಳನ್ನು ಸಂಘಟಿಸಿದುದು, ಕೋಮು ಸೌಹಾರ್ದತೆಗಾಗಿ ಹಾಕಿಕೊಂಡ ಅನೇಕ ಕಾರ್ಯಕ್ರಮಗಳ ಬಗ್ಗೆ ವಿವರಿಸಿ, ಸಂಘಟಣೆಯನ್ನು ರಾಜ್ಯದಲ್ಲಿ ಮತ್ತಷ್ಟು ಬಲಿಷ್ಟಗೊಳಿಸಲು ಹಲವಾರು ಸೂಚನೆಗಳನ್ನು ಇತ್ತು ವರದಿಯನ್ನು ಒಕ್ಕೂಟದ ಕಾರ್ಯದರ್ಶಿ ವಿ.ಸುಕುಮಾರ್ ಮಾಡಿಸಿದರು.

18 ಪ್ರತಿನಿಧಿಗಳು ವರದಿಯನ್ನು ಚರ್ಚಿಸಿದರು. ತಮ್ಮ ತೋಟಗಳಲ್ಲಿ ಕಾನೂನಿನ ವಿವಿಧ ಸವಲತ್ತುಗಳನ್ನು ನಿರಾಕರಿಸುವುದು, ಸಂಘಟಿತರಾದಾಗ ಆಗುವ ತೋಟ ಮಾಲೀಕರ ಕಿರುಕುಳವನ್ನು ವಿವರಿಸಿದ ಪ್ರತಿನಿಧಿಗಳು ಸಿಐಟಿಯು ಸಂಘಟನೆಯನ್ನು ಬಲಿಷ್ಟ ಗೊಳಿಸುವುದೇ ಇದಕ್ಕೆ ಪರಿಹಾರ ಮಾರ್ಗ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಇತ್ತೀಚಿಗೆ ಬೆಂಗಳೂರಿನ ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಕಾರ್ಮಿಕರ ಮೇಲೆ ಗೋಳೀಬಾರು ಮಾಡಿ ಮೂವರು ಅಮಾಯಕರು ಸಾವಿಗೀಡಾದುದರ ವಿರುದ್ಧ ಮತ್ತು ಹೋರಾಟಕ್ಕೆ ನಾಯಕತ್ವ ಕೊಡುತ್ತಿದ್ದ ಸಿಐಟಿಯು ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ರನ್ನೊಳಗೊಂಡು 16 ನಿರಪರಾಧಿಗಳ ಮೇಲೆ ಸುಳ್ಳು ಕೇಸು ಹಾಕಿ ಜೈಲಿನಲ್ಲಿಟ್ಟಿದುದ್ದನ್ನು ಖಂಡಿಸಿ ನಿರ್ಣಯುವನ್ನು ಸಮ್ಮೇಳನವು ಅಂಗೀಕರಿಸಿತು.

ತೋಟ ಕಾರ್ಮಿಕರಿಗೆ ರಾಷ್ಟ್ರೀಯ ವೇತನವಾಗಿ ತಿಂಗಳಿಗೆ ರೂ. 1500 ನಿಗದಿ ಮಾಡಬೇಕು, ಸೇವಾ ಪರಿಹಾರವನ್ನು 15 ದಿನಕ್ಕೆ ಬದಲಾಗಿ 30 ದಿನಕ್ಕೆ ಹೆಚ್ಚಿಸಿ ಕಾನೂನು ಮಾಡಬೇಕು. ನಿವೃತ್ತ ಕಾರ್ಮಿಕರಿಗೆ ಪೆನ್ಷನ್ ಮೂರನೇಯ ಸೌಲಭ್ಯವಾಗಿ ಕೊಡುವಂತೆ ಪೆನ್ಶನ್ ಯೋಜನೆಯನ್ನು ತಿದ್ದುಪಡಿ ಮಾಡಬೇಕು ಎಂಬಿತ್ಯಾದಿ 21 ಬೇಡಿಕೆಗಳನ್ನು ಮುಂದಿಟ್ಟು ತೋಟ ಕಾರ್ಮಿಕರ ಚಳುವಳಿಗೆ ಕರೆಕೊಡುವ ತೀರ್ಮಾನವನ್ನು ಸಮ್ಮೇಳನವು ಕೈಗೊಂಡಿತು.

ಸಮ್ಮೇಳನವು ಮುಂದಿನ ಅವಧಿಗೆ ಸಿ.ನಂಜುಂಡಪ್ಪನವರನ್ನು ಅಧ್ಯಕ್ಷರನ್ನಾಗಿ, ಡಾ|| ಎಂ.ಆರ್.ಅಸ್ರಣನವರನ್ನು ಉಪಾಧ್ಯಕ್ಷರನ್ನಾಗಿಯೂ, ವಿ.ಸುಕುಮಾರ್ ಅವರನ್ನು ಕಾರ್ಯದರ್ಶಿಯಾಗಿಯೂ, ಎನ್.ಡಿ.ಕುಟ್ಟಪ್ಪನವರನ್ನು ಸಹಕಾರ್ಯದರ್ಶಿಯನ್ನಾಗಿಯೂ, ಎಚ್.ಎಂ.ಕಾಳಯ್ಯನವರನ್ನು ಕೋಶಾಧಿಕಾರಿಯನ್ನಾಗಿಯೂ, ವಿ.ವೀರಸ್ವಾಮಿ, ಪಿ.ಟಿ.ಫಿಲಿಪ್, ಆರ್.ಮಾಧವ, ಅಯ್ಯಪ್ಪ, ಸುಶೀಲ, ಮೀನಾಕ್ಷಿ, ರಾಘು ಶೆಟ್ಟಿ, ಪಿ.ಕೃಷ್ಣಮೂರ್ತಿ ಹಾಗೂ ಎಂ.ಸುಂದರ ಇವರುಗಳನ್ನು ರಾಜ್ಯ ಸಮಿತಿಯ ಸದಸ್ಯರುಗಳನ್ನಾಗಿ ಸಮ್ಮೇಳನವು ಸರ್ವಾನುಮತದಿಂದ ಚುನಾಯಿಸಿತು.

ಕೊನೆಯಲ್ಲಿ ಅಧ್ಯಕ್ಷ ಕಾ|| ಸಿ.ನಂಜುಂಡಪ್ಪನವರು ಸಮ್ಮೇಳನದ ತೀರ್ಮಾನಗಳನ್ನು ಕಾರ್ಯಗತಗೊಳಿಸಿ ರಾಜ್ಯದಲ್ಲಿ ಸಂಘಟನೆಯನ್ನು ಬಲಿಷ್ಠಗೊಳಿಸಲು ಕರ ನೀಡಿದರು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ|| ಐ.ಆರ್.ಅಸ್ರಣ್ಣ ನವರು ಸ್ವಾಗತಿಸಿ, ಕೊನೆಯಲ್ಲಿ ಎಚ್.ಎಂ.ಕಾಳಯ್ಯ ವಂದಿಸಿದರು.

ರಾಜ್ಯದ ವಿವಿಧ ತೋಟಗಳಿಂದ ಬಂದ ಕಾರ್ಮಿಕರ ಬೃಹತ್ ಮೆರವಣಿಗೆಯು ಸಿದ್ದಾಪುರದ ಮುಖ್ಯ ಬೀದಿಗಳಲ್ಲಿ ವರ್ಣರಂಜಿತವಾಗಿ ಹಾಗೂ ತಮ್ಮ ಬೇಡಿಕೆಗಳ ಘೋಷಣೆಗಳನ್ನು ಕೂಗುತ್ತಾ ಬಸ್ ನಿಲ್ದಾಣದ ಬಳಿ ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿತು. ಅಧ್ಯಕ್ಷತೆ ವಹಿಸಿದ್ದ ಸಿ.ನಂಜುಂಡಪ್ಪ, ವಿ.ಸುಕುಮಾರ್, ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಪಿ.ಲಾಲಾಜಿ ಬಾಬು, ಜೆ.ಹೇಮಚಂದ್ರನ್ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ಜನತಾದಳದ ಮಾಜಿ ಮಂತ್ರಿ ಜೀವಿಜಯ ಶುಭ ಕೋರಿ ಮಾತನಾಡಿದರು. ಬಹಿರಂಗ ಸಭೆಯಲ್ಲಿ ಎನ್.ಡಿ.ಕುಟ್ಟಪ್ಪ ಸ್ವಾಗತಿಸಿ, ಕಾಳಯ್ಯ ವಂದಿಸಿದರು.

ಅಂಚೆ ಕಚೇರಿ ಪಿಕೆಟಿಂಗ್

ಭಟ್ಕಳ: ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಕರೆಯ ಮೇರೆಗೆ ಉ.ಕನ್ನಡ ಜಿಲ್ಲೆಯ ಭಟ್ಕಳದ ಶಿರಾಲಿಯ ಅಂಚೆ ಕಚೇರಿಯನ್ನು ಸಿಐಟಿಯುವಿನ ಸಾವಿರಕ್ಕೂ ಹೆಚ್ಚು ಜನ ಕಾರ್ಮಿಕರು ಕೇಂದ್ರ ಸರಕಾರದ ವಿನಾಶಕಾರಿ ಆರ್ಥಿಕ ನೀತಿಯನ್ನು ವಿರೋಧಿಸಿ ಫೆ.25 ರಂದು ಪಿಕೆಟಿಂಗ್ ನಡೆಸಿದರು. ಇದಕ್ಕೂ ಮೊದಲು ವೆಂಕ್ಟಾಪುರ ಹಂಚಿನ ಕಾರ್ಖಾನೆಯಿಂದ ಮೆರವಣಿಗೆ ಪ್ರಾರಂಭಿಸಿ ಶಿರಾಲಿಯ ಪ್ರಮುಖ ಬಿದಿಗಳಲ್ಲಿ ಘೋಷಣೆಗಳ ಜೊತೆಯಲ್ಲಿ ಮೆರವಣಿಗೆ ನಡೆಸಿ ನಂತರ ಅಂಚೆ ಕಚೇರಿಯ ಮುಂದೆ ಬಹಳ ಸಮಯದವರೆಗೆ ಧರಣಿ ನಡೆಸಿದರು.

ಸಭೆಯನ್ನುದ್ದೇಶಿಸಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿಗಳೂ ಹಾಗೂ ಗ್ರಾಮಪಂಚಾಯತ್ ಸದಸ್ಯರಾದ ಸುಭಾಷ್ ಕೊಪ್ಪಿಕರ ಮಾತನಾಡಿದರು. ಈ ಕಾರ್ಯಕ್ರಮದ ನೇತೃತ್ವವನ್ನು ಈಶ್ವರ್ ನಾಯ್ಕ, ಭದ್ರನಾಯ್ಕ, ಗಣಪತಿ ದೇವಾಡಿಗ, ಮುನ್ನೆಲ್ ಡಿ ಕೋವಾ, ನಾಗಪ್ಪ ದೇವಾಡಿಗ, ಮಾಸ್ತಿನಾಯ್ಕ, ಕೃಷ್ಣ ಪಾರುಗೌಡ, ಶಿವಾನಂದ ನಾಯ್ಕ ಮತ್ತು ಮಂಜುಗೌಡ ಮುಂತಾದವರು ವಹಿಸಿದ್ದರು. ಇದೇ ಸಂದರ್ಭದಲ್ಲಿ ವಿದ್ಯುತ್ ಸಮಸ್ಯೆ, ನೀರಾವರಿ ಸಮಸ್ಯೆ, ಉರುವಲು ಕಟ್ಟಿಗೆ ಅಭಾವ, ಸರಕಾರಿ ಆಸ್ಪತ್ರೆ ಮುಂತಾದ ಸಮಸ್ಯೆಗಳ ಕುರಿತು ಗ್ರಾಮ ಪಂಚಾಯತ್ ಮೂಲಕ ಕಮಿಷನರ್‌ಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಡಿವೈಎಫ್ಐ ಕೆಲವು ಸಂಘಟನಾ ಕ್ರಮಗಳು

ಡಿವೈಎಫ್ಐನ ರಾಜ್ಯ ಸಮಿತಿಯು ಇತ್ತೀಚೆಗೆ ಸಭೆ ಸೇರಿದ್ದು ಸಂಘಟನಾತ್ಮಕವಾಗಿ ಹಲವು ಕ್ರಮಗಳನ್ನು ಕೈಗೊಂಡಿದ್ದು ರಾಜ್ಯ ಸಮಿತಿಯ ಕೆಲವು ಪದಾಧಿಕಾರಿಗಳನ್ನು ಆಯ್ಕೆ ಮಾಡಿದೆ.

ಅಧ್ಯಕ್ಷರಾಗಿ ಶಾಂತಾರಾಮ ಎಸ್.ನಾಯಕ್(ಉ.ಕನ್ನಡ), ಉಪಾಧ್ಯಕ್ಷರುಗಳಾಗಿ ಗೋಪಾಲಕೃಷ್ಣ(ಬೆಂಗಳೂರು), ಶರಭಣ್ಣ ನಾಗಲಾಪುರ(ರಾಯಚೂರು), ವಸಂತ ಆಚಾರಿ(ದ.ಕ.), ಪೀಟರ್ ಲೋಬೋ(ಕೊಡಗು), ಕಾರ್ಯದರ್ಶಿಯಾಗಿ ಎಸ್.ವೈ.ಗುರುಶಾಂತ್, ಸಹ ಕಾರ್ಯದರ್ಶಿಗಳಾಗಿ ಕೃಷ್ಣಪ್ಪ ಕೊಂಚಾಡಿ(ದ.ಕ.), ಎಂ.ವಿ.ನಾರಾಯಣಸ್ವಾಮಿ(ಕೋಲಾರ), ಖಜಾಂಚಿಯಾಗಿ ಪುಟ್ಟಮಾದು(ಮಂಡ್ಯ), ಕಾರ್ಯದರ್ಶಿ ಮಂಡಳಿಯ ಖಾಯಂ ಆಹ್ವಾನಿತ ಸದಸ್ಯರಾಗಿ ಸಿ.ಮಾರುತಿ ಆಯ್ಕೆಯಾಗಿದ್ದಾರೆ.

ಪ್ರೋತ್ಸಾಹ ಧನ ಬಿಡುಗಡೆಗೆ ಒತ್ತಾಯ

ಕೋಲಾರ: ತಳಿಶುದ್ಧತೆಯಲ್ಲಿ ಶೇ 95 ರಷ್ಟು ಉತ್ತಮ ಫಲಿತಾಂಶವಿರುವ ಹತ್ತಿ ಬೀಜೋತ್ಪಾದಕ ರೈತರಿಗೆ ಪ್ರತಿ ಕೆ.ಜಿ. ಬೀಜಗಳಿಗೆ 20 ರೂ. ನಂತೆ ನೀಡಬೇಕಾದ ಪ್ರೋತ್ಸಾಹ ಧನವನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಕರ್ನಾಟಕ ರಾಜ್ಯ ಬೀಜ ನಿಗಮವನ್ನು ಕರ್ನಾಟಕ ಪ್ರಾಂತ ರೈತ ಸಂಘ(ಎಐಕೆಎಸ್) ಒತ್ತಾಯಿಸಿದೆ. ಈಗಾಗಲೇ ಭಾರತ ಹತ್ತಿ ನಿಗಮದಿಂದ 30 ಲಕ್ಷ ರೂ. ಹಣ ರಾಜ್ಯ ನಿಗಮಕ್ಕೆ ಬಿಡುಗಡೆಯಾಗಿರುವ ವರದಿ ಇದ್ದರೂ, ಶ್ರಮಪಟ್ಟು ಉತ್ತಮ ರೀತಿಯಲ್ಲಿ ಹತ್ತಿ ಕೃಷಿ ಮಾಡಿರುವ ರೈತರಿಗೆ ನ್ಯಾಯಯುತವಾಗಿ ಸಲ್ಲಬೇಕಾದ ಹಣವನ್ನು ತಲುಪಿಸದೆ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನದಿಂದ ವರ್ತಿಸುತ್ತಿರುವ ರಾಜ್ಯ ಬೀಜ ನಿಗಮದ ಧೋರಣೆಯನ್ನು ರೈತ ಸಂಘದ ಜಿಲ್ಲಾ ಸಮಿತಿ ಉಗ್ರವಾಗಿ ಖಂಡಿಸಿ, ಕೃಷಿ ಸಚಿವರು ಕೂಡಲೇ ಕ್ರಮ ಕೈಗೊಂಡು ನ್ಯಾಯ ಸಿಗುವಂತೆ ಮಾಡಬೇಕೆಂದು ರೈತ ಸಂಘ ಒತ್ತಾಯಿಸಿದೆ.

ಬಿಜಾಪುರ ನಗರಸಭೆ ನೌಕರರ ಯಶಸ್ವಿ ಹೋರಾಟ

ಬಿಜಾಪುರ ನಗರಸಭೆಯ ನೀರು ಸರಬರಾಜಿನಲ್ಲಿ 10-15 ವರ್ಷಗಳಿಂದ ದುಡಿಯುತ್ತಿದ್ದ ಕೆಲಸಗಾರರು 1993 ರಿಂದ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಎರವಲು ಸೇವೆ ಮಾಡುತಿದ್ದು ತಮ್ಮ ಸೇವೆಯನ್ನು ಸಕ್ರಮಗೊಳಿಸಬೇಕೆಂದು ಸಂಪು ಹೂಡುವ ಮೂಲಕ ಹೋರಾಟ ನಡೆಸಿ ಯಶಸ್ವಿಗೊಳಿಸಿದ್ದಾರೆ. ಪೌರಾಡಳಿತ ನಿರ್ದೇಶನಾಲಯದ ಭ್ರಷ್ಟ ನಿರ್ದೇಶಕರ ವಿರುದ್ಧ ಐಕ್ಯ ಹೋರಾಟ ನಡೆಸಿ ಸಿಐಟಿಯು ಧೋರಣೆಯನ್ನು ಎತ್ತಿ ಹಿಡಿದಿದ್ದಾರೆ.

ಹತ್ತು ವರ್ಷ ಸೇವೆ ಸಲ್ಲಿಸಿದವರ ಸೇವೆಯನ್ನು ಸಕ್ರಮಗೊಳಿಸಬೇಕೆಂದು ...ಚ್ಛನ್ಯಾಯಾಲಯ ಆದೇಶ ನೀಡಿರುವ ...ನ್ನೆಲೆಯಲ್ಲಿ ತಮ್ಮ ಸೇವೆಯನ್ನು ಸಕ್ರಮ ...ೊಳಿಸಬೇಕೆಂದು 1993ರಿಂದ ಕರ್ನಾಟಕ ...ೀರು ಸರಬರಾಜು ಮತ್ತು ಒಳಚರಂಡಿ ...ೋಜನೆ ಎರವಲಾಗಿ ಕೆಲಸ ಮಾಡುತ್ತಿ...ುವ 77 ಬಿಜಾಪುರ ನಗರ ಸಭೆಯ ...ೌಕರರು ಎರಡು ವರ್ಷಗಳಿಂದ ಸತತ ...ಯತ್ನ ನಡೆಸುತ್ತಾ ಬಂದಿದ್ದರು. ಕೊನೆಗೆ ...ಮ್ಮ ಸೇವೆಯನ್ನು ಸಕ್ರಮಗೊಳಿಸುವ ...ಧಿಕಾರವನ್ನು ಪೌರಾಡಳಿತ ನಿರ್ದೇಶನಾಲ...ುದ ನಿರ್ದೇಶಕರಿಗೆ ನೀಡುವುದರಲ್ಲಿಯೂ ...ಶಸ್ವಿಯಾದರು. ಆದರೆ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಹಣದಾಸೆಗೆ ಬಲಿಬಿದ್ದು ಹಲವಾರು ಕುಂಟು ನೆವಗಳನ್ನು ಮುಂದೆ ಮಾಡಿ ಈ ಜನರ ಸೇವೆ ಸಕ್ರಮಗೊಳಿಸಲು ಹಿಂದೇಟು ಹಾಕಿದಾಗ ಮುನಿಸಿಪಲ್ ಕಾಮಗಾರಿ ಯೂನಿಯನ್ನಿನ ವತಿಯಿಂದ ಮುಷ್ಕರದ ನೋಟೀಸು ನೀಡಿ 28.2.97 ರ ಒಳಗೆ ಸಕ್ರಮ ಗೊಳಿಸುವ ಆಜ್ಞೆ ಬಾರದಿದ್ದರೆ 3.3.97 ರಂದು 2 ಲಕ್ಷ ಜನಸಂಖ್ಯೆಯಿರುವ ಬಿಜಾಪುರ ನಗರಕ್ಕೆ ನೀರು ಸರಬರಾಜನ್ನು ನಿಲ್ಲಿಸಿ ಕೆಲಸಗಾರರು ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿ, ಜನರಿಗೆ ತೊಂದರೆಯಾದರೂ ನಾಗರೀಕರು ತಮಗೆ ಬೆಂಬಲ ನೀಡಬೇಕೆಂದು ವಿನಂತಿ ಮಾಡಿಕೊಂಡಿದ್ದರು. ಈ ಹೋರಾಟದ ಪ್ರತಿಫಲವಾಗಿ ಈ 77 ಜನರನ್ನು ಖಾಯಂಗೊಳಿಸುವ ಸರಕಾರಿ ಆಜ್ಞೆ ಪಡೆಯಲಾಯಿತು. ಈ 77 ಜನರ ಪೈಕಿ ಒಬ್ಬ ನೌಕರ ಈಗಾಗಲೇ ಮೃತ ಪಟ್ಟಿದ್ದು ಸರಕಾರದ ನಿರ್ಲಕ್ಷ್ಯತನಕ್ಕೆ ಉದಾಹರಣೆಯಾಗಿದೆ. ಯಾವ ಪ್ರಲೋಭಕ್ಕೂ ಬಲಿಯಾಗದೆ ನೌಕರರು ಐಕ್ಯತೆಯಿಂದ ಹೋರಾಡಿ ಜಯಗಳಿಸಿದ್ದಾರೆಂದು ಮುನಿಸಿಪಲ್ ಕಾಮಗಾರ್ ಯೂನಿಯನ್ನಿನ ಅಧ್ಯಕ್ಷ ಎನ್.ಕೆ.ಉಪಾಧ್ಯಾಯರು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಇಎಸ್ಐ ಸೌಲಭ್ಯಕ್ಕಾಗಿ ಕಾರ್ಮಿಕರಿಂದ ಪ್ರತಿಭಟನೆ, ಉಗ್ರ ಚಳುವಳಿಯ ಎಚ್ಚರಿಕೆ

ದಾವಣಗೆರೆ ಉತ್ತಮ ಇಎಸ್ಐ ಸೌಲಭ್ಯಗಳಿಗಾಗಿ ಹರಿಹರದ ಸಿಐಟಿಯು ಸಂಘಟನೆಯಡಿ ಹಲವಾರು ಸಂಘಗಳ ಸುಮಾರು 500 ಕಾರ್ಮಿಕರು ಇಂದು ಬೆಳಿಗ್ಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಬೇಡಿಕೆ ಈಡೇರದಿದ್ದರೆ ಉಗ್ರ ಚಳುವಳಿ ನಡೆಸುವ ಎಚ್ಚರಿಕೆಯನ್ನು ಅಧಿಕಾರಿಗಳಿಗೆ ನೀಡಿದರು.

ದಾವಣಗೆರೆಗೆ ಆಗಮಿಸಿದ್ದಕ್ಕೆ ಕಾರ್ಮಿಕರು ಅಂಡರ್‌ಬ್ರಿಡ್ಜ್, ಮಂಡಿಪೇಟೆ, ಅಶೋಕ ರಸ್ತೆ, ಜಯದೇವ ವೃತ್ತ ಮಾರ್ಗಗಳಲ್ಲಿ ಮೆರವಣಿಗೆ ನಡೆಸಿ ಉಪವಿಭಾಗಾಧಿಕಾರಿ ಕಛೇರಿ ತಲುಪಿ ಮನವಿ ಸಲ್ಲಿಸಿದರು.

ನಂತರ ಬೃಹತ್ ಸಭೆಯನ್ನು ಉದ್ದೇಶಿಸಿ ಚಿತ್ರದುರ್ಗ ಜಿಲ್ಲಾ ಸಿಐಟಿಯು ಸಂಘಟನಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಎ.ಎಸ್.ಮೂರ್ತಿ, ಮೈಸೂರು ಕಿರ್ಲೋಸ್ಕರ್ ಎಂಪ್ಲಾಯೀಸ್ ಅಸೋಸಿಯೇಷನ್ನಿನ ಕೆ.ನಾರಾಯಣ ಸಾ.ಚೆನ್ನಪ್ಪ, ರಾಮ್ಕೋ ಇಂಡಸ್ಟ್ರೀಸ್‌ನ ಕೆ.ಬಸವನ ಗೌಡ, ಡಿವೈಎಫ್ಐನ ಕೆ.ಮಹಂತೇಶ್ ಹರಿಹರ ಪಾಲಿಫೈಬರ್ಸ್‌ನ ಜೆ.ಎಂ.ಮಲ್ಲಿಕಾರ್ಜುನ ಸ್ವಾಮಿಯವರು ಮಾತನಾಡಿ ತಮ್ಮ ಬೇಡಿಕೆಗಳನ್ನು ವಿವರಿಸಿ, ಸೂಕ್ತ ಇಎಸ್ಐ ಸೌಲಭ್ಯಗಳು ಶೀಘ್ರ ದೊರೆಯದಿದ್ದರೆ ಈ ಪ್ರದೇಶದಲ್ಲಿನ ಕಾರ್ಮಿಕರು ಕಾನೂನು ಮತ್ತು ಶಿಸ್ತು ಕ್ರಮಕ್ಕೆ ಭಂಗ ತರುವಂತಹ ಅತ್ಯುಗ್ರ ಆಂದೋಲನ ನಡೆಸುವುದು ಅನಿವಾರ್ಯವಾಗುತ್ತದೆಂದು ಎಚ್ಚರಿಸಿದರು.

ಕಾರ್ಮಿಕರ ಮನವಿ ಬಗ್ಗೆ ಉಪವಿಭಾಗಾಧಿಕಾರಿಗಳ ಪರವಾಗಿ ತಹಶೀಲ್ದಾರ್ ಆರ್.ಬಿ.ಗೌಡ, ಉಪಕಾರ್ಮಿಕರ ಆಯುಕ್ತ ನರಸಿಂಹ ಮೂರ್ತಿ, ಪ್ರದೇಶ ವೈದ್ಯಾಧಿಕಾರಿ ಡಾ|| ವೈ.ಸುದೀಶ್ ನಿಟ್ಟುವಳ್ಳಿ, ಇಎಸ್ಐ ಅಧೀಕ್ಷಕ ಡಾ|| ಡಿ.ಎಸ್.ಕುಮಾರ್ ರವರು ಸಭೆಯನ್ನುದ್ದೇಶಿಸಿ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿ ಬೇಡಿಕೆಗಳ ಬಗ್ಗೆ ಸರಕಾರದ ಗಮನ ಸೆಳೆಯುವುದಾಗಿ ತಿಳಿಸಿದರು.

ನಂತರ ನಡೆದ ಉಪವಿಭಾಗಾಧಿಕಾರಿಗಳ ಸಭೆಯಲ್ಲಿ ಕಾರ್ಮಿಕ ಪದಾಧಿಕಾರಿಗಳು, 1990 ರಿಂದಲೇ ಸಲಹೆ ಸೂಚನೆಗಳನ್ನು ಕೊಡುತ್ತಲೇ ಬಂದಿದ್ದರೂ ತುರ್ತು ಮತ್ತು ಒಳ ರೋಗಿ ಚಿಕಿತ್ಸೆಗೆ ಮಹಿಳಾ ವೈದ್ಯರ ನೇಮಕಾತಿ, ಕೆಲಸದ ವೇಳೆಯಲ್ಲಿನ ಬದಲಾವಣೆ, ಸಮರ್ಪಕ ಔಷಧಿ ಸಾಮಾಗ್ರಿಗಳ ಸರಬರಾಜು, ಕಾರ್ಮಿಕರು ಖರೀದಿಸಿದ ಔಷಧಿ ಸಾಮಾಗ್ರಿಗಳ ಹಣದ ಶೀಘ್ರ ಮರುಪಾವತಿ, ಇತ್ಯಾದಿ ವಿಚಾರಗಳ ಬಗ್ಗೆ ಸರಕಾರ ತೋರಿದ ನಿರ್ಲಕ್ಷ ಧೋರಣೆಯನ್ನು ಎತ್ತಿ ತೋರಿಸಿದರು.

93 ರ ಏಪ್ರಿಲ್‌ನಿಂದಲೂ ಆಗ್ರಹ ಪಡಿಸಲಾದ ನಿಟ್ಟುವಳ್ಳಿ ಇಎಸ್ಐ ಆಸ್ಪತ್ರೆಯಲ್ಲಿ ಹೆಚ್ಚುವರಿ ತಜ್ಞರ ನೇಮಕಾತಿ, 50 ರಿಂದ 100 ಹಾಸಿಗೆಗಳ ಸಾಮರ್ಥ್ಯಕ್ಕೆ ಆಂಬುಲೆನ್ಸ್ ವ್ಯಾನ್, ಖಾಸಗೀ ಆಸ್ಪತ್ರೆಯಲ್ಲಿ ಪಡೆದ ಚಿಕಿತ್ಸೆ ವೆಚ್ಚದ ಮರುಪಾವತಿ ಬಗ್ಗೆ ಪ್ರಾದೇಶಿಕ ನಿರ್ದೇಶಕರು ಇದುವರೆಗೂ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದುದಕ್ಕೆ ಅಸಮಾಧಾನ ವ್ಯಕ್ತಪಡಿಸಲಾಯಿತು.

ಕಾರ್ಮಿಕ ಪದಾಧಿಕಾರಿಗಳ ಅಹವಾಲುಗಳಿಗೆ ಉತ್ತರಿಸಿದ ವೈದ್ಯಕೀಯ ಅಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳು ತಮ್ಮ ಇತಿಮಿತಿಯನ್ನು ತೋಡಿಕೊಂಡರಾದರೂ ಕಾರ್ಮಿಕರ ಸಮಸ್ಯೆಗಳ ಸಮರ್ಪಕ-ಸಮರ್ಥ ಪರಿಹಾರಕ್ಕಾಗಿ ಮೇಲಿನ ಅಧಿಕಾರಿಗಳ ಗಮನ ಸೆಳೆಯುವುದಾಗಿ ಭರವಸೆ ನೀಡಿದರು.

ಬಸ್ ದರ ಏರಿಕೆಗೆ ಖಂಡನೆ

ಬಳ್ಳಾರಿ: ರಾಜ್ಯದ ಜನತಾದಳ ಸರಕಾರ ಬಸ್ ದರವನ್ನು ವಿಪರೀತ ಏರಿಸಿ ಜನ ಸಾಮಾನ್ಯರಿಗೆ ಮತ್ತಷ್ಟು ಸಂಕಷ್ಟ ತಂದಿರುವುದಕ್ಕೆ ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ಉಗ್ರವಾಗಿ ಖಂಡಿಸಿದೆ. ಹಾಗೂ ಕೂಡಲೇ ಬಸ್ ದರ ಏರಿಕೆಯನ್ನು ಕಡಿಮೆ ಮಾಡಲು ಒತ್ತಾಯಿಸಿದೆ.

ಕಾಲು ಇಡಲು ಕಷ್ಟ ಎಂಬಷ್ಟು ಜನ ತುಂಬಿ ತುಳುಕುತ್ತಿರುವ ಬಸ್‌ಗಳಲ್ಲಿ, ಮೇಲೆ ಕೆಳಗೆ ಹಾಗೂ ಜೋತು ಬಿದ್ದು ಜನ ಪ್ರಯಾಣ ಮಾಡಿದರೂ ಸಂಸ್ಥೆ ನಷ್ಟದಲ್ಲಿದೆ ಎಂಬುವುದು ನಂಬಲನರ್ಹವಾದ ವಿಚಾರವಾಗಿದೆ. ಕೆಎಸ್ಆರ್‌ಟಿಸಿ ಯಲ್ಲಿನ ಆಡಳಿದಲ್ಲಿ ಸೋರಿಕೆ, ಭ್ರಷ್ಟಾಚಾರಗಳನ್ನು ತಡೆದು, ಸಮರ್ಥ ಆಡಳಿತ ನಡೆಸುವ ಬದಲು ಸರಕಾರ ಬೆಲೆ ಏರಿಸಿರುವುದನ್ನು ಉಗ್ರವಾಗಿ ಖಂಡಿಸಿದೆ.

ಕಾಂ|| ಮುದ್ದಪ್ಪ ಬೈಚಬಾಳ ನಿಧನ

ಜಾಲಹಳ್ಳಿ: ದೇವದುರ್ಗ ತಾಲ್ಲೂಕು, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರು, ಜಾಲಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ...ಪಿಐ(ಎಂ) ಮುಖಂಡರುಆರ್ ಕಾಂ|| ಮುದ್ದಪ್ಪ ಬೈಚ ಬಾರಪ್ಪನವರು ...ವರಿ 8 ರಂದು ನಿಧನ ಹೊಂದಿದರು. ಇವರು ನಾರಾಯಣಪುರ ಬಲದಂಡೆ ...ೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ರೈತರ ಸಮಸ್ಯೆಗಳಿಗೆ ಸ್ಪಂದಿಸುವ ...ೈತ ಮುಖಂಡರು ಎಂದು ತಿಳಿಸಿರುವ ಕರ್ನಾಟಕ ಪ್ರಾಂತ ರೈತ ಸಂಘ ...ಾಜ್ಯ ಸಮಿತಿ ಅವರ ನಿಧನಕ್ಕೆ ಸಂತಾಪ ಸೂಚಿಸಿದೆ.

ಸುರ್ಜಿತ್ ಸಂದರ್ಶನ

ಪುಟ 4ರಿಂದ

☐ ಸಿಪಿಐ(ಎಂ) ಯಾವ ನಿರ್ದಿಷ್ಟ ನೀತಿಗಳ ವಿರುದ್ಧ ಹೋರಾಡುತ್ತದೆ?

ಸುರ್ಜಿತ್: ನಮ್ಮ ವಿರೋಧವಿದ್ದಾಗಿಯೂ ಅವರು(ಸಂಯುಕ್ತರಂಗ ಸರಕಾರ) ಸಾರ್ವಜನಿಕ ವಲಯದ ಶೇರು ಮಾರಾಟ ಮತ್ತು ವಿಮಾ ವಲಯದ ಖಾಸಗೀಕರಣ ನೀತಿಯನ್ನು ಅನುಸರಿಸುತ್ತಿದ್ದಾರೆ. ಕನಿಷ್ಠ ಸಾಮಾನ್ಯ ಕಾರ್ಯಕ್ರಮ 'ಕೆಲವು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಬೃಹದಾಕಾರವಾಗಿ ಬೆಳೆಸಿ ಅವು ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಿಸುವಂತೆ' ಮಾಡುವ ಮಾತನಾಡಿತ್ತು. ಬದಲಿಗೆ ಈಗ ಶೇರು ಮಾರಾಟ/ಖಾಸಗೀಕರಣದ ಮಾತನಾಡಲಾ ಗುತ್ತಿದೆ. ಔಷಧಗಳ ಕ್ಷೇತ್ರದ ಐಡಿಪಿಎಲ್, ಜವಳಿ ಕ್ಷೇತ್ರದ ಎನ್‌ಟಿಸಿ ಮಿಲ್ಲುಗಳ ಪುನರುಜ್ಜೀವನದ ಮಾತೇ ಇಲ್ಲ. ದೊಡ್ಡ ಬಂಡವಾಳಿಗರು ಸಾರ್ವಜನಿಕ ವಲಯದ ನಾಶದ ಮಾತನ್ನೇ ಆಡುತ್ತಿದ್ದಾರೆ. ನೆಹರೂ ಸಮಾಜವಾದ ಇಂದಿಗೆ ಪ್ರಸ್ತುತವೇ ಅಲ್ಲ ಎನ್ನಲಾಗುತ್ತಿದೆ. ಈ ಸಾರ್ವಜನಿಕ ವಲಯ ದ ಖಾಸಗೀಕರಣ/ಮಾರಾಟ ನಿರುದ್ಯೋಗ ಸೃಷ್ಟಿಸಿ ಜನಸಾಮಾನ್ಯರ ಬದುಕನ್ನು ಹಾಳುಗೆಡವುತ್ತದೆ. ಹಾಗೆಯೇ ದೊಡ್ಡ ಬಂಡವಾಳಿಗರು ಮತ್ತು ವಿದೇಶೀ ಕಂಪನಿ ಗಳಿಗೆ ಮಾತ್ರ ಲಾಭ. ಆದ್ದರಿಂದ ಎಡಪಕ್ಷಗಳು ಈ ನೀತಿಗಳನ್ನು ತೀವ್ರವಾಗಿ ವಿರೋಧಿಸುತ್ತವೆ.

☐ ಬಜೆಟ್ ಉದಾರೀಕರಣದ ನೀತಿಯನ್ನೇ ಮುಂದುವರಿಸಿದೆ. ಉದಾರೀಕರಣವನ್ನೇ ಪ್ರಾರಂಭದಿಂದಲೂ ವಿರೋಧಿಸುತ್ತಾ ಬಂದಿರುವ ಸಿಪಿಐ(ಎಂ) ಬಜೆಟ್‌ನ ವಿರುದ್ಧ ಮತ ಚಲಾಯಿಸುತ್ತದೆಯೋ?

ಸುರ್ಜಿತ್ : ನಾವು ಇಂತಹ ನೀತಿಗಳನ್ನು ವಿರೋಧಿಸುತ್ತಾ ಬಂದಿದ್ದೇವೆ. ಇದು ಬಜೆಟ್ಟಿನ ಪ್ರಶ್ನೆ ಮಾತ್ರವಲ್ಲ, ಬದಲಿಗೆ ಒಟ್ಟಾರೆ ನೀತಿಯ ಪ್ರಶ್ನೆ.

☐ ಈ ಆರ್ಥಿಕ ಧೋರಣೆಗಳ ದಿಕ್ಕನ್ನು ಬದಲಿಸುವಲ್ಲಿ ಎಡಪಕ್ಷಗಳು ಯಶಸ್ವಿಯಾಗುತ್ತವೆಯೋ?

ಸುರ್ಜಿತ್: ಇಲ್ಲಿ ಜನತೆ ಮುಖ್ಯ. ಈ ಹಂತದಲ್ಲಿ ಆಮೂಲಾಗ್ರ ಬದಲಾವಣೆ ತರುವುದು ಸಾಧ್ಯವಾಗಲಿಕ್ಕಿಲ್ಲ. ಆದರೆ ಇಂದಿನ ವರ್ಗ ಪರಿಸ್ಥಿತಿಯಲ್ಲಿ ಈ ನೀತಿಗಳ ಮೇಲೆ ಪ್ರಭಾವ ಬೀರುವುದು ಸಾಧ್ಯ. ಜನರಿಗಾಗಿ ರಿಯಾಯಿತಿ ಪಡೆಯುವುದು ಸಾಧ್ಯವಾಗಬಹುದು. ವರ್ಗ ಶಕ್ತಿಯಲ್ಲಿ ಪೂರ್ಣ ಬದಲಾವಣೆ ಆದಾಗ ಮಾತ್ರ ಪೂರ್ಣ ಯಶಸ್ಸು ಸಾಧ್ಯ. ಆದರೆ ಈ ನೀತಿಗಳ ವಿರುದ್ಧ ಹೋರಾಡುವುದರಿಂದ ಮಾತ್ರ ಈ ವರ್ಗ ಶಕ್ತಿಯನ್ನು ನಮ್ಮ ಪರವಾಗಿ ಬದಲಾಯಿಸುವುದು ಸಾಧ್ಯ.

☐ ಮತ ಚಲಾವಣೆ ಹೇಗೆ ಮಾಡುತ್ತೀರಿ-ಬಜೆಟ್ಟಿನ ವಿರುದ್ಧ ಮತ ಚಲಾಯಿಸುವಿರಾ?

ಸುರ್ಜಿತ್: ಈಗ ನಮ್ಮ ಈ ಸಾಂವಿಧಾನಿಕ ವ್ಯವಸ್ಥೆಯಲ್ಲಿ ಬಜೆಟ್ಟಿನ ವಿರುದ್ಧ ಮತವೆಂದರೆ ಸರಕಾರದ ವಿರುದ್ಧ ಮತ ಎಂದೇ ಪರಿಗಣಿಸಲಾಗುತ್ತದೆ. ಆದ್ದರಿಂದ ಈ ವಿಷಯದಲ್ಲಿ ರಾಜಕೀಯ ಪರಿಸ್ಥಿತಿಯ ಅಂದಾಜು ಮಾಡುವುದು ಅಗತ್ಯ. ಈ ಸಂಯುಕ್ತ ರಂಗ ಚುನಾವಣೆಗೆ ಮೊದಲು ಮೂಡಿ ಬಂದದ್ದಲ್ಲ. ಚುನಾವಣಾ ನಂತರ ಬಿಜೆಪಿಯಂತಹ ಕೋಮುವಾದಿ ಪಕ್ಷಗಳನ್ನು ಅಧಿಕಾರದಿಂದ ಹೊರಗಿಡುವ ಸಲುವಾಗಿ ಮೂಡಿ ಬಂದದ್ದು. ಸಂಯುಕ್ತ ರಂಗದ ಘಟಕ ಪಕ್ಷಗಳಲ್ಲಿ ಹಲವು ಉದಾರೀಕರಣವನ್ನು ಮೊದಲಿನಿಂದಲೂ ಬೆಂಬಲಿಸುತ್ತಾ ಬಂದಂತಹವು. ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡುವ ಸಲುವಾಗಿ ಮಾತ್ರ ವಿವಿಧ ಪಕ್ಷಗಳು ಒಗ್ಗೂಡಿ ಸಂಯುಕ್ತ ರಂಗವಾಯಿತು. ಹಾಗೆ ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡುವಲ್ಲಿ ಈ ಪ್ರಯತ್ನ ಯಶಸ್ವಿಯಾಗಿದೆ. ಕಾಶ್ಮೀರ ಮತ್ತು ಈಶಾನ್ಯದ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಗಳನ್ನು ಮಾಡಲಾಗಿದೆ. ಹಿಂದಿನ ಸರಕಾರದ ಭ್ರಷ್ಟಾಚಾರವನ್ನು ಈ ಸರಕಾರ ಹೊರಗೆ ಬರಲು ಬಿಟ್ಟಿದೆ. ಫೆಡರಲಿಸಂ ಅನ್ನು ಬಲಪಡಿಸಲಾಗಿದೆ. ರಾಜ್ಯದ ಅಧಿಕಾರಗಳಲ್ಲಿ ಕೇಂದ್ರದ ಹಸ್ತಕ್ಷೇಪ ಕಡಿಮೆಯಾಗಿದೆ.

ಈಗ ಇದರರ್ಥ ನಾವು ಈ ಕಾರಣಗಳಿಗಾಗಿ ಆರ್ಥಿಕ ನೀತಿಗಳನ್ನು ಒಪ್ಪಿಕೊಳ್ಳುತ್ತೇವೆಂದಲ್ಲ. ಇವುಗಳ ವಿರುದ್ಧ ನಾವು ಹೋರಾಡುತ್ತಲೇ ಇರುತ್ತೇವೆ. ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಏಕತೆಯ ಅವಶ್ಯಕತೆಯೂ ಇದೆ. ಈ ಎಲ್ಲಾ ಶಕ್ತಿಗಳ ಕ್ರೋಢೀಕರಣ ಆಗಿ ಆ ಮೂಲಕ ಇವು ಒಂದು ಪ್ರಭಲ ಸ್ವತಂತ್ರ ಶಕ್ತಿಯಾಗಿ ಹೊರಹೊಮ್ಮಬೇಕು. ನಾವು ಆ ದಿಸೆಯಲ್ಲಿ ಕಾರ್ಯಪ್ರವೃತ್ತರಾಗುತ್ತೇವೆ.

(ಸಂಗ್ರಹಾನುವಾದ ಐಎನ್‌ಎಸ್‌ನಿಂದ)

...... ಜಾರು ದಾರಿಯಲ್ಲಿ

ಪುಟ 4ರಿಂದ

ಬಜೆಟ್ಟಿನಿಂದಲೂ ಸ್ಪಷ್ಟವಾಗುತ್ತದೆ. ಇಲ್ಲಿ 1800 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲು ಸಾಗಾಣಿಕೆ ದರ ಹೆಚ್ಚಿಸಲಾಗಿದೆ. ಸಾಮಾನ್ಯ ಬಜೆಟ್ಟಿನಲ್ಲೂ ಸಹ ಇದೇ ಪ್ರಮಾಣದ ರಿಯಾಯಿತಿಗಳನ್ನು ನೀಡಲಾಗಿದೆ (ಆಮದು ಸುಂಕ ಕಡಿತ, ಸೇವಾ ತೆರಿಗೆ ಕಳೆದರೆ 1725 ಕೋಟಿ ರೂಪಾಯಿಗಳಾಗುತ್ತದೆ). ತೆರಿಗೆ ಹಣಕಾಸಿನಿಂದ ದೂರ ಸರಿದಿರುವುದು ಸಾಮಾನ್ಯಬಜೆಟ್ಟಿನಲ್ಲಿ ಅಷ್ಟು ಸ್ಪಷ್ಟವಿಲ್ಲ(ಈ ರಿಯಾಯಿತಿಗಳನ್ನು ನೀಡದೆ ಆ ಹಣವನ್ನು ರೈಲ್ವೆಗೆ ನೀಡಿದ್ದರೆ ಸಾಗಾಣಿಕೆ ದರವನ್ನು ಏರಿಸುವ ಪ್ರಮೇಯವೇ ಬರುತ್ತಿರಲಿಲ್ಲ).

ಇದು ಒಂದು ಉದಾಹರಣೆ ಅಷ್ಟೆ. ಸ್ವಲ್ಪ ದಿನಗಳ ಹಿಂದೆ ಸಕ್ಕರೆ ಬೆಲೆ ಏರಿಕೆಯಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಸಧ್ಯದಲ್ಲೇ ಆಗಲಿದೆ. ಇದರಲ್ಲಿ ತಪ್ಪೇನು ಎಂದು ಯಾರಾದರೂ ಕೇಳಬಹುದು.

ಇದು ಬಡವರ ವಿರೋಧಿ ಮತ್ತು ಶ್ರೀಮಂತರ ಪರ ತಂತ್ರಗಾರಿಕೆ. ಶ್ರೀಮಂತರಿಗೆ ಸಾವಿರಾರು ಕೋಟಿ ರೂಪಾಯಿಗಳ ತೆರಿಗೆ ರಿಯಾಯಿತಿ ನೀಡುತ್ತಲೇ ಮೂಲಭೂತ ಅವಶ್ಯಕತೆಗಳ ಬೆಲೆ ಏರಿಸುವುದು ಬಡವರನ್ನು ತಟ್ಟುತ್ತದೆ.

ಹಣದುಬ್ಬರ!

ಏಷ್ಟು ಗೊಂದಲ ಸೃಷ್ಟಿಸಿದ್ದಾರೆಂದರೆ ಹಣದುಬ್ಬರದ ಬಗ್ಗೆ ಒಂದು ಮಾತು ಹೇಳುವುದು ಅವಶ್ಯವಾಗುತ್ತದೆ. ಚಿದಂಬರಂ ಮತ್ತು ಅವರ ಮಂತ್ರಾಲಯದ ಅಧಿಕಾರಿಗಳು ಹಣದುಬ್ಬರ ಕಡಿಮೆಯಾಗುತ್ತದೆ ಎನ್ನುತ್ತಾರೆ. ಹಣಕಾಸು ಕೊರತೆ ಆಗುವುದರಿಂದ ಇದು ಸಾಧ್ಯವಾಗುತ್ತದೆ ಎಂಬುದು ಅವರ ವಾದ. ಆದರೆ ಜನಸಾಮಾನ್ಯರು ಬಳಸದ ವಸ್ತುಗಳ ಆಮದು ಉದಾರೀಕರಣ ಆಗುತ್ತದೆ. ಸೆಲ್ಯುಲರ್ ಫೋನು, ಕಾರುಗಳು ಇತ್ಯಾದಿಗಳ ಬೆಲೆ ಕಡಿಮೆಯಾದರೆ ಯಾರಿಗೆ ಲಾಭ? ಶ್ರೀಮಂತರಿಗೆ ಮಾತ್ರ. ಆಮದು ಉದಾರೀಕರಣದಿಂದ ವ್ಯಾಪಾರ ಬಾಕಿ ಹೆಚ್ಚಾಗುತ್ತದೆ. ಇದನ್ನು ಸರಿತೂಗಿಸಲು ಆಹಾರ ಧಾನ್ಯಗಳ ರಫ್ತು ಮಾಡತೊಡಗಿದರೆ ಅವರಿಂದ ಆಹಾರ ಧಾನ್ಯಗಳ ಲಭ್ಯತೆ(ದೇಶದೊಳಗೆ) ಕಡಿಮೆಯಾಗುತ್ತದೆ.

ಹಣಕಾಸು ಕೊರತೆಯ ಪ್ರಮಾಣಕ್ಕೂ ಹಣದುಬ್ಬರಕ್ಕೂ ನಿಜದಲ್ಲಿ ಅನಿವಾರ್ಯ ಸಂಬಂಧ ವೇನಿಲ್ಲ. ಹೆಚ್ಚಿನ ಬೇಡಿಕೆಯಿಂದಾಗಿ ಹಣದುಬ್ಬರ ಆಗಿದ್ದರೆ ಹಣಕಾಸು ಕೊರತೆಯ ಕಡಿತ ಬಡವರಿಗೆ ಸ್ವಲ್ಪ ಪರಿಹಾರ ನೀಡಬಹುದು. ಇಲ್ಲಿ ಹಣದುಬ್ಬರ ಕಡಿಮೆ ಮಾಡುವ ವಿಧಾನವೂ ಮುಖ್ಯ. ಯಾಕೆಂದರೆ ಅದು ಬಡವರನ್ನು ಹಿಂಡುವ ವಿಧಾನವಾದರೆ ಅದರಿಂದ ದುಷ್ಪರಿಣಾಮವೇ ಆಗುತ್ತದೆ.

ಆದ್ದರಿಂದ ಹಣಕಾಸು ಕೊರತೆಯ ಗಾತ್ರದಿಂದಲೇ ಕಂಗಾಲಾಗಬೇಕಾದ ಅವಶ್ಯಕತೆ ಇಲ್ಲ. ಈ ಕೊರತೆ ಯಿಂದ ಬಡವರಿಗೆ ಎಂತಹ ಪರಿಹಾರ ಕಲ್ಪಿಸಲಾಗುತ್ತದೆ ಎಂಬುದು ಮುಖ್ಯ. ಇಲ್ಲಿ ಬಜೆಟ್ಟಿನಿಂದ ಉಂಟಾಗುವ ಹಣದುಬ್ಬರವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುವುದು ಅರ್ಥಹೀನವಾಗುತ್ತದೆ. ಯಾಕೆಂದರೆ ಇಡೀ ಆರ್ಥಿಕ ತಂತ್ರದಿಂದ ಉಂಟಾಗುವ ಹಣದುಬ್ಬರ ಮುಖ್ಯವಾಗುತ್ತದೆ. ಬಜೆಟ್ಟು ಈ ತಂತ್ರದ ಒಂದು ಭಾಗವಷ್ಟೆ. ಈ ಒಟ್ಟಾರೆ ತಂತ್ರವೇನೆಂದರೆ ತೆರಿಗೆಗಳಿಂದ ಹಣಕಾಸು ಸಂಗ್ರಹಿಸುವ ಬದಲು ಬೆಲೆಯೇರಿಕೆಗಳ ಮೂಲಕ ಹಣಕಾಸು ಸಂಗ್ರಹಣೆಯ ಮೇಲೆ ಅವಲಂಬಿಸಿದಾಗ ಹಣದುಬ್ಬರ ಎಂಬುದು ಈ ತಂತ್ರದ ಭಾಗವೇ ಆಗಿಬಿಡುತ್ತದೆ.

ಈ ತಂತ್ರದ ಇನ್ನೊಂದು ಸಮಸ್ಯೆಯೆಂದರೆ ಇದು ನಿರೀಕ್ಷೆ ಮಾಡುವಷ್ಟು ಹೂಡಿಕೆಯನ್ನು ತರುವುದಿಲ್ಲ. 1996-97ರ ಬಜೆಟ್ ಅಂದಾಜಿನ ಪ್ರಕಾರ ಒಟ್ಟು 87086 ಕೋಟಿ ರೂಪಾಯಿಗಳ ಯೋಜನಾ ವೆಚ್ಚ ಆಗಬೇಕಿತ್ತು. ಆದರೆ ಪರಿಷ್ಕೃತ ಅಂದಾಜಿನ ಪ್ರಕಾರ ಬರೀ 77518 ಕೋಟಿ ರೂಪಾಯಿಗಳ ವೆಚ್ಚ ಆಗಬಹುದು.

ವಿದೇಶೀ ನೇರ ಹೂಡಿಕೆ ಹೆಚ್ಚಾಗುತ್ತದೆಂದು ನಿರೀಕ್ಷಿಸುವುದೂ ವ್ಯರ್ಥ. ದೇಶದ ಆರ್ಥಿಕದ ಸೂತ್ರಗಳನ್ನೇ ಬಹುರಾಷ್ಟ್ರೀಯ ಕಂಪನಿಗಳಿಗೆ ಕೊಡುವುದರಿಂದ ದೇಶದ ಸಾರ್ವಭೌಮತೆಗೇ ಧಕ್ಕೆ ಉಂಟಾಗುತ್ತದೆ.

ಹಣಕಾಸು ಮಾರುಕಟ್ಟೆ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಅವಲಂಬಿಸುವುದರಿಂದ ಹಣಕಾಸು ವಲಯದ ಉದಾರೀಕರಣ ಮಾಡಬೇಕಾಗುತ್ತದೆ. ಇದರ ಅರ್ಥ ಬಂಡವಾಳಖಾತೆಯಲ್ಲೂ ಪೂರ್ಣ ಪರಿವರ್ತನೀಯತೆ ತರಬೇಕೆಂದೂ ಅದನ್ನು ಮಾಡಿದರೆ ಆಗ ನಮ್ಮ ಆರ್ಥಿಕ ಅಂತರ್‌ರಾಷ್ಟ್ರೀಯ ಸಟ್ಟಾ ವ್ಯವಹಾರಸ್ಥರ ಹಿಡಿತಕ್ಕೆ ಸಿಕ್ಕಿ ನರಳಬೇಕಾಗುತ್ತದೆ. ಈ ಬಜೆಟ್ಟು ಈ ತಂತ್ರದ ಭಾಗವಾಗಿ ದೇಶದ ಆರ್ಥಿಕವನ್ನೇ ಈ ದಿಕ್ಕಿನಲ್ಲಿ ದೂಡುತ್ತದೆ.

ಈ ಬಜೆಟ್ಟಿನ ವಿಶೇಷತೆಯೆಂದರೆ ಅದನ್ನು ಶ್ರೀಮಂತರು ಮತ್ತು ಮಾಧ್ಯಮಗಳು ಹೊಗಳಿ ಸ್ವಾಗತಿಸಿರುವ ರೀತಿ. ಈ ಶ್ರೀಮಂತರೇ ಈ ಬಜೆಟ್ಟಿನ ಫಲಾನುಭವಿಗಳಾದ್ದರಿಂದ ಅವರ ಧೋರಣೆ ಏನೆಂದರೆ "ನನಗೆ ಯಾವುದೋ ಅದು ಎಲ್ಲರಿಗೂ ಒಳ್ಳೆಯದು, ದೇಶಕ್ಕೂ ಒಳ್ಳೆಯದು" ಎಂಬುದು. ಈ ಬಜೆಟ್ಟಿನಿಂದ ದೇಶದ ಬಡವರ ಮೇಲೆ ಎಂತಹ ಪರಿಣಾಮ ಉಂಟಾಗುತ್ತದೆ ಮತ್ತು ದೇಶದ ಭವಿಷ್ಯ ಏನಾಗುತ್ತದೆ ಎಂಬುದರ ಬಗ್ಗೆ ಇವರಿಗೆ ಕಾಳಜಿಯೇ ಇಲ್ಲದಿರುವುದು ಸದ್ಯದ ಬಜೆಟ್ಟು ಮತ್ತು ಸದ್ಯದ ಪರಿಸ್ಥಿತಿಯ ನಕಾರಾತ್ಮಕ ಅಂಶ.

ಸಮಗ್ರ ಅಭಿವೃದ್ಧಿಯ ಕಣ್ಣೋಟದ ಸ್ಪಷ್ಟ ಕೈಗಾರಿಕಾ ನೀತಿಯಿಲ್ಲ

- ರಾಜ್ಯ ಸಿಐಟಿಯು

ಬೆಂಗಳೂರಿನಲ್ಲಿ ಮಾರ್ಚ್ ೧೩ರಿಂದ ೧೬ರವರೆಗೆ ಸಭೆ ಸೇರಿದ ಸಿಐಟಿಯುನ ೭ನೇ ರಾಜ್ಯ ಸಮ್ಮೇಳನ ರಾಜ್ಯದ ಕೈಗಾರಿಕಾ ರಂಗದ ಪರಿಸ್ಥಿತಿಯನ್ನು ವಿಶ್ಲೇಷಿಸಿ, ಅದರ ಹಿನ್ನೆಲೆಯಲ್ಲಿ ಆ ಕೈಗಾರಿಕೆಗಳಲ್ಲಿ, ವಲಯಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿ-ಗತಿಗಳ ವಿಶ್ಲೇಷಣೆ ನಡೆಸಿ ಒಂದು ನಿರ್ಣಯವನ್ನು ಅಂಗೀಕರಿಸಿತು. ಆ ನಿರ್ಣಯದ ಕೆಲವು ಅಂಶಗಳನ್ನು ಇಲ್ಲಿ ನಮ್ಮ ಓದುಗರಿಗಾಗಿ ಕೊಡುತ್ತಿದ್ದೇವೆ.

.... ಸರಕಾರಗಳೇನೋ ಬದಲಾದವು. ಆದರೆ ಧೋರಣೆಗಳಲ್ಲಿ ಮಾತ್ರ ನಿರೀಕ್ಷಿತ ಬದಲಾವಣೆಗಳಾಗಲಿಲ್ಲ. ಕೇಂದ್ರದಲ್ಲಿ ದೇವೇಗೌಡರು ಹಿಂದಿನ ನರಸಿಂಹ ರಾವ್ ಸರಕಾರದ ಜನವಿರೋಧಿ ಆರ್ಥಿಕ ನೀತಿಯನ್ನೇ ಮುಂದುವರಿಸುತ್ತಿದ್ದಂತೆ ರಾಜ್ಯದಲ್ಲಿಯೂ ಜನತಾದಳ ಸರಕಾರ ಕೇಂದ್ರ ಸರಕಾರದ ನೀತಿಯನ್ನೇ ಅನುಸರಿಸುತ್ತಿದೆ.

ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಒಂದು ಸ್ಪಷ್ಟವಾದ ಕೈಗಾರಿಕಾ ನೀತಿಯನ್ನು ರೂಪಿಸಲು ರಾಜ್ಯ ಸರಕಾರ ಯೋಚನೆ ಮಾಡುತ್ತಿಲ್ಲ. ಉದಾರೀಕರಣದ ನೀತಿಯ ಅಂಗವಾಗಿ ಕೈಗಾರಿಕೆಗಳು ಕೆಲವೇ ಕೆಲವು ಕೇಂದ್ರಗಳಲ್ಲಿ ಕೇಂದ್ರೀಕೃತಗೊಳ್ಳುತ್ತಿದ್ದು ರಾಜ್ಯದ ಅಸಮಾನ ಬೆಳವಣಿಗೆಗೆ ಕಾರಣವಾಗುತ್ತಿದೆ. ಕೈಗಾರೀಕರಣದ ದೃಷ್ಟಿಯಿಂದ ಕೆಲವು ಜಿಲ್ಲೆಗಳು ನಿರ್ಲಕ್ಷಿಸಲ್ಪಟ್ಟು ಅಂತಹ ಕಡೆಗಳಲ್ಲಿ ಪ್ರತ್ಯೇಕತಾ ಭಾವನೆಗಳ ಬೆಳವಣಿಗೆಗೆ ಎಡೆ ಮಾಡಿಕೊಟ್ಟಿದೆ.

ರಾಜ್ಯದ ಕೆಲವೆಡೆ ಮುಖ್ಯವಾಗಿ ದ.ಕ. ಮತ್ತು ಉ.ಕ. ಜಿಲ್ಲೆಗಳಲ್ಲಿ ಪರಿಸರ ರಕ್ಷಣೆಯ ಹೆಸರಿನಲ್ಲಿ ಒಟ್ಟು ಕೈಗಾರೀಕರಣದ ವಿರುದ್ಧ ನಡೆಸುತ್ತಿರುವ ಆಂದೋಲನಗಳ ನಿಜ ಬಣ್ಣವನ್ನು ಬಯಲು ಮಾಡಲು ರಾಜ್ಯ ಸರಕಾರ ವಿಫಲವಾಗಿದೆ. ವಿದೇಶಿ ಮೂಲಗಳಿಂದ ಹಣ ಪಡೆಯುವ ಕೆಲವು ಸ್ವಯಂ ಸೇವಾ ಸಂಸ್ಥೆಗಳು ಬಹುರಾಷ್ಟ್ರೀಯ ಕಂಪೆನಿಗಳ ನಡುವಿನ ಪೈಪೋಟಿಯ ಭಾಗವಾಗಿ ಕೆಲಸ ಮಾಡುತ್ತಿದ್ದು ಜನತೆಯನ್ನು ತಪ್ಪುದಾರಿಗೆ ಎಳೆಯುವ ಕೆಲಸ ಅವ್ಯಾಹತವಾಗಿ ನಡೆಯುವಂತಾಗಿದೆ.

ಕಾರ್ಖಾನೆಗಳು ಮುಚ್ಚಿ ಕಾರ್ಮಿಕ ಕುಟುಂಬಗಳು ಬೀದಿ ಪಾಲಾಗುತ್ತಿರುವ ಬಗ್ಗೆ ರಾಜ್ಯ ಸರಕಾರ ಕನಿಷ್ಠ ಕಾಳಜಿಯನ್ನು ಸಹ ತೋರಿಸುತ್ತಿಲ್ಲ. ಕೇಂದ್ರ ಸರಕಾರದ ತಪ್ಪು ಆಯಾತ ಧೋರಣೆಗಳಿಂದಾಗಿ ಹಲವಾರು ಸ್ವದೇಶಿ ಕಾರ್ಖಾನೆಗಳು ಮುಚ್ಚಿಹೋಗುತ್ತಿದ್ದರೆ, ಇನ್ನು ಕೆಲವು ಕಾರ್ಖಾನೆಗಳು ಸಮರ್ಪಕ ವಿದ್ಯುತ್ ಸರಬರಾಜು ಇಲ್ಲದಂತಾಗಿ ಉತ್ಪಾದನೆಯನ್ನು ನಿಲ್ಲಿಸಿವೆ. ಮೈಸೂರಿನ ಕೆ.ಆರ್.ಮಿಲ್ ಮುಚ್ಚಿದೆ, ಬೆಂಗಳೂರಿನ ಪ್ರತಿಷ್ಠಿತ ಬಿನ್ನಿ ಮಿಲ್ ಅದೇ ದಾರಿಯಲ್ಲಿ ಸಾಗಿದೆ. ಅನೇಕ ಮಿನಿ ಸ್ಟೀಲ್ ಪ್ಲಾಂಟುಗಳು ರಾಜ್ಯಾದ್ಯಂತ ಮುಚ್ಚಿಹೋಗಿದ್ದು ಬಿಜಾಪುರ, ಗುಲ್ಬರ್ಗಾ ಜಿಲ್ಲೆಗಳಲ್ಲಿ ಅನೇಕ ಮಿನಿ ಸಿಮೆಂಟ್ ಕಾರ್ಖಾನೆಗಳು ಬಂದ್ ಆಗಿವೆ. ಧಾರವಾಡ, ದಾಂಡೇಲಿ ಮೊದಲಾದ ಕಡೆ ಶಾಖೆಗಳನ್ನು ಹೊಂದಿದ್ದ ಪ್ಲಾಯ್‌ವುಡ್ ಕಾರ್ಖಾನೆ ಮುಚ್ಚಿಹೋಗಿದೆ. ಅರಣ್ಯ ರಕ್ಷಣೆಯ ಹೆಸರಿನಲ್ಲಿ ಗಣಿ ಉದ್ದಿಮೆಗೆ ಪೆಟ್ಟು ಬಿದ್ದಿದೆ. ಏಶಿಯಾದಲ್ಲೇ ಸಣ್ಣ ಕೈಗಾರಿಕೆಗಳ ಅತಿ ದೊಡ್ಡ ಕೇಂದ್ರವಾಗಿರುವ ಪೀಣ್ಯದಲ್ಲಿ250 ಕ್ಕೂ ಹೆಚ್ಚು ಕಾರ್ಖಾನೆಗಳು ಬಾಗಿಲು ಹಾಕಿವೆ.

ರಾಜ್ಯ ಸರಕಾರದ ಒಡೆತನದಲ್ಲಿದ್ದ ಮೈಸೂರು ಲ್ಯಾಂಪ್ ಮುಚ್ಚಿದೆ, ಪೇಪರ್ ಮಿಲ್ಲಿಗೆ ಆತಂಕ ಬಂದೊದಗಿದೆ. ಹುಬ್ಬಳ್ಳಿಯ ಮಹದೇವ ಟೆಕ್ಸ್‌ಟೈಲ್ಸ್ ಉತ್ಪಾದನೆಯನ್ನು ಗಣನೀಯವಾಗಿ ಕಡಿಮೆ ಮಾಡಿದೆ. ಎನ್‌ಟಿಸಿ ಗಿರಣಿಗಳಲ್ಲಿ ಒಂದಾದ ಮೈಸೂರ್ ಮಿಲ್ ಮುಚ್ಚಿದೆ. ಮಿನರ್ವ ಮಿಲ್ ಕುಂಟುತ್ತಾ ನಡೆದಿದೆ. ಬಾಗಲಕೋಟೆ ಮೊದಲಾದ ಕಡೆ ಇರುವ ಸಹಕಾರಿ ನೂಲಿನ ಗಿರಣಿಗಳು ಮುಚ್ಚಿ ಹೋಗಿ ಅನೇಕ ವರ್ಷಗಳಾಗಿವೆ.

ಮುಚ್ಚುತ್ತಿರುವ ಹಾಗೂ ರೋಗಗ್ರಸ್ತವಾಗಿರುವ ಕಾರ್ಖಾನೆಗಳ ಪುನಃಶ್ಚೇತನಕ್ಕೆ ರಾಜ್ಯ ಸರಕಾರ ಯಾವುದೇ ಕಾರ್ಯಕ್ರಮವನ್ನು ಹೊಂದಿರುವುದಿಲ್ಲ. ಸಾರ್ವಜನಿಕ ಕ್ಷೇತ್ರವನ್ನು ಬಲಪಡಿಸಿಕೊಂಡು ಹೋಗುವ ಉದ್ದೇಶ ಸರಕಾರಕ್ಕೆ ಇದ್ದಂತೆ ಕಾಣುವುದಿಲ್ಲ.

ಮೈಸೂರಿನ ವಿಕ್ರಾಂತ ಟಯರ್ಸ್ ಅನ್ನು ಜೆ.ಕೆ.ಟಯರ್ಸ್ ಕಂಪನಿಗೆ ಒಪ್ಪಿಸಲಾಗಿದೆ. ಹಾಗೆಯೇ ಹೊಸಪೇಟೆಯ ಉಕ್ಕಿನ ಕಾರ್ಖಾನೆಯನ್ನು ಖಾಸಗೀಯವರಿಗೆ ಕೊಟ್ಟಾಗಿದೆ. ದ.ಕ., ಬಳ್ಳಾರಿ ಮೊದಲಾದ ಜಿಲ್ಲೆಗಳಲ್ಲಿ ಸಾರ್ವಜನಿಕ ರಂಗಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಲು ಇರುವ ಅನೇಕ ಅವಕಾಶಗಳನ್ನು ಖಾಸಗೀ ಕ್ಷೇತ್ರಕ್ಕೆ ನೀಡಲು ಸರಕಾರ ತೀರ್ಮಾನ ಮಾಡುತ್ತಿರುವುದು ಆಕ್ಷೇಪಾರ್ಹವಾಗಿದೆ.

ರಾಜ್ಯದಲ್ಲಿ ವಿದ್ಯುತ್ತಿನ ಪರಿಸ್ಥಿತಿ ಉತ್ತಮಗೊಳ್ಳದೆ ಕೈಗಾರೀಕರಣ ಸಾಧ್ಯವಿಲ್ಲ. ರಾಜ್ಯದಲ್ಲಿ ತೀವ್ರಗೊಳ್ಳುತ್ತಿರುವ ವಿದ್ಯುತ್ ಅಭಾವದಿಂದ ಬಂಡವಾಳ ಹೂಡಿಕೆಯ ಮೇಲೆ ನಕಾರಾತ್ಮಕ ಪರಿಣಾಮವಾಗುತ್ತಿದೆ. ಆದರೂ ಸರಕಾರ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡುವುದಾಗಲೀ, ರಾಜ್ಯದ ಅವಶ್ಯಕತೆಗಳಿಗೆ ಅನುಗುಣವಾದ ವಿದ್ಯುತ್ ನೀತಿಯನ್ನು ಹೊಂದುವುದಕ್ಕಾಗಲೀ ಆಸಕ್ತಿ ಹೊಂದಿಲ್ಲ. ಸಾರ್ವಜನಿಕ ರಂಗದಲ್ಲಿ ಅಥವಾ ದೇಶೀಯ ಖಾಸಗಿ ರಂಗದಲ್ಲಿ ವಿದ್ಯುತ್ ಉತ್ಪಾದನೆಗೆ ವಿಪುಲ ಅವಕಾಶಗಳು ಇರುವುದನ್ನು ಕಡೆಗಣಿಸಿ ಕೋಜೆಂಟ್ರಿಕ್ಸ್ ನಂತಹ ಬಹುರಾಷ್ಟ್ರೀಯ ಕಂಪೆನಿಗೆ ಭಾರೀ ರಿಯಾಯ್ತಿಗಳನ್ನು ನೀಡಿ ಆ ಮೂಲಕ ದುಬಾರಿ ವಿದ್ಯುತ್ತನ್ನು ಜನತೆಯ ಮೇಲೆ ಹೇರುವುದಕ್ಕೆ ಜೆ.ಎಚ್.ಪಟೇಲರು ಹೊರಟಿದ್ದಾರೆ.

ಸಾರಿಗೆ ಕುರಿತಾಗಿಯೂ ಸರಕಾರಕ್ಕೆ ಸ್ಪಷ್ಟವಾದ ನೀತಿಯಿಲ್ಲ. ಸಾಮಾನ್ಯ ಜನತೆಗೆ ಕಡಿಮೆ ಖರ್ಚಿನಲ್ಲಿ ಸಾರಿಗೆ ಸೌಲಭ್ಯವನ್ನು ಒದಗಿಸುವ ಜವಾಬ್ದಾರಿಯನ್ನೇ ಸರಕಾರ ಕೈಬಿಟ್ಟಂತಿದೆ. ಖಾಸಗೀ ವಾಹನಗಳಿಗೆ ಮುಕ್ತ ಅವಕಾಶಗಳನ್ನು ನೀಡಲಾಗಿದ್ದು ಬಡ ಪ್ರಯಾಣಿಕರನ್ನು ನಿರ್ದಾಕ್ಷಿಣ್ಯವಾಗಿ ಸುಲಿಗೆ ಮಾಡಲಾಗುತ್ತಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮೇಲೆ ನಷ್ಟದ ಆರೋಪ ಹೊರಿಸಿ ಸರಕಾರ ಅದನ್ನು ಖಾಸಗೀಕರಣ ಮಾಡುವ ವಿಚಾರದಲ್ಲಿದೆ. ಸರಕಾರಕ್ಕೆ ನಿಗಮದಿಂದ ಸಂದಾಯವಾಗುವ ತೆರಿಗೆ ಹಾಗೂ ರಿಯಾಯ್ತಿ ಬಸ್ ಪಾಸುಗಳಿಗಾಗಿ ಸರಕಾರ ನೀಡಬೇಕಾದ ಸಬ್ಸಿಡಿಯನ್ನು ಗಣನೆಗೆ ತೆಗೆದುಕೊಂಡರೆ ಸಂಸ್ಥೆಗೆ ಹೆಚ್ಚೇನು ಹಾನಿ ಆಗುವುದಿಲ್ಲ. ಸೋರಿಕೆಯನ್ನು ತಡೆಗಟ್ಟಿದರೆ ಸಂಸ್ಥೆಯನ್ನು ಲಾಭದಾಯಕವಾಗಿ ನಡೆಸಬಹುದಲ್ಲದೆ ಪ್ರಯಾಣಿಕರಿಗೆ ಇನ್ನೂ ಹೆಚ್ಚಿನ ಸೇವೆಯನ್ನು ಒದಗಿಸಬಹುದು. ಸಾರ್ವತ್ರಿಕವಾಗಿ ವ್ಯಕ್ತವಾದ ತೀವ್ರ ವಿರೋಧದ ಕಾರಣದಿಂದ ನಿಗಮವನ್ನು ಖಾಸಗೀಕರಣ ಮಾಡುವ ಮಾತನ್ನು ಸಧ್ಯಕ್ಕೆ ಹಿಂದಕ್ಕೆ ಸರಿಸಿ ನಿಗಮನವನ್ನು ವಿಭಜಿಸುವ ತೀರ್ಮಾನ ಕೈಗೊಳ್ಳಲಾಗಿದೆ. ಇದರಿಂದಾಗಿ ಸರಕಾರಕ್ಕೆ ಹೊರೆ ಹೆಚ್ಚಾಗುವುದಲ್ಲದೆ ಸಾರಿಗೆ ಕಾರ್ಮಿಕರ ಹಿತಕ್ಕೆ ಧಕ್ಕೆಯಾಗುವ ಸಂಭವವಿದೆ. ಈ ಬಗ್ಗೆ ಕೇರಳ, ಆಂಧ್ರ ಮತ್ತು ತಮಿಳುನಾಡು ಮೊದಲಾದ ಸರಕಾರಗಳ ಅನುಭವಗಳನ್ನು ಸರಕಾರ ಪಡೆಯುವುದು ಉಚಿತ. ಪ್ರತ್ಯೇಕ ನಿಗಮಗಳನ್ನು ರಚಿಸುವ ಬದಲಿಗೆ ನಿಗಮದ ಆಡಳಿತಾತ್ಮಕ ಅಧಿಕಾರವನ್ನು ವಿಕೇಂದ್ರಿಕರಿಸುವ ಬಗ್ಗೆ ಸರಕಾರ ಗಂಭೀರ ವಿಚಾರ ಮಾಡಬೇಕಾಗಿದೆ.

ಅಧಿಕಾರ ವಿಕೇಂದ್ರೀಕರಣದ ಭಾಗವಾಗಿ ರಾಜ್ಯದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಜಾರಿಗೆ ತರಲಾಗಿದ್ದರೂ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಸರಕಾರದ ಆದಾಯದಿಂದ ಸಂದಾಯವಾಗಬೇಕಾದ ಪಾಲು ಇನ್ನೂ ಸಂದಾಯವಾಗುತ್ತಿಲ್ಲ. ಇದರಿಂದಾಗಿ ಕೆಳಹಂತದಲ್ಲಿ ಅಭಿವೃದ್ಧಿಯ ಕಾರ್ಯ ಕುಂಠಿತಗೊಂಡಿವೆ. ತಿಮ್ಮಯ್ಯ ಸಮಿತಿಯ ಶಿಫಾರಸ್ಸುಗಳನ್ನು ಮುಚ್ಚಿ ಹಾಕಲಾಗಿದೆ. ಇದರಿಂದಾಗಿ ಪಂಚಾಯತ್ ಹಾಗೂ ಪುರಸಭೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಸರಿಯಾದ ಸಂಬಳ ಸವಲತ್ತುಗಳಿಲ್ಲ-ಸೇವಾ ನಿಯಮಗಳಿಲ್ಲ. ಅಂಗನವಾಡಿಗಳಲ್ಲಿ ದುಡಿಯುತ್ತಿರುವ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲಾಗದೆ ಶೋಷಣೆ ಮಾಡಲಾಗುತ್ತಿದೆ.

ಕನಿಷ್ಠ ವೇತನ ನಿಗದಿ ಪಡಿಸಿ ಜಾರಿಗೊಳಿಸುವ ವಿಷಯದಲ್ಲಿ ಸರಕಾರ ಅಕ್ಷಮ್ಯವಾಗಿ ಹಿಂದೇಟು ಹಾಕುತ್ತದೆ. ಅನೇಕ ಹೋರಾಟಗಳ ನಂತರ ಬೀಡಿ ಕಾರ್ಮಿಕರು ಪಡೆದಿರುವ ಕನಿಷ್ಠ ವೇತನ ಪರಿಷ್ಕರಣೆಯ ವಿರುದ್ಧ ಮಾಲೀಕರಿಗೆ ತಡೆಯಾಜ್ಞೆ ಪಡೆಯಲು ಸಾಧ್ಯವಾಗಿದ್ದು ತಡೆಯಾಜ್ಞೆಯನ್ನು ತೆರವು ಮಾಡಲು ಸರಕಾರ ಆಸಕ್ತಿ ತೋರಿಸುತ್ತಿಲ್ಲ........

ಕಾರ್ಮಿಕ ಇಲಾಖೆ ಸರಿಸುಮಾರು ನಿಷ್ಪ್ರಯೋಜಕವಾಗಿದೆ. ಕಾರ್ಮಿಕ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಸ್ಥಾನಗಳು ಖಾಲಿ ಬಿದ್ದಿದ್ದು ಕಾರ್ಮಿಕರ ವಿವಾದಗಳು ಕೊಳೆಯುತ್ತಿವೆ. ಕಾರ್ಮಿಕರ ಕಾನೂನು ಬದ್ಧ ಹೋರಾಟಗಳ ವಿರುದ್ಧ ತಡೆಯಾಜ್ಞೆಗಳನ್ನು ಪಡೆಯುವುದು ಸುಲಭವಾಗಿದೆ. ಅವಾರ್ಡುಗಳನ್ನು ವಿಳಂಬ ಮಾಡಿ ಕಾರ್ಮಿಕರನ್ನು ಸತಾಯಿಸಲಾಗುತ್ತದೆ. ಇಎಸ್‌ಐ ಮೂಲಕ ಕಾರ್ಮಿಕರಿಗೆ ಸರಿಯಾದ ಔಷಧ ಉಪಚಾರ ಸಿಗದಂತಾಗಿ ಕಾರ್ಮಿಕರು ಇಎಸ್‌ಐ ಮೇಲಿನ ವಿಶ್ವಾಸವನ್ನೇ ಕಳೆದುಕೊಳ್ಳುತ್ತಿದ್ದಾರೆ.

ಸರಕಾರಕ್ಕೆ ಆಡಳಿತದ ಮೇಲೆ ಹಿಡಿತ ತಪ್ಪಿಹೋಗಿದೆ. ಎಲ್ಲಾ ಇಲಾಖೆಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ರಾಜ್ಯದಲ್ಲಿ ಕೊಲೆ, ದರೋಡೆಗಳು ಹೆಚ್ಚಾಗುತ್ತಿವೆ. ಇನ್ನೊಂದು ಕಡೆ ಕರ್ನಾಟಕದಲ್ಲಿ ಪೋಲೀಸ್ ರಾಜ್ಯ ಮರುಕಳಿಸುತ್ತಿದೆ.....

1997-98ರ ಬಜೆಟ್ ಬಗ್ಗೆ ಸುರ್ಜಿತ್‌ರೊಡನೆ ಒಂದು ಸಂದರ್ಶನ ಹಾಗೂ ಒಬ್ಬ ಅರ್ಥಿಕ ತಜ್ಞರ ವಿಶ್ಲೇಷಣೆ

ಫೆಬ್ರವರಿ 28ರಂದು ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ಸಂಸತ್ತಿನಲ್ಲಿ ಮಂಡಿಸಿದ ಬಜೆಟ್ ಸ್ವತಂತ್ರ ಭಾರತದ ಇತಿಹಾಸದಲ್ಲೇ ಒಂದು ಮೈಲಿಗಲ್ಲು, ಇದು ಅಭಿವೃದ್ಧಿ ಪರ, ಬಡವರ ಪರವಾದ ಬಜೆಟ್ ಎಂದೆಲ್ಲಾ ಕೊಂಡಾಡಲಾಯಿತು. ಇದು ನಿಜವೇ? ಎಡ ಪಕ್ಷಗಳೂ ಈ ಬಜೆಟ್ಟನ್ನು ಮೆಚ್ಚಿವೆ ಎಂದು ಸಮೂಹ ಮಾಧ್ಯಮಗಳು ವರ್ಣಿಸಿದವು.

ಆದರೆ ನಿಜವಾಗಿ ಸಿಪಿಐ(ಎಂ) ಈ ಬಜೆಟ್ಟನ್ನು ಹೇಗೆ ಕಂಡಿದೆ ಎಂಬುದರ ಬಗ್ಗೆ ಕಳೆದ ಎರಡು ಸಂಚಿಕೆಗಳಲ್ಲಿ ನೀಡಿದ್ದೀವಿ. ಸಿಪಿಐ(ಎಂ)ನ ಈ ನಿಲುವನ್ನು ಅದರ ಪ್ರಧಾನ ಕಾರ್ಯದರ್ಶಿ ಕಾಂ.ಹರ್ಕಿಶನ್ ಸಿಂಗ್ ಸುರ್ಜಿತ್ ವಿವರಿಸಿದ್ದಾರೆ ಐಎನ್‌ಎಸ್‌ಗೆ ನೀಡಿದ ಈ ಸಂದರ್ಶನದಲ್ಲಿ.



ಅದೇ ಉದಾರೀಕರಣ ನೀತಿಗಳ ಮುಂದುವರಿಕೆ

- ಸುರ್ಜಿತ್

❑ ಸಂಯುಕ್ತ ರಂಗದ ಸರಕಾರ ಮಂಡಿಸಿದ ಈ ಬಜೆಟ್ಟಿನ ಬಗ್ಗೆ ಸಿಪಿಐ(ಎಂ)ನ ಒಟ್ಟಾರೆ ಅಭಿಪ್ರಾಯವೇನು?

ಸುರ್ಜಿತ್: ಸಂಯುಕ್ತ ರಂಗದ ಘಟಕಗಳನ್ನು ಗಣನೆಗೆ ತೆಗೆದುಕೊಂಡು ಒಟ್ಟಾರೆ ಬಡತನ, ನಿರುದ್ಯೋಗಗಳನ್ನು ಹೋಗಲಾಡಿಸಿ ಬೆಲೆ ಏರಿಕೆಯನ್ನು ಹಿಡಿತದಲ್ಲಿರಿಸುವ ಬಜೆಟ್ಟನ್ನು ಸಂಯುಕ್ತ ರಂಗ ಸರಕಾರ ಮಂಡಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಈ ಸರಕಾರ ಹಿಂದಿನ ಕಾಂಗ್ರೆಸ್ ಸರಕಾರ ಅನುಸರಿಸಿದ ಆರ್ಥಿಕ ನೀತಿಗಳಿಂದಾಗಿ ಎಂತಹ ಪರಿಣಾಮವನ್ನು ಚುನಾವಣೆಯಲ್ಲಿ ಅನುಭವಿಸಿತು ಎಂಬುದನ್ನೂ ಗಮನದಲ್ಲಿಟ್ಟುಕೊಂಡು ಅಂತಹ ಆರ್ಥಿಕ ನೀತಿಯನ್ನು ಬಿಡುತ್ತದೆ ಎಂಬ ನಿರೀಕ್ಷೆಯೂ ಇತ್ತು. ಇಂತಹ ತಿಳುವಳಿಕೆ ಇದ್ದರೆ ಸಹಜವಾಗಿಯೇ ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ಗುತ್ತೇದಾರಿ ಬಂಡವಾಳಶಾಹಿಗಳ ಹಿತಾಸಕ್ತಿಗಳನ್ನು ಮಾತ್ರ ಗಮನಕ್ಕೆ ತೆಗೆದುಕೊಳ್ಳುವ ಬದಲು ದೇಶದ ಜನಸಾಮಾನ್ಯರ ಹಿತಾಸಕ್ತಿಗಳಿಗನುಗುಣವಾದ ಬಜೆಟ್ ಮಂಡಿಸಲಾಗುತ್ತಿತ್ತು. ಈ ಬಂಡವಾಳಿಗರು ಮತ್ತು ಶ್ರೀಮಂತರು ನಮ್ಮ ಜನಸಂಖ್ಯೆಯ ಬರೀ ಶೇ. 15ರಿಂದ 20ರಷ್ಟಿದ್ದಾರೆ ಅಷ್ಟೆ. ಆದರೆ ನಮ್ಮ ಬೃಹತ್ ಜನಸಂಖ್ಯೆಯನ್ನು ಗಮನಿಸಿದರೆ ಈ ಸಂಖ್ಯೆಯೂ ದೊಡ್ಡದು. ಆದರೆ ಈ ಶೇ. 15ರಿಂದ 20ರಷ್ಟು ಜನರಿಗಾಗಿ ಉಳಿದ ಶೇ. 80ರಿಂದ 85ರಷ್ಟು ಜನ ಬೆಲೆ ತೆರುವಂತಾಗಿದೆ. ಈ ಶೇ. 80ರಲ್ಲಿ ಶೇ. 39ರಷ್ಟು ಜನ ಬಡತನ ರೇಖೆಯಿಂದ ಕೆಳಗೇ ಇದ್ದಾರೆ. ಸರ್ವರಿಗೂ ಪ್ರಾಥಮಿಕ ಉಚಿತ ಶಿಕ್ಷಣ ಮತ್ತು ಆರೋಗ್ಯ ನೀಡುವ ಮಾತಿರಲಿ ದೇಶದ ಬಹುತೇಕ ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಸುವುದೂ ಇನ್ನೂ ಸಾಧ್ಯವಾಗಿಲ್ಲ.

ಹೀಗಿರುವಾಗ ಈ ಬಜೆಟ್ ಉದಾರೀಕರಣವನ್ನು ಮುಂದುವರಿಸಿದೆ. ದೇಶದ ದೊಡ್ಡ ಬಂಡವಾಳಿಗರು, ಭೂಮಾಲಕ ವರ್ಗ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಈ ಬಜೆಟ್ಟನ್ನು ಅಪಾರವಾಗಿ ಹೊಗಳಿರುವುದು ಆಕಸ್ಮಿಕವೇನಲ್ಲ. ಬಹುರಾಷ್ಟ್ರೀಯ ಕಂಪನಿಗಳು ಮತ್ತು ಐಎಂಎಫ್‌ಗಳು ಈ ಬಜೆಟ್ ನೀಡಿರುವ ರಿಯಾಯಿತಿ ಮತ್ತು ಪ್ರವೇಶ ದ್ವಾರಗಳನ್ನು ನೋಡಿ ಸಂತಸದಿಂದ ಹುಚ್ಚರಾಗಿದ್ದಾರೆ. ಐಎಂಎಫ್‌ನ ಅಧ್ಯಕ್ಷ ಮೈಕೆಲ್ ಕಾಮ್‌ಡಸಸ್ ಈಗ ಭಾರತದ ಭೇಟಿ ಮಾಡಿರುವುದೂ ಆಕಸ್ಮಿಕವೇನಲ್ಲ, ಇವೆಲ್ಲಾ ವ್ಯವಸ್ಥಿತ ಕಾರ್ಯಕ್ರಮಗಳೂ ಒತ್ತಡ ತಂತ್ರದ ಭಾಗ.

ಬಿಲ್‌ಗೇಟ್ಸ್ ಎಂಬ ಅಮೆರಿಕಾದ ಅತ್ಯಂತ ಶ್ರೀಮಂತ ವ್ಯಕ್ತಿ ಮತ್ತು ಕಂಪ್ಯೂಟರ್ ದೊರೆಯೂ ಇದೇ ಸಮಯದಲ್ಲಿ ಭಾರತಕ್ಕೆ ಭೇಟಿ ನೀಡಿ ಹೋದ. ಈತನ ದರ್ಶನಕ್ಕಾಗಿ ಘಟಾನುಘಟಿಗಳೆಲ್ಲಾ ನೂಕುನುಗ್ಗಲು ನಡೆಸಿದ್ದಂತೂ ನಾಚಿಕೆಗೇಡಿನ ವಿಷಯ. ಬಿಜೆಪಿಯ ಅಧ್ಯಕ್ಷ ಎಲ್.ಕೆ.ಅಡ್ವಾಣಿಯವರೂ ಅರ್ಧ ಗಂಟೆ ಕಾಲ ಈ ಮಹಾಶಯನ ದರ್ಶನಕ್ಕಾಗಿ ಕಾಯಬೇಕಾಯಿತೆಂದರೆ ಇದಕ್ಕಿಂತ ಬೇರೆ ಅಪಮಾನ ಇದೆಯೇ?

ಈ ಬಜೆಟ್ಟಿನಲ್ಲಿ ಶೇ. 26ರಷ್ಟು ಆದಾಯವನ್ನು ಸಾಲ ಮರುಪಾವತಿಗೇ ಇರಿಸಬೇಕಾಗಿದೆಯೆಂದರೆ ನಾವಿಂದು ಸಿಲುಕಿಕೊಂಡಿರುವ ಸಾಲದ ಬಲೆಯ ಅಂದಾಜು ಸಿಗುತ್ತದೆ.

❑ ಈ ಬಜೆಟ್ಟನ್ನು ಬಡವರ-ಪರ ಎಂದು ಕೆಲವರೇಕೆ ಹೊಗಳುತ್ತಿದ್ದಾರೆ.

ಸುರ್ಜಿತ್: ಈ ಬಜೆಟ್ಟಿನಲ್ಲಿ ನಿರುದ್ಯೋಗ ಮತ್ತು ಬಡತನ ಹೋಗಲಾಡಿಸುವ ಯೋಜನೆಗಳನ್ನು ಉಳಿಸಿಕೊಂಡಿರುವುದರಿಂದ. ಇದಲ್ಲದೆ ಹೊಸ ರೇಶನ್ ಪದ್ಧತಿ ಇದಕ್ಕೆ ಹೊಸ ಸೇರ್ಪಡೆ. ಬಡತನ ರೇಖೆಗಿಂತ ಕೆಳಗಿದ್ದವರಿಗೆ ಅರ್ಧ ಬೆಲೆಗೆ ಆಹಾರ ಧಾನ್ಯ ಒದಗಿಸುವ ವ್ಯವಸ್ಥೆ ಇದು. ಇದು 32 ಕೋಟಿ ಜನರಿಗೆ ನೆರವು ನೀಡುವ ನಿರೀಕ್ಷೆ ಇದೆ. ಈ ಯೋಜನೆ ಎಷ್ಟು ಪರಿಣಾಮಕಾರಿಯಾಗುತ್ತದೆಂದು ಕಾದು ನೋಡಬೇಕು. ಯಾಕೆಂದರೆ ಕೇರಳದಂತಹ ರಾಜ್ಯದಲ್ಲಿ ಒಳ್ಳೆ ರೇಷನ್ ವ್ಯವಸ್ಥೆ ಇದೆ. ಇದಕ್ಕೂ ಮಿತಿ ಇದೆ. ಈ ಒಟ್ಟು ಸಹಾಯ ಧನದ ಬರೀ ಶೇ. 20ರಷ್ಟು ಉದ್ದೇಶಿತ ಜನರಿಗೆ ತಲುಪುತ್ತದೆಂದು ಅಧ್ಯಯನಗಳಿಂದ ತಿಳಿದು ಬಂದಿದೆ. ಉದ್ಯೋಗ ಸೃಷ್ಟಿ ಯೋಜನೆಗಳಲ್ಲೂ ಅಷ್ಟೇ ಬರೀ ಶೇ. 15ರಿಂದ 20ರಷ್ಟು ಹಣ ಮಾತ್ರ ಉದ್ದೇಶಿತ ಜನತೆಗೆ ಸೇರುತ್ತದೆ.

❑ ಈ ಬಜೆಟ್ ಉದಾರೀಕರಣದ ನೀತಿಯನ್ನು ಮುಂದುವರಿಸುತ್ತಿದೆಯೇ?

ಸುರ್ಜಿತ್: ಈ ಬಜೆಟ್ಟಿನ ಮುಖ್ಯಾಂಶಗಳನ್ನು ನೋಡಿ. ಆದಾಯ ಕರಗಳಲ್ಲಿ, ಕಂಪನಿ ತೆರಿಗೆಗಳಲ್ಲಿ ಕಡಿತ. ದೊಡ್ಡ ಬಂಡವಾಳಿಗರು ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ರಿಯಾಯಿತಿ. ನೇರ ತೆರಿಗೆ ಶ್ರೀಮಂತರನ್ನು ತಟ್ಟುವಂತಹದ್ದು. ಅದನ್ನು ಕಡಿಮೆ ಮಾಡಲಾಗಿದೆ. ಪರೋಕ್ಷ ತೆರಿಗೆಗಳು ಸಾಮಾನ್ಯ ಜನರ ಹೆಗಲಿಗೆ ಹೋಗುತ್ತವೆ. ಅವುಗಳನ್ನು ಕಡಿಮೆ ಮಾಡಲಾಗಿಲ್ಲ. ಹೆಚ್ಚು ಮಾಡುವ ಸಾಧ್ಯತೆ ಹೆಚ್ಚು. ಕೆಳ ವರ್ಗದವರಿಗೆ ಆದಾಯಕರ ರಿಯಾಯಿತಿ ನೀಡಿದ್ದುಸರಿ. ಆದರೆ ಶ್ರೀಮಂತರ ವರ್ಗಕ್ಕೆ ರಿಯಾಯಿತಿ ಕೊಡುವ ಅವಶ್ಯಕತೆ ಇರಲಿಲ್ಲ. ಇದಲ್ಲದೆ ಆಮದು ಸುಂಕ ಮತ್ತು ಅಬ್ಕಾರಿ ಸುಂಕಗಳಲ್ಲೂ ಕಡಿತ ಮಾಡಲಾಗಿದೆ. ಇದರಿಂದ ದೇಶದ ಮಾರುಕಟ್ಟೆಗೆ ಹೆಚ್ಚು ಐಭೋಗದ ವಸ್ತುಗಳು ಬರುತ್ತವೆ. ದೇಶದ ಸಣ್ಣ ಕೈಗಾರಿಕೆಗಳು ನರಳುತ್ತವೆ/ಸಾಯುತ್ತವೆ. ಇದರಿಂದ ಹೆಚ್ಚು ನಿರುದ್ಯೋಗ ಉಂಟಾಗುತ್ತದೆ.

ಜಮೀನುದಾರರಿಗೆ ಪೂರ್ಣ ತೆರಿಗೆ ವಿನಾಯಿತಿ ನೀಡಲಾಗಿದೆ. ಕೃಷಿ ವ್ಯಾಪಾರ/ರಫ್ತುಗಳಿಂದ ಅಪಾರ ಲಾಭ ಗಳಿಸುವವರಿಗೆ ತೆರಿಗೆ ತೆರುವ ಪ್ರಮೇಯವೇ ಇಲ್ಲ. ವಿದೇಶೀ ಕಂಪನಿಗಳಿಗೂ ದೊಡ್ಡ ರಿಯಾಯಿತಿಗಳನ್ನು ನೀಡಲಾಗಿದೆ. ಉದಾಹರಣೆಗೆ ತೈಲ ಶೋಧನೆಯಲ್ಲಿ ತೊಡಗುವ ಕಂಪನಿಗಳಿಗೆ ಏಳು ವರ್ಷಗಳ ತೆರಿಗೆ ಸೂಟ ನೀಡಲಾಗಿದೆ. ಸರಕಾರ ತನ್ನ ಪ್ರಯತ್ನಗಳನ್ನು ಬಿಟ್ಟು ಬಿಟ್ಟಿದೆ. ಓಎನ್‌ಜಿಸಿಗೆ ಬಹಳ ಕಡಿಮೆ ಹಣ ಒದಗಿಸಲಾಗಿದೆ. ವಿದೇಶೀ ಕಂಪನಿಗಳು ಅಪಾರ ಲಾಭ ಮಾಡಿಕೊಳ್ಳುವುದಲ್ಲದೆ ನಮ್ಮ ಸ್ವಾವಲಂಬನೆಗೆ ಹೊಡೆತ ಬೀಳುತ್ತದೆ.

❑ ಹಣದುಬ್ಬರ ಕಡಿಮೆಯಾಗುತ್ತದೆ ಎನ್ನುತ್ತಾರಲ್ಲ?

ಸುರ್ಜಿತ್: ಸುಳ್ಳು. ನಿಜದಲ್ಲಿ ಈ ಬಜೆಟ್ಟಿನಿಂದ ಹಣದುಬ್ಬರ ಹೆಚ್ಚಾಗುತ್ತದೆ. ಬೆಳವಣಿಗೆಯ ಗತಿ ಹೆಚ್ಚಾಗುವುದರಿಂದ ಮಾತ್ರ ಸಮಸ್ಯೆಗಳ ಪರಿಹಾರವಾಗುವುದಿಲ್ಲ. ಬಡತನ ನಿರುದ್ಯೋಗಗಳ ನಿವಾರಣೆ ಆಗುವಂತಹ ಬೆಳವಣಿಗೆ ಇದ್ದರೆ ಮಾತ್ರ ಅದು ಅರ್ಥಪೂರ್ಣವಾಗುತ್ತದೆ.

ಈಗ ಹಣದುಬ್ಬರವನ್ನೇ ತೆಗೆದುಕೊಳ್ಳುವುದಾದರೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಳದಿಂದ ಇದು ತೀವ್ರ ಹೆಚ್ಚಾಗುತ್ತದೆ. ತೈಲ ಖಾತೆಯಲ್ಲಿ 1800 ಕೋಟಿ ರೂಪಾಯಿಗಳ ಕೊರತೆ ಇದೆ. ಇದನ್ನು ತುಂಬಲು ಬಜೆಟ್ಟಿನಲ್ಲಿ ಪ್ರಯತ್ನಿಸಿಲ್ಲ. ಶ್ರೀಮಂತರಿಗೆ ರಿಯಾಯಿತಿ ನೀಡಿದ ಮೇಲೆ ಈ ಹೊರೆಯನ್ನು ಜನರ ಹೆಗಲಿಗೇ ವರ್ಗಾಯಿಸಲಾಗುತ್ತದೆ. ಅದರ ಪರಿಣಾಮ ಹಣದುಬ್ಬರವೇ?

→

ಅವರವರ ಭಾವಕ್ಕೆ ಅವರವರ ತೆರನಾಗಿ

1997-98ರ ಬಜೆಟ್ಟಿನ ಬಗ್ಗೆ ಕೆಲವು ಗಣ್ಯರು ಹೇಳಿದ್ದು

- ಈ ಬಜೆಟ್ ಸಮಸ್ಯೆಗಳನ್ನು ನಿರ್ಲಕ್ಷಿಸಿ ಸಂಪನ್ಮೂಲಗಳನ್ನು ಪೋಲು ಮಾಡಿದೆ.

  - ಡಾ.ಮನಮೋಹನ ಸಿಂಗ್, ಮಾಜಿ ಹಣಕಾಸು ಸಚಿವ

- ಬೆಳವಣಿಗೆಗೆ ಹೂಡಿಕೆ ಎಂಬುದು ಅರ್ಥ ಮಂತ್ರಿಗಳ ಅಜೆಂಡಾದಿಂದ ತಪ್ಪಿಸಿಕೊಂಡಿಬಿಟ್ಟಿದೆ.

  - ಡಾ.ಅಶೋಕ ಮಿತ್ರ, ಖ್ಯಾತ ಅರ್ಥಶಾಸ್ತ್ರಜ್ಞ

- ಈ ಬಜೆಟ್ಟು ಹೊಸ ತರಹದ ಅಗ್ಗದ ಪ್ರಚಾರ ತಂತ್ರವನ್ನು ಪರಿಚಯಿಸಿದೆ. ಇದನ್ನು ಬಂಡವಾಳಿಗರ ಪ್ರಚಾರ ಎನ್ನಬಹುದು. ಶೇರು ಮಾರುಕಟ್ಟೆ, ವಿದೇಶೀ ಹೂಡಿಕೆದಾರರು, ಉದ್ಯಮಿಗಳು ಮತ್ತು ವ್ಯಾಪಾರಿಗಳನ್ನು ತೃಪ್ತಿಪಡಿಸುವ ತಂತ್ರ ಇದು.

  - ವಿ. ಕುರಿಯನ್, ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ನಿರ್ದೇಶಕರು.

- ಈ ಬಜೆಟ್ಟು ಆರ್ಥಿಕ ಹಿಂಜರಿತದ ಜಯವನ್ನು ತೊಡೆದು ಹಾಕಿದೆ. ಅದು ಎರಡಂಕಿಯ ಔದ್ಯಮಿಕ ಬೆಳವಣಿಗೆ ಸಾಧಿಸಲು ನೆರವಾಗುತ್ತದೆ.

  - ದೀಪಕ್ ಬ್ಯಾಂಕರ್, ಫಿಕ್ಕಿ(ದೊಡ್ಡ ಉದ್ಯಮಿಗಳ ಒಂದು ಸಂಘ)ಯ ಮಾಜಿ ಅಧ್ಯಕ್ಷ

- ಭಾರತೀಯ ಉದ್ಯಮಿಗಳ ಮಹಾ ಮಂಡಳದ(ಸಿಐಐ) ಪ್ರಸ್ತಾಪಗಳನ್ನೆಲ್ಲಾ ಒಪ್ಪಿಕೊಂಡಿರುವುದಕ್ಕೆ ಈ ಬಜೆಟ್ಟನ್ನು ಅಭಿನಂದಿಸಲೇಬೇಕಾಗುತ್ತದೆ.... ಇದು ಎಷ್ಟೊಂದು ಚೆನ್ನಾಗಿದೆಯೆಂದರೆ ಎಲ್ಲೂ ದೋಷವೇ ಕಾಣುವುದಿಲ್ಲ.

  - ಶೇಖರ್ ದತ್ತಾ, ಭಾರತೀಯ ಉದ್ದಿಮೆಗಳ ಮಹಾ ಮಂಡಳದ ಅಧ್ಯಕ್ಷ.

- ಇದು ಆದಾಯ ಮತ್ತು ಆಸ್ತಿಗಳ ಹಂಚಿಕೆಯ ವಿಷಯದಲ್ಲಿ ಅಪಾರ ಅಸಮಾನತೆ ಹುಟ್ಟು ಹಾಕುತ್ತದೆ.

  - ಎಸ್.ಎಲ್. ಶೆಟ್ಟಿ, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯ ಸಂಶೋಧನಾ ವಿಭಾಗದ ನಿರ್ದೇಶಕ.

- 'ತೆರಿಗೆ ಕಡಿತವೇ ಒಂದು ಬಜೆಟ್ಟಿನ ಸದ್ಗುಣ ಎಂದು ಹೊಗಳುವುದಾದರೆ ಯಾವ ದೇಶದಲ್ಲೂ ಯಾವುದೇ ತೆರಿಗೆಯೇ ಉಳಿಯುತ್ತಿರಲಿಲ್ಲ.

  - ಸಿ.ಪಿ. ಚಂದ್ರಶೇಖರ್, ಖ್ಯಾತ ಅರ್ಥಶಾಸ್ತ್ರಜ್ಞ

ಉದಾರೀಕರಣದ ಜಾರು ದಾರಿ

- ಕಾರ್ತಿಕ್ ರೈ

ಕೇಂದ್ರ ಹಣಕಾಸು ಸಚಿವ ಪಿ.ಚಿದಂಬರಂ ತಮ್ಮ ಮೊದಲನೇ ಬಜೆಟ್ ಮಂಡಿಸಿದಾಗ ಬಡವರ ಬಗೆಗೆ ಸ್ವಲ್ಪವಾದರೂ ಕಾಳಜಿ ಕಂಡಿತ್ತು. ಬಜೆಟ್ಟಿನಲ್ಲಿ ಹಣ ತೆಗೆದಿರಿಸಿರಲ್ಲವಾದರೂ ಬಡ ದುಡಿವ ಜನರ ಬಗ್ಗೆ ಕಾಳಜಿಯಿತ್ತು. ಅವರ ಎರಡನೇ ಬಜೆಟ್ಟಿನಲ್ಲಿ ಈ ಕಾಳಜಿಯೂ ಕಾಣೆಯಾಗಿದೆ.

ಪಿ.ಚಿದಂಬರಂ ತೆರಿಗೆ- ಒಟ್ಟುತ್ಪಾದನೆಯ ಅನುಪಾತವನ್ನು ಹೆಚ್ಚಿಸುವ ಮಾತಿನೊಂದಿಗೆ ಬಜೆಟ್ ಭಾಷಣ ಪ್ರಾರಂಭಿಸಿದರು. ಆದರೆ ಭಾಷಣ ಮುಗಿಸುವಾಗ ಅಪಾರ ತೆರಿಗೆ ರಿಯಾಯಿತಿ ನೀಡಿದ್ದರೂ ವೈಯಕ್ತಿಕ ಆದಾಯ ತೆರಿಗೆ, ಕಂಪೆನಿ ತೆರಿಗೆ ಎಲ್ಲಾ ದರಗಳನ್ನು ಇಳಿಸಲಾಗಿತ್ತು. ಸರ್‌ಚಾರ್ಜ್ ಇಲ್ಲವಾಗಿತ್ತು. ಬಂಡವಾಳ ಲಾಭ, ಅನಿವಾಸಿ ಭಾರತೀಯರು ಮತ್ತು ವಿದೇಶೀ ಹೂಡಿಕೆದಾರರ ಮೇಲಿನ ತೆರಿಗೆ ಕಡಿತಗೊಳಿಸಲಾಗಿತ್ತು. ಶ್ರೀಮಂತರೇ ಫಲಾನುಭವಿಗಳಾಗಿರುವ ಈ ತೆರಿಗೆ ರಿಯಾಯಿತಿಯ ಒಟ್ಟು ಮೊತ್ತ ಸುಮಾರು 5000 ಕೋಟಿ ರೂಪಾಯಿಗಳು. ಈ ಪ್ರಮಾಣದ ನಷ್ಟದ ಬಗ್ಗೆ ಪಿ.ಚಿದಂಬರಂ ತಮ್ಮ ಭಾಷಣದಲ್ಲಿ ಹೇಳಲಿಲ್ಲ ಅಷ್ಟೆ. ಒಟ್ಟು ತೆರಿಗೆ ಸಂಗ್ರಹಣೆ ಕಡಿಮೆ ಆಗುವುದಿಲ್ಲ ಎಂದು ಅವರು ವಾದಿಸಬಹುದು. ಆದರೆ ಈ ವಾದ ಹುರುಳಿಲ್ಲದ್ದು ಎಂಬುದು ಜಗತ್ತಿನಾದ್ಯಂತ ಹಲವು ದೇಶಗಳ ಅನುಭವದಿಂದ ಸಿದ್ಧಪಟ್ಟಿದೆ. ಇದು ನಿಜವಾದರೂ ಅದು ತೆರಿಗೆ ಹಾಗೂ ಒಟ್ಟುತ್ಪಾದನೆಯ ನಡುವಿನ ಅನುಪಾತವನ್ನಂತೂ ಹೆಚ್ಚಿಸಲಾರದು.

ತಂತ್ರದ ಬದಲಾವಣೆ

ಚಿದಂಬರಂ ಉದಾರೀಕರಣದ ದಾರಿಯನ್ನೇ ಅನುಸರಿಸಿರುವುದು. ಕಡಿಮೆ ನೇರ ತೆರಿಗೆ ಈ ತಂತ್ರದ ತಿರುಳು(ಶ್ರೀಮಂತ ವರ್ಗಕ್ಕೆ ತೆರಿಗೆ ಕಡಿತ ನೀಡಿದರೆ ಬೆಳವಣಿಗೆ ಹೆಚ್ಚುತ್ತದೆ ಎಂಬುದು ಇದರ ಹಿಂದಿನ ನಂಬಿಕೆ). ಹಾಗೆಯೇ ಕಡಿಮೆ ಆಮದು ಸುಂಕ ಮತ್ತು ಕಡಿಮೆ ಅಬ್ಕಾರಿ ಸುಂಕ. ಆದರೆ ನಿಜದಲ್ಲಿ ಆಮದು ಸುಂಕ ಕಡಿತದಿಂದ ದೇಶದೊಳಗೆ ಉದ್ದಿಮೆ ನಾಶವಾಗುತ್ತದೆ. ಇದರ ಜೊತೆಗೆ ಸರಕಾರದ ಪಾತ್ರ ಮತ್ತು ಸ್ವಭಾವದಲ್ಲಿ ಮಹತ್ತರ ಬದಲಾವಣೆ ಆಗುತ್ತದೆ.

ಈ ಪ್ರಮಾಣದ ತೆರಿಗೆ ರಿಯಾಯಿತಿಯ ಪರಿಣಾಮ ಕೆಳ ಕಾಣಿಸಿದ ಯಾವುದಾದರೊಂದು ರೀತಿಯಲ್ಲಿರುತ್ತದೆ.

1. ಸರಕಾರ ಮಾಡುವ ಉತ್ಪಾದಕ ಹೂಡಿಕೆಯ ಪ್ರಮಾಣ ಕಡಿಮೆಯಾಗುತ್ತದೆ.
2. ಸರಕಾರದ ಹಣಕಾಸು ತೆರಿಗೆ ಸಂಗ್ರಹಣೆ ಮೂಲಕ ಬರುವ ಬದಲು ಸಾಲ ಮತ್ತು ಬೆಲೆ ಏರಿಕೆ ಮೂಲಕ ಬರುತ್ತದೆ. ಇವು ಉದಾರೀಕರಣ ಸೃಷ್ಟಿಸಿರುವ ಅನಿವಾರ್ಯಗಳು.

ಸರಕಾರದ ಕುಂಠಿತ ಪಾತ್ರ ಈ ಬಜೆಟ್ಟಿನಲ್ಲಿ ಸೂಚ್ಯವಾಗಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಕೈಜೋಡಿಸುವ ಪ್ರವೃತ್ತಿಯೂ ಇದರಲ್ಲಿದೆ. ಅವರಿಗೆ ಅಪಾರ ಪ್ರಮಾಣದ ರಿಯಾಯಿತಿ ನೀಡಿರುವುದು ಅದಕ್ಕೇ. ಸರಕಾರ ದೇಶದ ಶ್ರೀಮಂತರಿಂದ ಸಂಪನ್ಮೂಲ ಸಂಗ್ರಹಣೆ ಮಾಡಲು ನಿರಾಕರಿಸಿರುವುದರಿಂದಲೇ ಬಹುರಾಷ್ಟ್ರೀಯ ಕಂಪನಿಗಳನ್ನು ಯಾಚಿಸುವ ಪರಿಸ್ಥಿತಿ ಉಂಟಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಬಜೆಟ್ಟಿನ ಮೂಲಕ(ತೆರಿಗೆ/ ಇತರ ರಿಯಾಯಿತಿಗಳ) ಶ್ರೀಮಂತರಿಗೆ ಸಂಪನ್ಮೂಲಗಳನ್ನು ವರ್ಗಾಯಿಸಲಾಗುತ್ತಿದೆ.

ದೇಶದ ಲೆಕ್ಕ ಪರಿಶೋಧನಾ ಅಧಿಕಾರಿ(ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್) ತೈಲ ವಲಯದಲ್ಲಿ ಈ ಹಿಂದಿನ ಒಪ್ಪಂದಗಳನ್ನು ದೇಶದ ಮಾರಾಟ ಎಂದೇ ವರ್ಣಿಸಿದಾಗಿಯೂ ತೈಲ ಶೋಧನೆಗೆ ಬಹುರಾಷ್ಟ್ರೀಯ ಕಂಪನಿಗಳನ್ನು ಯಾಚಿಸಲಾಗಿದೆ.

ಹೀಗೆಯೇ ಆರೋಗ್ಯ ವಿಮೆಯನ್ನು ತೆರೆದಿರುವುದು ವಿಮಾ ವಲಯವನ್ನೇ ತೆರೆವ ಸೂಚನೆಯಾಗಿದೆ.

ಸಂಖ್ಯಾ ಸರ್ಕಸ್ಸು

ಬಜೆಟ್ಟಿನಲ್ಲಿ ಬಡವರಿಗೆ ಶೇ. 18ರಷ್ಟು ಹೆಚ್ಚು ಹಣ ತೆಗೆದಿರಿಸಲಾಗಿದೆ ಎಂದು ವಾದಿಸಬಹುದು. ಆದರೆ ಈ ಹೆಚ್ಚಳ ಹಿಂದಿನ ಬಜೆಟ್ ಅಂದಾಜಿನ ಮೇಲಲ್ಲ. ಬದಲಿಗೆ ಪರಿಷ್ಕೃತ ಅಂದಾಜಿನ ಮೇಲೆ. ಆದ್ದರಿಂದ ಇದು ನಿಜದಲ್ಲಿ ಅಂತಹ ಹೆಚ್ಚಳವೇ ಅಲ್ಲ. ಬರೀ ಸಂಖ್ಯಾ ಸರ್ಕಸ್ಸು ಅಷ್ಟೆ.

ಹಣಕಾಸು ಸಂಗ್ರಹಣೆ ವಿಷಯದಲ್ಲಿ ತಂತ್ರಗಾರಿಕೆ ಬದಲಾಗಿದೆ ಎಂಬುದು ಸ್ಪಷ್ಟ.

→



ಬಿಜೆಪಿ ಸರಕಾರವನ್ನು ಮಣಿಸಿದ ರೈತ ಸಂಘರ್ಷ

ರಾಜಸ್ಥಾನದ ರೈತರು ಕೆಂಬಾವುಟದಡಿ ಸಂಘಟಿತರಾಗಿ ಹೋರಾಟದ. ಕಣಕ್ಕೆ ಇಳಿದ ವಿಚಾರವನ್ನು 'ಐಕ್ಯರಂಗ'ದ ಹಿಂದಿನ ಸಂಚಿಕೆ ಯಲ್ಲಿ ಓದಿದ್ದೀರಿ. ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ನಡೆಸಿದ ಹೋರಾಟಕ್ಕೆ ಭಾರೀ ಜಯ ದೊರಕಿರುವ ಮಾಹಿತಿ ಇದೀಗ ಬಂದಿದೆ.

ಭೇರವ್ ಸಿಂಗ್ ಶೆಖಾವತ್ ನೇತೃತ್ವದ ಬಿಜೆಪಿ ಸರಕಾರವನ್ನು ಮಣಿಸುವಲ್ಲಿ ರೈತರ ಸಂಘರ್ಷ ಯಶಸ್ವಿಯಾಗಿರುವುದು ಒಂದು ಮಹತ್ವದ ವಿದ್ಯಮಾನವಾಗಿದೆ.

ಇದೇ ಫೆಬ್ರವರಿ 27 ರಂದು ಆರಂಭ ವಾದ ಸಾಮೂಹಿಕ ಧರಣಿ ಮಾರ್ಚ್ ಒಂದರಂದು ಸರಕಾರ ಕೆಲವು ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ಆಶ್ವಾಸನೆ ಕೊಡುವುದರೊಂದಿಗೆ ಯಶಸ್ಸನ್ನು ಕಂಡಿತು.

ಹೋರಾಟಕ್ಕೆ ಸಿಕ್ಕಿದ ಯಶಸ್ಸನ್ನು ಕಿಸಾನ್ ಸಭಾದ ಮುಖಂಡರು ಪ್ರಕಟಿಸುತ್ತಿದ್ದಂತೆ ಸಾವಿರಾರು ರೈತರು ಧರಣಿ ನಡೆಸಿದ ಸ್ಥಳವಾದ ಜಯಪುರದ ಪ್ರತಿಮೆ ಚೌಕ 'ರೈತರ ಒಗ್ಗಟ್ಟು ಚಿರಾಯುವಾಗಲಿ','ಕಿಸಾನ್ ಸಭಾ ಚಿರಾಯುವಾಗಲಿ' ಎಂಬಿತ್ಯಾದಿ ಸ್ಫೂರ್ತಿದಾಯಕ ಘೋಷಣೆಗಳಿಂದ ಅನುರಣಿಸಿತು.

ಕಟಾವು ಆಗುವವರೆಗೆ ಸಾಕಷ್ಟು ವಿದ್ಯುತ್ ಪೂರೈಕೆಗೆ ವ್ಯವಸ್ಥೆ ಮಾಡಲು ಮುಖ್ಯಮಂತ್ರಿ ಶೆಖಾವತ್ ಒಪ್ಪಿದ್ದಾರೆಂದು ಎಐಕೆಎಸ್ ನಾಯಕರು ಧರಣಿ ನಿರತ ರೈತ ಸಮೂಹದ ಮುಂದೆ ಪ್ರಕಟಿಸಿದರು.

ಒಪ್ಪಂದದ ಇತರ ಕೆಲವು ಅಂಶಗಳು ನಗರಗಳಲ್ಲಿರುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಎರಡು ಹಂತಗಳಲ್ಲಿ ವಿದ್ಯುತ್ತನ್ನು ಪೂರೈಸಲಾಗುತ್ತದೆ.

ಸಮಿತಿ ರಚನೆ

ನರ್ಸರಿಗಳ ವಿದ್ಯುತ್ ಸರಬರಾಜಿಗೆ ದರವನ್ನು ನಿಗದಿಪಡಿಸಲು ಸಮಿತಿಯೊಂದನ್ನು ರಚಿಸಲಾಗುತ್ತದೆ. ಈ ಸಮಿತಿಯಲ್ಲಿ ಎಐಕೆಎಸ್ ಮುಖಂಡ ಹಾಗೂ ಸಿಪಿಐ(ಎಂ) ಶಾಸಕ ಅಮ್ರಾ ರಾಮ ಅವರೂ ಇರುತ್ತಾರೆ. ಈ ಸಮಿತಿ 15 ದಿನಗಳೊಳಗೆ ತನ್ನ ವರದಿಯನ್ನು ಸಲ್ಲಿಸಲಿದೆ.

ವಿಶೇಷ ನರ್ಸರಿ ಯೋಜನೆಯನ್ನು ಸಿಕಾರ್, ಝುನ್‌ಝುನು, ನಗೋರ್ ಮತ್ತು ಜಯಪುರಗಳಿಗೂ ವಿಸ್ತರಿಸಲಾಗುತ್ತದೆ. ಈ ವರ್ಷ ಸಾಮಾನ್ಯ ವಿಭಾಗದಲ್ಲಿ ಹತ್ತು ಸಾವಿರ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಸಿಗಲಿದೆ. ಕಳೆದ ವರ್ಷ ಈ ಸಂಖ್ಯೆ 3000 ಆಗಿತ್ತು.

ಸುಟ್ಟುಹೋದ ಟ್ರಾನ್ಸ್‌ಫಾರ್ಮರ್‌ಗಳನ್ನು 24 ಗಂಟೆಗಳೊಳಗಾಗಿ ಬದಲಾಯಿಸಲಾಗುತ್ತದೆ. ಕಳೆದ ಐದು ವರ್ಷಗಳಿಂದ ಚಲಾವಣೆಯಲ್ಲಿಲ್ಲದ ಸಂಪರ್ಕಗಳನ್ನು ಸಾಮಾನ್ಯ ವಿಭಾಗದಲ್ಲಿ ಪುನರುಜ್ಜೀವನಗೊಳಿಸಲಾಗುವುದು.

ಇನ್ನೂ ಇತರ ಕೆಲವು ಬೇಡಿಕೆಗಳನ್ನು ಒಪ್ಪಿಕೊಂಡಿದೆ.

ಎಚ್ಚರಿಕೆ

ಒಪ್ಪಂದವನ್ನು ಮನ್ನಿಸಲು ರಾಜ್ಯ ಸರಕಾರ ವಿಫಲವಾದರೆ ಇನ್ನಷ್ಟು ತೀಕ್ಷ್ಣ ಚಳುವಳಿಯನ್ನು ರೂಪಿಸಲಾಗುತ್ತದೆ ಎಂದು ಹರ್ಷೋಲ್ಲಸಿತರಾದ ರೈತ ಸಮುದಾಯವನ್ನುದ್ದೇಶಿಸಿ ಮಾತನಾಡಿದ ಕಾಂ|| ಅಮ್ರಾ ರಾಮ ಘೋಶಿಸಿದರು.

ಸದಸ್ಯತ್ವ ಆಂದೋಲನವನ್ನು ತೀವ್ರಗೊಳಿಸುವಂತೆ ಹಾಗೂ ಸರಕಾರದೊಂದಿಗೆ ಆಗಿರುವ ಒಪ್ಪಂದದ ಅನುಷ್ಠಾನದ ಖಾತರಿಗಾಗಿ ರಾಜ್ಯಾದ್ಯಂತ ಕಿಸಾನ್ ಸಭಾದ ಶಾಖೆಗಳನ್ನು ರಚಿಸುವಂತೆ ಸಿಪಿಐ(ಎಂ)ನ ಮಾಜಿ ಸಂಸತ್ ಸದಸ್ಯ ಘೆಪೊಪತ್ ಸಿಂಗ್ ಕರೆಕೊಟ್ಟರು.

ಸುಮಾರು ಒಂದು ವಾರ ಕಾಲ ಶಾಂತಚಿತ್ತರಾಗಿ ಶಿಸ್ತುಬದ್ಧ ಧರಣಿ ಸತ್ಯಾಗ್ರಹ ನಡೆಸಿದ ರೈತರು ಒಪ್ಪಂದದ ಸುದ್ದಿ ಬಂದ ಮೇಲೆ ಹಾಡುತ್ತಾ - ಕುಣಿಯುತ್ತಾ ಟ್ರಾಕ್ಟರ್‌ಗಳಲ್ಲಿ, ಜೀಪುಗಳಲ್ಲಿ, ಬಸ್‌ಗಳಲ್ಲಿ ತಮ್ಮ ತಮ್ಮ ಊರುಗಳಿಗೆ ಮರಳಿದರು.

ವಿದ್ಯುತ್ ಬಿಲ್ ಶಾಕ್, ಬಿಜೆಪಿ ಶೈಲಿ!

ದೆಹಲಿಯ ಬಿಜೆಪಿ ಸರಕಾರ ವಿದ್ಯುತ್ ದರಗಳನ್ನು ಸಿಕ್ಕಾ ಪಟ್ಟೆ ಏರಿಸಿದೆ. ಅನಗತ್ಯವಾಗಿದ್ದ, ಜನರಿಗೆ ಭಾರಿ ಹೊರೆ ಯಾದ ಈ ಕ್ರಮವನ್ನು ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ಕಟುವಾಗಿ ಖಂಡಿಸಿದೆ.

ಕಡಿಮೆ ವಿದ್ಯುತ್ ಬಳಸುವವರಿಗೆ ಹೆಚ್ಚಿನ ಹೊರೆಯಾಗುವಂತೆ ದರವನ್ನು ಏರಿಸಿರುವುದು ಬಿಜೆಪಿ ಸರಕಾರದ ಜನವಿರೋಧಿ ಧೋರಣೆಗೆ ಹಿಡಿದ ಕನ್ನಡಿಯಾಗಿದೆ.ಕೆಳಗೆ ಕೊಟ್ಟಿರುವ ಸ್ಲಾಬ್‌ಗಳ ವಿವರ ಸರಕಾರದ ಬಡವರ ವಿರೋಧಿ ನಿಲುವನ್ನು ಸಾಬೀತು ಪಡಿಸುತ್ತದೆ.

100 ಯೂನಿಟ್‌ವರೆಗಿನ ವಿದ್ಯುತ್ ಬಳಕೆದಾರರಿಗೆ ದರವನ್ನು ಶೇಕಡ 66 ರಷ್ಟು ಏರಿಸಲಾಗಿದೆ. 101 ರಿಂದ 200 ಯೂನಿಟ್ ನವರಿಗೆ ಅದು ಶೇ 100 ರಷ್ಟು, 400 ಯೂನಿಟ್‌ಗಿಂತ ಮೇಲ್ಪಟ್ಟ ಬಳಕೆದಾರರಿಗೆ ಏರಿಕೆ ಎಷ್ಟು ಗೊತ್ತೆ? ಕೇವಲ ಶೇಕಡ 25. ಬಡವರ ಪರವಾಗಿ ಬಿಜೆಪಿ ಸುರಿಸುವುದು ಯಾವ ಕಣ್ಣೀರು ಎಂಬುದನ್ನು ಅರಿಯಲು ಇದಕ್ಕಿಂತ ಹೆಚ್ಚಿನ್ನೇನು ಬೇಕು ಅಲ್ಲವೇ?

ವಿದ್ಯುತ್ ಸಾಗಣೆ ನಷ್ಟದಲ್ಲಿ ದೆಹಲಿ ಇಡೀ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. (ಶೇಕಡ 54) ಅಲ್ಲದೆ ದೆಹಲಿಯಲ್ಲಾಗುವ ವಿದ್ಯುತ್ ಕಳವಿನಲ್ಲಿ ಶೇಕಡ 90 ರಷ್ಟು ಪಾಲು ಕೈಗಾರಿಕೆಗಳು ಮತ್ತು ಮಧ್ಯಮ ವರ್ಗದ ಬಳಕೆದಾರರದ್ದು. ದೆಹಲಿ ವಿದ್ಯುತ್ ಪೂರೈಕೆ ಸಂಸ್ಥೆಯ(ಡಿಇಎಸ್‌ಯು) ಭ್ರಷ್ಟ ಅಧಿಕಾರಿಗಳ ಬೆಂಬಲದೊಂದಿಗೆ ಈ ವಿದ್ಯುತ್ ಕಳ್ಳತನ ನಡೆಯುತ್ತಿರುವ ರಹಸ್ಯವೇನಲ್ಲ.

ಈ ರೀತಿಯ ವಿದ್ಯುತ್ ಕಳುವನ್ನು ತಡೆಯಲು ಅಥವಾ ಸಾಗಣೆ ನಷ್ಟವನ್ನು ಕಡಿಮೆ ಮಾಡಲು ಬಿಜೆಪಿ ಸರಕಾರ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಉತ್ಪಾದನೆ ವೆಚ್ಚವನ್ನು ತಗ್ಗಿಸಲು ಕೂಡ ಕ್ರಮ ವಹಿಸಿಲ್ಲ.

ರಾಜಕೀಯ ಪೋಷಣೆಯಲ್ಲಿ ಬೆಳೆದ ಇಲಾಖಾ ಭ್ರಷ್ಟಾಚಾರ, ದೋಷಪೂರ್ಣ ಮೀಟರ್‌ಗಳು, ತಪ್ಪು ತಪ್ಪು ಬಿಲ್‌ಗಳು ಹಾಗೂ ಅನಿಯಮಿತ ಪೂರೈಕೆಗಳಿಂದ ಕಂಗಾಲಾಗಿರುವ ದೆಹಲಿಯ ಜನರು ಡಿಇಎಸ್‌ಯು ಮತ್ತು ಬಿಜೆಪಿ ಸರಕಾರದ ತಪ್ಪುಗಳಿಂದ ಇನ್ನಷ್ಟು ಹೆಚ್ಚಿನ ದರವನ್ನು ತೆರಬೇಕಾಗಿದೆ ಎಂದು ಸಿಪಿಐ(ಎಂ) ವಿಶ್ಲೇಷಿಸಿದೆ.

ಸಾರ್ವಜನಿಕರ ಈ ಲೂಟಿಯನ್ನು ತಡೆಯಲು ಜನತೆ ಸಂಘಟಿತರಾಗಿ ಹೋರಾಟ ನಡೆಸಿ ವಿದ್ಯುತ್ ಶುಲ್ಕದ ಏರಿಕೆಯನ್ನು ವಾಪಾಸು ಪಡೆಯುವಂತೆ ಬಿಜೆಪಿ ಸರಾಕರದ ಮೇಲೆ ಒತ್ತಡ ಹೇರಬೇಕೆಂದು ಪಕ್ಷ ಕರೆ ನೀಡಿದೆ.

ವೇತನ ಆಯೋಗ ಶಿಫಾರಸ್ಸಿಗೆ ಪ್ರತಿಭಟನೆ

ಚೆನ್ನೈ: ಹತ್ತು ವರ್ಷಗಳಲ್ಲಿ 3.5 ಲಕ್ಷ ಹುದ್ದೆಗಳನ್ನು ತೆಗೆದು ಹಾಕುವುದು ಹಾಗೂ ಉದ್ಯೋಗದಲ್ಲಿ ಶೇಕಡ 30 ರಷ್ಟು ಕಡಿತ ಮೊದಲಾದ ಜನವಿರೋಧಿ ಅಂಶಗಳನ್ನೊಳಗೊಂಡ ಐದನೇ ವೇತನ ಆಯೋಗದ ವರದಿಯನ್ನು ವಿರೋಧಿಸಿ ತಮಿಳುನಾಡಿನಲ್ಲಿ ಕೆಲಸ ಮಾಡುತ್ತಿರುವ ಕೇಂದ್ರ ಸರಕಾರಿ ನೌಕರರು ರಾಜ್ಯದ ಹಲವೆಡೆ ಕಾರ್ಯಕ್ರಮಗಳನ್ನು ನಡೆಸಿದರು.

ಫೆಬ್ರವರಿ 27ರಂ ಚೆನ್ನೈನಲ್ಲಿ(ಮದ್ರಾಸ್) ಹತ್ತು ಸಾವಿರಕ್ಕೂ ಹೆಚ್ಚು ಕೇಂದ್ರ ಸರಕಾರಿ ನೌಕರರು ರಾಜಭವನದವರೆಗೆ ಮೆರವಣಿಗೆಯಲ್ಲಿ ತೆರಳಿ ಪ್ರತಿಭಟನೆಯನ್ನು ನಡೆಸಿದರು. ರ‍್ಯಾಲಿಯಲ್ಲಿ ಸುಮಾರು ಒಂದು ಸಾವಿರ ಮಹಿಳಾ ನೌಕರರೂ ಇದ್ದರು. ಕಚೇರಿ ಕೆಲಸದ ವೇಳೆ ಮುಗಿದ ನಂತರ ನಡೆದ ಕಾರ್ಯಕ್ರಮದಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ನೌಕರರು ಪಾಲ್ಗೊಂಡಿದ್ದು ವಿಶೇಷ ಎಂದು ಐಎನ್‌ಎನ್ ವರದಿ ಮಾಡಿದೆ.

ಬಿಜೆಪಿಗೆ ಮಣ್ಣು ಮುಕ್ಕಿಸಿದ ಆದಿವಾಸಿಗಳು

ಪೋಲೀಸ್ ದೌರ್ಜನ್ಯ...ಗೋಲಿಬಾರ್,..ಆದಿವಾಸಿಗಳ ಹತ್ಯೆ........ ಸಿಪಿಐ(ಎಂ) ಕಾರ್ಯಕರ್ತರ ಸಾಮೂಹಿಕ ಬಂಧನ....

ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಜಿಲ್ಲಾ ಪರಿಷತ್ ಮತ್ತು ಪಂಚಾಯತ್ ಸಮಿತಿ ಚುನಾವಣೆಗಳಲ್ಲಿ ಜಯವನ್ನು ಖಾತರಿಪಡಿಸಲು ಆಳುವ ಶಿವಸೇನೆ-ಬಿಜೆಪಿ ಕೂಟದ ಶತ ಪ್ರಯತ್ನದ ಅಂಗವಾಗಿ ಈ ಮೇಲಿನ ವಿದ್ಯಮಾನಗಳು.

ಆದರೆ ಕೆಂಬಾವುಟದ ಮೇಲ ಅತೀವ ವಿಶ್ವಾಸ, ಗೌರವ ಇಟ್ಟಿರುವ ಆದಿವಾಸಿ ಜನರ ದೃಢ ನಿರ್ಧಾರದ ಮುಂದೆ ಈ ದುಷ್ಟಕೂಟದ ಆಟ ಸಾಗಲೇ ಇಲ್ಲ.

ತಲಸಾರಿ ತಹಸೀಲ್‌ನ ಎಲ್ಲಾ ಮೂರು ಜಿಲ್ಲಾ ಪರಿಷತ್ ಸ್ಥಾನಗಳು ಮತ್ತು ಪಂಚಾಯತಿ ಸಮಿತಿಯ ಆರು ಸ್ಥಾನಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಅಪೂರ್ವ ಜಯ ದಾಖಲಿಸಿದ್ದಾರೆ.

ವಾಸ್ತವವಾಗಿ ಬಿಜೆಪಿ ಐದು ಸ್ಥಾನಗಳಲ್ಲಿ ಠೇವಣಿಯನ್ನೇ ಕಳೆದುಕೊಂಡಿದೆ. ಸಿಪಿಐ(ಎಂ)ನ ಜಯದ ಅಂತರ ಕಳೆದ ಸಲದ ಚುನಾವಣೆಗಳಿಗಿಂತ ಹೆಚ್ಚಾಗಿರುವುದು ಇನ್ನೂ ಗಮನಾರ್ಹವಾಗಿದೆ.

ಪೋಲೀಸ್ ಭಯೋತ್ಪಾದನೆ ಮೂಲಕ ಚುನಾವಣೆಯನ್ನು ಗೆಲ್ಲಲು ಯೋಜಿಸಿದ್ದ ಬಿಜೆಪಿ ನಾಯಕರಿಗೆ ಆದಿವಾಸಿ ಮತದಾರರು ಸರಿಯಾದ ಉತ್ತರ ನೀಡಿದ್ದಾರೆ ಎಂದು ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿ ಕಾರ್ಯದರ್ಶಿ ಪ್ರಭಾಕರ ಸಾಂದುವಗಿರಿ ಹೇಳಿದ್ದಾರೆ.

ಜನವರಿ 26 ರ ತಲಸಾರಿ ಹಿಂಸಾಚಾರ ಬಿಜೆಪಿಯ ಬೆಳೆಯುತ್ತಿರುವ ಪ್ರಭಾವವನ್ನು ತಡೆಯಲು ಸಿಪಿಐ(ಎಂ) ನಡೆಸಿದ ಯೋಜಿತ ಕೃತ್ಯ ಎಂಬ ಬಿಜೆಪಿಯ ಅಪಪ್ರಚಾರಕ್ಕೆ ಈ ಫಲಿತಾಂಶ ಸರಿಯಾದ ಉತ್ತರ ನೀಡಿದೆ. ಈ ಫಲಿತಾಂಶದ ಹಿನ್ನೆಲೆಯಲ್ಲಿ ಬಂಧಿತ ಸಿಪಿಐ(ಎಂ) ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕು ಹಾಗೂ ಅವರ ವಿರುದ್ಧ ಹೂಡಿರುವ ಸುಳ್ಳು ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು ಎಂದು ಕಾಂ|| ಸಾಂಝ್‌ಗಿರಿ ಒತ್ತಾಯಿಸಿದ್ದಾರೆ.

ಮಹಿಳಾ ಸಂಘಟನೆ ಸಮ್ಮೇಳನ

ಕಣ್ಣೂರು: ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ(ಎಐಡಿಡಬ್ಲ್ಯೂಎ) ಕೇರಳ ರಾಜ್ಯ ಘಟಕದ ಐದನೇ ಸಮ್ಮೇಳನ ಮಾರ್ಚ್ 3 ರಿಂದ 5 ರವರೆಗೆ ಕಣ್ಣೂರಿನಲ್ಲಿ ನಡೆಯಿತು.

ಸಂಘಟನೆಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಸಮ್ಮೇಳನವನ್ನು ಉದ್ಘಾಟಿಸಿದರು.

ಸಮ್ಮೇಳನದ ಅಂಗವಾಗಿ ಸಾವಿರಾರು ಮಹಿಳೆಯರ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಯಿತು. ಸಮವಸ್ತ್ರಧಾರಿ ಹಾಗೂ ತರಬೇತಾದ ಮಹಿಳಾ ಸ್ವಯಂ ಸೇವಕರು ಮೆರವಣಿಗೆಗೆ ವಿಶೇಷ ಮೆರುಗನ್ನು ನೀಡಿದರು. ಇದು ಕೇರಳದಲ್ಲಿ ನಡೆದ ಅತ್ಯಂತ ದೊಡ್ಡ ಮಹಿಳಾ ರ‍್ಯಾಲಿ ಎಂದು ಬಣ್ಣಿಸಲಾಗಿದೆ.

ಚಕ್ಮಾ ನಿರಾಶ್ರಿತರು ಸ್ವದೇಶ ವಾಪಸು ಒಪ್ಪಂದಕ್ಕೆ ಸಿಪಿಐ(ಎಂ) ಸ್ವಾಗತ

ಈಗ ತ್ರಿಪುರಾದಲ್ಲಿರುವ 50000 ಚಕ್ಮಾ ನಿರಾಶ್ರಿತರನ್ನು ಬಾಂಗ್ಲಾದೇಶಕ್ಕೆ ವಾಪಾಸು ಕಳಿಸಲು ಬಾಂಗ್ಲಾದೇಶ ಸರಕಾರದೊಂದಿಗೆ ಆಗಿರುವ ಒಪ್ಪಂದವನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸ್ವಾಗತಿಸಿದೆ. ಬಾಂಗ್ಲಾದೇಶ ಅಧಿಕಾರಿಗಳು ಮತ್ತು ಚಕ್ಮಾ ನಿರಾಶ್ರಿತರ ಮುಖಂಡರ ನಡುವೆ ಸಹಿ ಹಾಕಲ್ಪಟ್ಟ ಒಪ್ಪಂದದಿಂದ ಚಕ್ಮಾ ಸಮಸ್ಯೆಗೆ ಪರಿಹಾರ ಹುಡುಕುವ ದಾರಿಯೀಗ ಪ್ರಶಸ್ತವಾಗಿದೆ. ನಿರಾಶ್ರಿತರ ಪುನರ್ವಸತಿಗೆ ಹಣಕಾಸು ನೆರವು ಹಾಗೂ ಚಿತ್ತಗಾಂಗ್ ಗುಡ್ಡಗಾಡು ಪ್ರದೇಶದಲ್ಲಿ ಭೂ ಹೀನರಿಗೆ ಭೂಮಿ ಕೊಡುವ ಅಂಶ ಈ ಒಪ್ಪಂದದಲ್ಲಿ ಇದೆ.

ಈ ದೀರ್ಘಕಾಲದ ಸಮಸ್ಯೆಯನ್ನು ಪರಿಹರಿಸುವುದಲ್ಲದೆ ಈ ಒಪ್ಪಂದ ಭಾರತ ಹಾಗೂ ಬಾಂಗ್ಲಾದೇಶದ ನಡುವಿನ ಸಂಬಂಧಗಳನ್ನು ಇನ್ನಷ್ಟು ಬಲಪಡಿಸಲು ನೆರವಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.

ಅಪರಿಚಿತರ ಬಗ್ಗೆ ಎಚ್ಚರ

ಹಲವಾರು ವ್ಯಕ್ತಿಗಳು ತಾವು ಕ್ರಾಂತಿಕಾರಿಗಳೆಂದು ನಟಿಸುತ್ತಾ ಪಕ್ಷದ ಸದಸ್ಯರನ್ನು, ಸಾಮೂಹಿಕ ಸಂಘಟನೆಗಳ ಮುಖಂಡರನ್ನು, ಕಾರ್ಯಕರ್ತರನ್ನು ಹಾದಿ ತಪ್ಪಿಸುತ್ತಾ, ಹಣ ಇತ್ಯಾದಿ ವಂಚಿಸುವುದು ಆಗಾಗ ಬೆಳಕಿಗೆ ಬರುತ್ತಿದೆ.

ಇಂತಹ ಒಂದು ಘಟನೆ ಇತ್ತೀಚೆಗೆ ದ.ಕ. ಜಿಲ್ಲೆಯ ಮಂಗಳೂರು ನಗರದ ಅಸುಪಾಸಿನಲ್ಲಿ ನಡೆದ ವರದಿಯಾಗಿದೆ.

ಮಿಲ್ಕಾಸಿಂಗ್ ಎಂದು ಹೆಸರಿಸಿಕೊಂಡ 60 ವರ್ಷ ದಾಟಿದ ಎಡ ಕೈಯನ್ನು ಕಳೆದುಕೊಂಡಿರುವ ವ್ಯಕ್ತಿಯೊಬ್ಬರು ತಾನು ಭಾರತ - ರಶಿಯಾ ಮೈತ್ರಿ ಕೂಟದ ಕಾರ್ಯಕರ್ತ ಎಂದು ಹೇಳಿಕೊಳ್ಳುತ್ತಿದ್ದಾರೆ. ಫೆಬ್ರವರಿ ತಿಂಗಳಲ್ಲಿ ದ.ಕ. ಜಿಲ್ಲಾ ಎಸ್‌ಎಫ್‌ಐ ಸಮ್ಮೇಳನದ ಸಂದರ್ಭದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿದ್ದು ನಂತರ ಪಕ್ಕಲಕ್ಕದಲ್ಲಿ ಕಾರ್ಯಕ್ರಮವನ್ನು ನಡೆಸಿ ಟಿ.ಪಿ.ಕೊಡವುದಾಗಿ ಹೇಳಿ ಸಾಧಾರಣ ರೂ. 5000 ದಷ್ಟು ಹಣ ಸಂಗ್ರಹ ಮಾಡಿದ್ದಾರೆಂದು ತಿಳಿದುಬಂದಿದೆ. ಅಲ್ಲದೆ ಡಿವೈಎಫ್‌ಐನ ಲೆಟರ್‌ಹೆಡ್ ಅನ್ನು ದುರುಪಯೋಗ ಪಡಿಸಿಕೊ ಳ್ಳುತ್ತಿರುವುದು ಬೆಳಕಿಗೆ ಬಂದಿದೆ.

ಗೌರಿಬಿದನೂರಿನಲ್ಲಿ ನಡೆದ ಕೋಲಾರ ಜಿಲ್ಲಾ ಡಿವೈಎಫ್‌ಐ ಸಮ್ಮೇಳನದ ಸಂದರ್ಭದಲ್ಲಿ ಈ ವ್ಯಕ್ತಿ ಪ್ರತ್ಯಕ್ಷಗೊಂಡು ದ.ಕ. ಜಿಲ್ಲಾ ಸಮಿತಿಯ ಲೆಟರ್‌ಹೆಡ್ ಅನ್ನು ತೋರಿಸಿ ತಾನು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದಾಗಿ ತಿಳಿಸಿದಾಗ, ಅನುಮಾನಗೊಂಡ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕಾಂ|| ಎಸ್.ವೈ.ಗುರುಶಾಂತ್ ಮಂಗಳೂರಿಗೆ ಪತ್ರ ಬರೆದಾಗ ವಿಷಯ ಬೆಳಕಿಗೆ ಬಂದಿದೆ.

ಪಕ್ಷದ, ಸಾಮೂಹಿಕ ಸಂಘಟನೆಗಳ ಸಂಗಾತಿಗಳು ಮೇಲೆ ಹೇಳಿದ ವ್ಯಕ್ತಿಯ ಬಗ್ಗೆ ಜಾಗರೂಕರಾಗುವುದು ಮಾತ್ರವಲ್ಲದೆ, ಅಪರಿಚಿತ ವ್ಯಕ್ತಿಗಳು ಬೇಕಾಬಿಟ್ಟಿಯಾಗಿ ಸಂಘಟನೆಯೊಳಗೆ ನುಸುಳುವುದಕ್ಕೆ ಯಾವುದೇ ಅವಕಾಶ ನೀಡುವುದು ಸರಿಯಲ್ಲ.

ಡಿವೈಎಫ್‌ಐ ಕಾರ್ಯಕರ್ತರ ಮೇಲೆ ಹಲ್ಲೆ: ಕ್ರಮಕ್ಕೆ ಒತ್ತಾಯ

ಕೊಳ್ಳೆಗಾಲ: ಕೊಳ್ಳೆಗಾಲ ತಾಲ್ಲೂಕು ಲೋಕ್ಕನಹಳ್ಳಿ ಗ್ರಾಮ ಘಟಕದ ಡಿವೈಎಫ್‌ಐ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿ ಊರಿನಲ್ಲಿ ದಾಂಧಲೆ ನಡೆಸಿದ್ದಾರೆ ಎಂದು ಕೊಳ್ಳೆಗಾಲ ತಾಲ್ಲೂಕು ಸಮಿತಿ ತಿಳಿಸಿದೆ.

ಇತ್ತೀಚೆಗೆ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಗ್ರಾಮಕ್ಕೆ ಭೇಟಿ ನೀಡಿದಾಗ ಡಿವೈಎಫ್‌ಐ ಕಾರ್ಯಕರ್ತರು ತಾಲ್ಲೂಕಿನಲ್ಲಿ ಹಾಗೂ ಲೋಕನ ಹಳ್ಳಿ ಗ್ರಾಮದಲ್ಲಿ ಪಡಿತರ ವ್ಯವಸ್ಥೆಯಲ್ಲಿ ಭಾರೀ ಅವ್ಯವಹಾರ ನಡೆಯುತ್ತಿರುವುದನ್ನು ಸರಿಪಡಿಸಬೇಕೆಂದು ಒತ್ತಾಯಿಸುವ ಮನವಿಯನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ನೀಡಲಾಯಿತು. ಇದರಿಂದ ಕುಪಿತಗೊಂಡ ಗೂಂಡಾಗಳು ಡಿವೈಎಫ್‌ಐ ಕಾರ್ಯ ಕರ್ತರ ಮೇಲೆ ಹಲ್ಲೆ ನಡೆಸಿ ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಿಸಿದ್ದಾರೆ. ಆದ್ದರಿಂದ ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಡಿವೈಎಫ್‌ಐ ತಾಲ್ಲೂಕು ಸಮಿತಿ ಒತ್ತಾಯಿಸಿದೆ.

ದಕ್ಷಿಣ ಅಲ್ಬೇನಿಯಾದಲ್ಲಿ ಸಶಸ್ತ್ರ ದಂಗೆ

ಅಲ್ಬೇನಿಯಾ ತೀವ್ರ ರಾಜಕೀಯ ಬಿಕ್ಕಟ್ಟಿನಲ್ಲಿ ಸಿಕ್ಕಿಬಿದ್ದಿದೆ. ಆ ದೇಶದ ದಕ್ಷಿಣ ಭಾಗದಲ್ಲಿ ಸರಕಾರದ ವಿರುದ್ಧ ಸಶಸ್ತ್ರ ದಂಗೆ ಎದ್ದಿದ್ದು, ಪೂರ್ಣ ಪ್ರಮಾಣದ ಆಂತರಿಕ ಸಮರಕ್ಕೆ ಎಡೆಕೊಟ್ಟಿದೆ. ಅಧ್ಯಕ್ಷ ಸಾಲಿ ಬೆರಿಶಾರ ರಾಜೀನಾಮೆಗೆ ಒತ್ತಾಯ ಬಂದಿದೆ. ದೇಶದ ದಕ್ಷಿಣ ಭಾಗದಲ್ಲಿ ಸರಕಾರದ ಅಧಿಪತ್ಯ ಹೆಚ್ಚು ಕಡಿಮೆ ಕುಸಿದು ಬಿದ್ದಿದೆ.

ಆಳುವ ಡೆಮಾಕ್ರೆಟಿಕ್ ಒಕ್ಕೂಟ ಪಕ್ಷದ ಸರಕಾರ ರಾಜಿನಾಮೆ ನೀಡಿದೆ. ಅಧ್ಯಕ್ಷ ಬೆರಿಶಾ ಮಾತ್ರ ಅಧಿಕಾರಕ್ಕೆ ಅಂಟಿಕೊಂಡಿದ್ದಾರೆ. ತೀವ್ರ ರಾಜಕೀಯ ಬಿಕ್ಕಟ್ಟು ಆರಂಭವಾದದ್ದು 'ಪಿರಾಮಿಡ್ಸ್ ಫಂಡ್' ಎಂದು ಅಲ್ಬೇನಿಯಾದಲ್ಲಿ ಕರೆಯಲಾಗುವ ಫಂಡ್‌ನ ಹಗರಣದಿಂದ 'ಪಿರಾಮಿಡ್ ಫ್ರಾಂಡ್ಸ್' ಹಗರಣದಲ್ಲಿ ಸಾವಿರಾರು ಅಲ್ಬೇನಿಯಾ ತಮ್ಮ ಜೀವನ ಪರ್ಯಂತ ಬಿಳಿಕಾಯದ ಹಣವನ್ನು ತೊಡಗಿಸಿದ್ದು, ಈ ಹಗರಣದ ಫಲವಾಗಿ ಕಳೆದುಕೊಂಡಿದ್ದಾರೆ ಈ ಹಗರಣದ ವಿರುದ್ಧ ಪ್ರತಿಭಟಿಸಿ, ಇದರಲ್ಲಿ ಸರಕಾರ ಶಾಮೀಲಾಗಿದ್ದ ಆರೋಪದ ಬಗ್ಗೆ ವಿಚಾರಣೆ ನಡೆಸಬೇಕು. ಈ ಹಗರಣದಲ್ಲಿ ಹಣ ಕಳೆದುಕೊಂಡವರಿಗೆ ಪರಿಹಾರ ಕೊಡಬೇಕು, ಈ ಸರಕಾರ ರಾಜೀನಾಮೆ ನೀಡಿ ಸರ್ವಪಕ್ಷ ಸರಕಾರ ರಚನೆಯಾಗಬೇಕು ಎಂದು ಪ್ರತಿಭಟನೆಕಾರರ ಒತ್ತಾಯ. ಆದರೆ ಆ ಬೇಡಿಕೆ ಮನ್ನಿಸದೆ ಅಧ್ಯಕ್ಷ ಬೆಂಶಾರ್ ಸರಕಾರ ಮಿಲಿಟರಿ ಆಡಳಿತವನ್ನು ಹರಿಯ ಬಿಟ್ಟಿದೆ. ತುರ್ತ ಪರಿಸ್ಥಿತಿಯನ್ನು ಜಾರಿಗೆ ತರಲಾಗಿದ್ದು, ಸೈನ್ಯ ಹಾಗೂ ದಂಗಾಕೋರರ ನಡುವೆ ಸಶಸ್ತ್ರ ಕದನಗಳು ನಡೆದಿದೆ. ದಕ್ಷಿಣದ ಹಲವಾರು ಪಟ್ಟಣಗಳ ದಂಗಾಕೋರರ ವಶವಾಗಿದೆ. ಪರಿಸ್ಥಿತಿ ತೀವ್ರವಾಗಿ ಬಿಗಡಾಯಿಸುತ್ತಿರುವಾಗ, ಅಧ್ಯಕ್ಷರು ಪಾರ್ಲಿಮೆಂಟನ್ನು ಕರೆದು, ವಿರೋಧ ಪಕ್ಷ ಬಹಿಷ್ಕಾರ ಹಾಕಿದರೂ ತಮ್ಮನ್ನು ಪುನರಾಯ್ಕೆ ಮಾಡಿಕೊಂಡಿದ್ದಾರೆ. ಇದು ಈ ರಾಜಕೀಯ, ಸಾಮಾಜಿಕ ಬಿಕ್ಕಟ್ಟು ಇನ್ನಷ್ಟುತೀವ್ರವಾಗಲುಕಾರಣವಾಯಿತು.

ಈಗ ಸರಕಾರ ಹಾಗೂ ದಂಗಾಕೋರರ ನಡುವೆ 48 ದಿನಗಳ ಕದನ ವಿರಾಮ ಒಪ್ಪಂದವಾಗಿದೆ. ಆದರೆ ದಂಗಾಕೋರರ ಬೇಡಿಕೆ ಬಗ್ಗೆ ಯಾವುದೇ ನಿಜವಾದ ಒಪ್ಪಂದ ಆಗಿಲ್ಲ.

1991 ರಲ್ಲಿ ಕಮ್ಯುನಿಸ್ಟ್ ಸರಕಾರದ ಪತನದ ನಂತರ ಬಂಡವಾಳಶಾಹಿ ಪರ ಬಲಪಂಥೀಯ ಡೆಮಾಕ್ರೆಟಿಕ್ ಒಕ್ಕೂಟ ಪಕ್ಷದ ಸರಕಾರ ಅಧಿಕಾರಕ್ಕೆ ಬಂತು. ಆಗ ನಡೆದ ಚುನಾವಣೆಯಲ್ಲಿ ಭಾರಿ ಮೋಸ, ಅಕ್ರಮಗಳ ಮೂಲಕ, ಸೋಶಲಿಸ್ಟ್ ಪಕ್ಷ(ಹಿಂದಿನ ಕಮ್ಯುನಿಸ್ಟ್ ಪಕ್ಷ ಹೆಸರು ಬದಲಾಯಿಸಿದ ನಂತರ) ವನ್ನು ಅಧಿಕಾರದಿಂದ ಹೊರಗಿಡಲಾಯಿತೆಂದು ಈಗ ಬೆಳಕಿಗೆ ಬಂದಿದೆ.

1991ರನಂತರ ಜಾರಿಗೆ ಬಂದ 'ಪಿರಮಿಡ್ಸ್ ಫಂಡ್' ಆಳುವ ಪಕ್ಷದ ವ್ಯಕ್ತಿಗಳ ಕುಮ್ಮಕ್ಕಿನಿಂದ ನಡೆಯುತ್ತಿತ್ತು. ಬೇರೆ ಬ್ಯಾಂಕುಗಳಿಂದ ಹೆಚ್ಚು ಬಡ್ಡಿ ಕೊಡುತ್ತಿದ್ದ ಈ ಫಂಡ್‌ನಲ್ಲಿ ಹಗರಣಗಳ ವಾಸನೆ ಹಿಂದನೇ ಬಂದಿತ್ತು. ಆಳುವ ಪಕ್ಷದ ರಾಜಕಾರಣಿಗಳು ಈ ಫಂಡ್‌ನ ಹಣವನ್ನು ದುರುಪಯೋಗ ಮಾಡುತ್ತಿದ್ದರು ಎಂದು ವದಂತಿಗಳಿದ್ದವು. ಆದರೆ 'ಫಂಡ್'ದೀವಾಳಿಯಾಗುವವರೆಗೆದೊಡ್ಡ ಮೋಸ ಎಂದು ತಿಳಿದಿರಲಿಲ್ಲ.ಇದುಭ್ರಷ್ಟ ಬಂಡವಾಳಶಾಹಿವ್ಯವಸ್ಥೆಯಭಾಗಎಂದು ಜನರಿಗೆಅರಿವಾಗಿದೆ.ಆದ್ದರಿಂದಸರಕಾರದ ವಿರುದ್ಧ ತೀವ್ರ ಕೋಪ ವ್ಯಕ್ತವಾಗಿದೆ.

ಲೋಕಸಂಚಾರ



ಶರತ್‌ಚಂದ್ರ

ನೇಪಾಳದಲ್ಲಿ ಮತ್ತೆ ಹೊಸ ಸರ್ಕಾರ

ನೇಪಾಳದಲ್ಲಿ ನೇಪಾಳ ಕಾಂಗ್ರೆಸ್ ನಾಯಕತ್ವದ ಮೂರು ಪಕ್ಷಗಳ ಸಮ್ಮಿಶ್ರ ಸರಕಾರ ವಿಶ್ವಾಸಮತ ಕಳೆದುಕೊಂಡು ಬಿದ್ದು ಹೋಗಿದೆ. ನೇಪಾಳದ ರಾಜ ಈ ಬಗ್ಗೆ ಪ್ರಕಟಣೆ ಹೊರಡಿಸಿದ್ದು ಮಾರ್ಚ್ 10 ರೊಳಗೆ ಬದಲಿ ಸರಕಾರ ರಚಿಸುವಂತೆ ಹೇಳಿದ್ದಾರೆ. ಪಾರ್ಲಿಮೆಂಟಿನಲ್ಲಿ ಅತಿ ದೊಡ್ಡ ಪಕ್ಷವಾದ ನೇಪಾಳ ಕಮ್ಯುನಿಸ್ಟ್ ಪಕ್ಷ ಮತ್ತೆ ಅಧಿಕಾರಕ್ಕೆ ಬರುವ ಸಾಧ್ಯತೆಗಳಿದ್ದವು. ಆದರೆ ಈಗ ರಾಷ್ಟ್ರೀಯ ಪ್ರಜಾತಂತ್ರ ಪಾರ್ಟಿ(ಆರ್.ಪಿ.ಪಿ.)ಯಿಂದ ಸಿಡಿದು ಬಂದ ಲೋಕೇಂದ್ರ ಬಹಾದೂರ್ ಚಾಂದ್‌ರ ನೇತೃತ್ವದಲ್ಲಿ ಮೂರು ಪಕ್ಷಗಳ ಸಮ್ಮಿಶ್ರ ಸರಕಾರ ಅಧಿಕಾರಕ್ಕೆ ಬಂದಿದೆ. ಇದರಲ್ಲಿ ನೇಪಾಳೀ ಕಮ್ಯುನಿಸ್ಟ್ ಪಕ್ಷ ಅತಿ ದೊಡ್ಡ ಪಕ್ಷವಾದರೂ ಕೊನೆಗೆ ಚಾಂದ್‌ರವರನ್ನು ಪ್ರಧಾನ ಮಂತ್ರಿಗಳಾಗಿ ಬೆಂಬಲಿಸಲು ನಿರ್ಧರಿಸಿತು. ಹೊಸ ಸಮ್ಮಿಶ್ರ ಸರಕಾರದಲ್ಲಿರುವ ಪಕ್ಷಗಳೆಂದರೆ 90 ಸದಸ್ಯರಿರುವ ಕಮ್ಯುನಿಸ್ಟ್ ಪಕ್ಷ, 10 ಮಂದಿ ಆರ್.ಪಿ.ಪಿ.ಯಿಂದ ಸಿಡಿದು ಬಂದವರು ಹಾಗೂ ಒಬ್ಬ ಸದ್ಭಾವನಾ ಪಾರ್ಟಿ ಸದಸ್ಯರು. ಈ ಹಿಂದೆ ತನ್ನದೇ ಪಕ್ಷದ ವಿರುದ್ಧ ಕ್ಷಿಪ್ರಕ್ರಾಂತಿ ನಡೆಸಿದ ಜಿ.ಪಿ.ಕೊಯಿರಾಲಾ ಪಕ್ಷಾಂತರಗಳಿಂದ ಸಮ್ಮಿಶ್ರ ಸರಕಾರ ರಚಿಸುವ ಸಂಭವವಿದ್ದುದರಿಂದ ಅದನ್ನು ತಡೆಯಲು ಕಮ್ಯುನಿಸ್ಟ್ ಪಕ್ಷ ಈ ಸಮ್ಮಿಶ್ರ ಸರಕಾರದಲ್ಲಿ ಸೇರಿಕೊಂಡಿದೆ. ಜಿ.ಪಿ.ಕೊಯಿರಾಲಾ ಕುಖ್ಯಾತ ಕಮ್ಯುನಿಸ್ಟ್-ವಿರೋಧಿಗಳು. ಹೊಸ ಸಮ್ಮಿಶ್ರ ಸರಕಾರ ಒಂದು ಸಮಾನ ಕನಿಷ್ಠ ಕಾರ್ಯಕ್ರಮವನ್ನು ಅಂಗೀಕರಿಸಿದ್ದು ಅದು ಮುಖ್ಯವಾಗಿ ಹಿಂದಿನ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರಕಾರದ ಅಜೆಂಡಾವನ್ನೇ ಹೊಂದಿದೆ. ಆದರೂ ನೇಪಾಳೀ ಕಮ್ಯುನಿಸ್ಟ್ ಪಕ್ಷ ಬಹಳ ಜಾಗರೂಕತೆಯಿಂದ ಮುನ್ನಡೆಯಬೇಕಾಗಿದೆ.

ಫ್ರೆಂಚ್ ವಲಸೆಗಾರ-ವಿರೋಧಿ ಕಾನೂನು ವಿರುದ್ಧ ಪ್ರತಿಭಟನೆ

ಫ್ರಾನ್ಸಿನ ಸರಕಾರ ಇತ್ತೀಚೆಗೆ ಪಾರ್ಲಿಮೆಂಟ್‌ನ ಮುಂದೆ ಮಂಡಿಸಿದ್ದ ವಲಸೆಗಾರ-ವಿರೋಧಿ ಕಾನೂನನ್ನು ಪ್ರತಿಭಟಿಸಿ ಫ್ರಾನ್ಸಿನಾದ್ಯಂತ ತೀವ್ರ ಪ್ರತಿಭಟನಾ ಪ್ರದರ್ಶನಗಳಾಗಿವೆ. ಪ್ಯಾರಿಸಿನಲ್ಲಿ ನಡೆದ ಅತಿದೊಡ್ಡ ಪ್ರದರ್ಶನದಲ್ಲಿ ಬುದ್ಧಿಜೀವಿಗಳು, ಫಿಲಂ ಡೈರಕ್ಟರುಗಳು, ವಿದ್ಯಾರ್ಥಿಗಳು, ಸಾಮೂಹಿಕ ಸಂಘಟನೆಗಳು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದವು.

ಈ ಕಾನೂನಿನ ಪ್ರಕಾರ ಫ್ರಾನ್ಸಿಗೆ ಕಾನೂನು-ಬಾಹಿರವಾಗಿ ಬಂದು ನೆಲೆಸಲು ಯತ್ನಿಸಿದವರ ಬಗ್ಗೆ ಪೋಲೀಸರಿಗೆ ತಿಳಿಸುವುದು ಎಲ್ಲಾ ನಾಗರೀಕರ ಕರ್ತವ್ಯ. ಈರೀತಿ ಮಾಡದೆ ಇರುವುದು ಶಿಕ್ಷಾರ್ಹ ಅಪರಾಧ.

ವಲಸೆಗಾರರ ಬಗ್ಗೆ ಪ್ರಜಾಸತ್ತೆ-ವಿರೋಧಿ ಕಾನೂನು ಮಾತ್ರವಲ್ಲ, ಎಲ್ಲಾ ನಾಗರೀಕರನ್ನು ಪೋಲೀಸು ಏಜೆಂಟರಂತೆ ಮಾಡಬಯಸುವ ಈ ಕಾನೂನಿನ ವಿರುದ್ಧ ಸ್ವಾಭಾವಿಕವಾಗಿಯೇ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಕಾನೂನಿಗೆ ಬೆಂಬಲ ವ್ಯಕ್ತಪಡಿಸಿದ್ದು ಫ್ರಾನ್ಸಿನ ಫ್ಯಾಸಿಸ್ಟ್ ಪಕ್ಷ ಪೊಂಕಾ. ಈ ಫ್ಯಾಸಿಸ್ಟ್ ಪಕ್ಷದ ಬೆಂಬಲವನ್ನು ಈ ಕಾನೂನಿನ ಮೂಲಕ ತಡೆಯುವ ಪ್ರಯತ್ನವೇ ಈ ಕಾನೂನು ಅಂತ ಕಾಣುತ್ತದೆ. ಫ್ರೆಂಚ್ ಸರಕಾರ ಕಳೆದ ಎರಡು ವರ್ಷದ ಭಾರಿ ಕಾರ್ಮಿಕ ವರ್ಗದ ಮುಷ್ಕರ, ಪ್ರತಿಭಟನೆ ಎದುರಿಸುತ್ತಿದ್ದು ಜನರ ಗಮನ ಬೇರಡೆ ಸೆಳೆಯಲು ಸರಕಾರ ಈ ಕಾನೂನನ್ನು ಬಳಸಿಕೊಳ್ಳುತ್ತಿದೆ. ಈ ಪ್ರತಿಭಟನೆ ಫ್ರಾನ್ಸ್ ಅತ್ಯಂತ ರಾಜಕೀಯ ಪ್ರಜ್ಞೆ ಬೆಳೆದ ದೇಶ, ಎಂದಿನಂತೆ ಬಂಡವಾಳಶಾಹಿಗೆ ಪ್ರತಿರೋಧ ತೋರುವಲ್ಲಿ ಮುಂಚೂಣಿಯಲ್ಲಿರುತ್ತದೆ ಎಂದು ತೋರಿಸುತ್ತದೆ.

ಕ್ಯೂಬಾದ ಜತೆ ಕೆನಡಾ ಒಪ್ಪಂದ-ಅಮೆರಿಕದ ದಿಗ್ಬಂಧನಕ್ಕೆ ಧಿಕ್ಕಾರ

ಕ್ಯೂಬಾ ಜತೆ ಯಾವುದೇ ರಾಜಕೀಯ, ವಾಣಿಜ್ಯ, ಆರ್ಥಿಕ ಸಂಪರ್ಕ ಹೊಂದಬಾರದೆಂಬ ಇತರ ದೇಶಗಳ ಕಂಪೆನಿಗಳ ಮೇಲೆ ನಿರ್ಬಂಧ ಹೇರಿರುವ ಅಮೆರಿಕದ ಕಾನೂನನ್ನು ಕೆನಡಾ ಬಲವಾಗಿ ವಿರೋಧಿಸಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಕೆನಡಾ-ಕ್ಯೂಬಾ ಸಮಗ್ರ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದೆ. ಇತ್ತೀಚೆಗೆ ಕೆನಡಾ-ಕ್ಯೂಬಾಗಳ ವಿದೇಶ ಮಂತ್ರಿಗಳು 14 ಅಂಶಗಳ ಸಹಕಾರ ಒಪ್ಪಂದವೊಂದಕ್ಕೆ ಸಹಿ ಹಾಕಿದರು. ಇದರಲ್ಲಿ ಅಮೆರಿಕದ ಕ್ಯೂಬಾ ವಿರೋಧಿ ಕಾನೂನಿನ ವಿರುದ್ಧ ಜಂಟಿಯಾಗಿ ಹೋರಾಡುವ ಒಂದು ಅಂಶವಿದೆ. ವೈಜ್ಞಾನಿಕ, ಸಾಂಸ್ಕೃತಿಕ ವಿನಿಮಯ ಹಾಗೂ ವಾಣಿಜ್ಯ ಸಂಬಂಧ ವಿಸ್ತರಿಸುವ ಬಗೆಗೂ ಒಪ್ಪಂದದಲ್ಲಿ ಹಲವು ಅಂಶಗಳಿವೆ.

ಪಾರ್ಲಿಮೆಂಟು, ಪೇಪರ್, ಟಿ.ವಿ., ಅಧ್ಯಕ್ಷರನ್ನು ನಂಬದ ಅಮೆರಿಕನ್ನರು!

ಅಮೆರಿಕನ್ನರು ಪಾರ್ಲಿಮೆಂಟು, ಪೇಪರು, ಟಿವಿ, ಕೊನೆಗೆ ಅಧ್ಯಕ್ಷರು ಸತ್ಯ ಹೇಳುತ್ತಾರೆ ಎಂದು ನಂಬುವುದಿಲ್ಲ. ಇದು ಊಹಾಪೋಹವಲ್ಲ. ಸಮೀಕ್ಷೆಯೊಂದರ ಪ್ರಕಾರ ಟಿವಿಯನ್ನು ನಂಬುವವರು ಶೇಕಡಾ ಒಂದರಷ್ಟು. ಪೇಪರು ಸುದ್ದಿ ನಂಬುವವರು ಶೇ 2. ವಕೀಲರನ್ನು ನಂಬುವವರು ಶೇಕಡಾ 3, ಅಧ್ಯಕ್ಷರು ಹಾಗೂ ಪಾರ್ಲಿಮೆಂಟನ್ನು ನಂಬುವವರು ಶೇಕಡಾ ನಾಲ್ಕು.

ಸಮೀಕ್ಷೆ ಪ್ರಕಾರ ಶೇಕಡಾ 82 ಜನ ಪ್ರಾಕೃತಿಕ ಪ್ರಕೋಪ, ಇತರ ಅಘಾತಗಳನ್ನು ವರದಿ ಮಾಡುವಾಗ, ಜನತೆಯ ನೋವಿಗಿಂತ ಸುದ್ದಿಯನ್ನು ಅತಿರಂಜಿತಗೊಳಿಸುವುದು, ಉತ್ಪ್ರೇಕ್ಷಿಸುವುದೇ ವರದಿಗಾರನ ಉದ್ದೇಶ. ಇದು ಆರೋಗ್ಯಕರ ಎಂದು ಅಭಿಪ್ರಾಯಪಟ್ಟಿದ್ದಾರೆ. ಶೇಕಡಾ 63 ಜನ ವರದಿಗಳು 'ವಿಶಿಷ್ಟ ಹಿತಾಸಕ್ತಿ'ಇರುವಗುಂಪಿನಇಚ್ಛೆಗೆ ಅನುಸಾರವಾಗಿ ತಿರುಚಲ್ಪಡುತ್ತವೆಎಂದು ಅಭಿಪ್ರಾಯ ಪಟ್ಟಿದ್ದಾರೆ. ಶೇ. 90 ಜನ ಲಾಭ ಮಾಡುವಸುದ್ದಿಮಾಧ್ಯಮಗಳಮುಖ್ಯ ಲಕ್ಷಣ ಸುದ್ದಿಯ ಮೇಲೆ ಪ್ರಮುಖ ಪರಿಣಾಮ ಬೀರುತ್ತಿವೆ. ಶೇಕಡಾ 34 ಮಾತ್ರ ಪತ್ರಿಕಾಸ್ವಾತಂತ್ರ್ಯ ಕಾಪಾಡುವುದು ಮುಖ್ಯ ಉದ್ದೇಶವಾಗಿದೆ ಎಂಬುದರ ಬಗ್ಗೆ ಆಸಕ್ತಿ ವ್ಯಕ್ತಪಡಿಸಿದ್ದಾರೆ.

ಸಿಐಟಿಯು ನೇತೃತ್ವದಲ್ಲಿ ಬೀಡಿ ಕಾರ್ಮಿಕರ ಬೃಹತ್ ರ್‍ಯಾಲಿ

ಅಖಿಲ ಭಾರತ ಬೀಡಿ ಕಾರ್ಮಿಕ ಒಕ್ಕೂಟ(ಸಿಐಟಿಯು)ದ ನೇತೃತ್ವದಲ್ಲಿ ಮಾರ್ಚ್ 3ರಂದು ದಿಲ್ಲಿಯಲ್ಲಿ ಒಂದು ಬೃಹತ್ ಮತಪ್ರದರ್ಶನ ನಡೆಯಿತು. ಮಿನಿ ಸಿಗರೇಟುಗಳಿಗೆ ನೀಡಿದ ಅಬಕಾರಿ ಸುಂಕದ ರಿಯಾಯಿತಿಯನ್ನು ಹಿಂತೆಗೆದುಕೊಳ್ಳಬೇಕು, ಬ್ರಾಂಡೆಡ್ ಅಲ್ಲದ 20 ಲಕ್ಷಕ್ಕಿಂತ ಕೆಳಗಿನ ಬೀಡಿಗಳಿಗೆ ನೀಡಿರುವ ಅಬಕಾರಿ ಸುಂಕ ಹಾಗೂ ಮೇಲು ತೆರಿಗೆ ವಿನಾಯಿತಿಯನ್ನು ಹಿಂತೆಗೆದುಕೊಳ್ಳಬೇಕು, ಅಗತ್ಯ ಆಧಾರಿತ ಕೂಲಿ ನಿರ್ಧರಿಸುವವರೆಗೆ ಒಂದು ಸಾವಿರ ಬೀಡಿಗೆ ಅಖಿಲ ಭಾರತ ಬೆಲೆ ಸೂಚ್ಯಂಕ(ಆಧಾರ 1960)ದ 1300 ಪಾಯಿಂಟಿಗಳಿಗೆ 50 ರೂ. ಮೂಲ ದಿನಗೂಲಿ ಹಾಗೂ ಪ್ರತಿ ಪಾಯಿಂಟು ಏರಿಕೆಗೆ 5 ಪೈಸೆ ತುಟ್ಟಿಭತ್ಯೆ ನೀಡಬೇಕು, ಮಹಿಳಾ ಬೀಡಿ ಕಾರ್ಮಿಕರಿಗೆ ಸಮಾನ ಕೂಲಿ, ಎಲ್ಲಾ ಬೀಡಿ ಕಾರ್ಮಿಕರಿಗೆ ವಸತಿ ಸೌಕರ್ಯ, ಭವಿಷ್ಯ ನಿಧಿಯನ್ನು ಮುಟ್ಟದೆ ಎಲ್ಲಾ ಬೀಡಿ ಕಾರ್ಮಿಕರಿಗೆ ಪೆನ್ಷನ್ ಹಾಗೂ ಎಲ್ಲಾ ಬೀಡಿ ಕಾರ್ಮಿಕರಿಗೆ ಮನೆಯಲ್ಲಿ ಕೆಲಸ ಮಾಡುವ ಬೀಡಿ ಕಾರ್ಮಿಕರಿಗೂ ಗುರುತು ಚೀಟಿ ನೀಡಬೇಕು ಎಂದು ಒತ್ತಾಯಿಸಿ ಈ ಬೃಹತ್ ರ್‍ಯಾಲಿ ನಡೆಯಿತು.

ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಕರ್ನಾಟಕ, ಕೇರಳ, ಆಂಧ್ರಪ್ರದೇಶ, ರಾಜಾಸ್ಥಾನ ಇತ್ಯಾದಿ ರಾಜ್ಯಗಳಿಂದ 10 ಸಾವಿರ ಕಾರ್ಮಿಕರು ಬಂದಿದ್ದರು. ಇವರಲ್ಲಿ ಮಹಿಳೆಯರೂ ಬಹುಸಂಖ್ಯೆಯಲ್ಲಿದ್ದರು. ಮುಖ್ಯವಾಗಿ ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಾಸ್ತಾನಗಳಿಂದ ಇವರು ಬಂದಿದ್ದರು. ರಾಜಾಸ್ತಾನದ ಬರ್ಮೆರ್‌ನಿಂದ ಒಬ್ಬ 103 ವರ್ಷದ ಬೀಡಿ ಕಾರ್ಮಿಕಳು ಬಂದಿದ್ದಳು.

ರಾಮಲೀಲಾ ಮೈದಾನದಿಂದ ಆರಂಭವಾದ ಮೆರವಣಿಗೆ 6 ಕಿಲೋಮೀಟರ್ ನಡೆದು ಜಂತರ್ ಮಂತರ್ ಪೋಲೀಸ್ ಸ್ಟೇಶನ್ ಬಳಿ ಸಂಸದ್ ಮಾರ್ಗವನ್ನು ತಲುಪಿದಾಗ ಪೋಲೀಸರು ಅವರನ್ನು ತಡೆದರು. ಅಲ್ಲೇ ಸಾರ್ವಜನಿಕ ಸಭೆ ನಡೆದು ಸಂಸತ್ ಸದಸ್ಯರಾದ ಇ.ಬಾಲಾನಂದನ್, ಹನ್ನನ್ ಮೊಲ್ಲಾ, ಮಹಮ್ಮದ್ ಸಲೀಂ, ದೀಪಂಕರ್ ಮುಖರ್ಜಿ, ನಿಲೋತ್ಪಲ್ ಬಸು, ಓ.ಭರತನ್, ಎ.ಸಂಪತ್, ರಾಧಾಕೃಷ್ಣಮೂರ್ತಿ, ರಾಮಚಂದ್ರ ದೋವ್ ಮತ್ತಿತರರು ಮಾತನಾಡಿದರು.

ರ್‍ಯಾಲಿಯನ್ನುದ್ದೇಶಿಸಿ ಪಿ.ಕೆ.ಗಂಗೂಲಿ ಮತ್ತಿತರ ಸಿಐಟಿಯು ಮುಖಂಡರೂ ಮಾತನಾಡಿದರು.

ನಂತರ ಬೀಡಿ ಕಾರ್ಮಿಕರ ಪರವಾಗಿ ಒಂದು ನಿಯೋಗ ಪ್ರಧಾನಮಂತ್ರಿ ಹಣಕಾಸು ಮಂತ್ರಿ ಹಾಗೂ ಕಾರ್ಮಿಕ ಮಂತ್ರಿಗಳನ್ನು ಭೇಟಿಯಾಗಿ ಸ್ಮರಣ ಪತ್ರ ಸಲ್ಲಿಸಿತು. ತಮ್ಮ ಬಹುದಿನಗಳ ಬೇಡಿಕೆಗಳು ಈಡೇರದಿದ್ದರೆ ಜಬಲ್‌ಪುರದಲ್ಲಿ ಸದ್ಯದಲ್ಲೇ ಸಭೆ ಸೇರಿ ಮುಂದಿನ ಕಾರ್ಯಾಚರಣೆಯ ಬಗ್ಗೆ ನಿರ್ಧರಿಸುವುದಾಗಿಒಕ್ಕೂಟ ತಿಳಿಸಿದೆ.(ಐಎನ್‌ಎಸ್)

ಜನತೆಯ ಅಭಿವೃದ್ಧಿಗೆ ಶಿಕ್ಷಣ

ಎಸ್‌ಎಫ್‌ಐ ಅಖಿಲ ಭಾರತ ಸಮ್ಮೇಳನದ ಘೋಷಣೆ

ನಮ್ಮ ದೇಶದ ಜನ-ವಿರೋಧಿ ಶಿಕ್ಷಣ ನೀತಿಯ ವಿರುದ್ಧ ಹೋರಾಟವನ್ನು ಮುಂದುವರಿಸಲು ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್‌ಐ)ನ ಒಂಭತ್ತನೇ ಅಖಿಲ ಭಾರತ ಸಮ್ಮೇಳನ ನಿರ್ಧರಿಸಿದೆ. ಕಲ್ಕತ್ತೆಯಲ್ಲಿ ನಡೆದ ಈ ಸಮ್ಮೇಳನ ಒಂದು ಬೃಹತ್ ರ್‍ಯಾಲಿಯೊಂದಿಗೆ ಫೆಬ್ರವರಿ 24 ರಂದು ಪೂರ್ಣಗೊಂಡಿತು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಈ ಸಮ್ಮೇಳನ ಆರಿಸಿದ ಹೊಸ ಕೇಂದ್ರ ಕಾರ್ಯದರ್ಶಿ ಮಂಡಳಿ ಶಿಕ್ಷಣ ವಲಯದಲ್ಲಿನ ಧೋರಣೆಗಳಲ್ಲಿ ಮಧ್ಯಪ್ರವೇಶಿಸಲು ಸಾಧ್ಯವಾಗುವಂತೆ ಒಂದು ಸಮಗ್ರ ಪರ್ಯಾಯ ಶಿಕ್ಷಣ ನೀತಿಯನ್ನು ರೂಪಿಸಬೇಕೆಂದು ನಿರ್ಧರಿಸಲಾಯಿತು. "ಜನತೆಯ ಅಭಿವೃದ್ಧಿಗೆ ಶಿಕ್ಷಣ" ಎಂಬ ಘೋಷಣೆಯನ್ನು ಅಂಗೀಕರಿಸಿದ ಸಮ್ಮೇಳನ ಈ ಪರಿಕಲ್ಪನೆಯನ್ನು ಜನಜನಿತಗೊಳಿಸಲು ನಿರ್ಧರಿಸಿತು.

ಈ ಸಮ್ಮೇಳನ ಇನ್ನೊಂದು ಪ್ರಮುಖ ನಿರ್ಧಾರವೆಂದರೆ ರಾಷ್ಟ್ರದ ರಾಜಧಾನಿಯಲ್ಲಿ ಒಂದು ಬೃಹತ್ ವಿದ್ಯಾರ್ಥಿ ರ್‍ಯಾಲಿ "ಅಖಿಲ ಭಾರತ ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ವಿದ್ಯಾರ್ಥಿ ಸಂಘಟನೆಗಳ ವೇದಿಕೆ"ಯ ನೇತೃತ್ವದಲ್ಲಿ ನಡೆಸುವುದು. ಈ ರ್‍ಯಾಲಿಯ ಪ್ರಮುಖ ಬೇಡಿಕೆಗಳು ಹೀಗಿವೆ:

- ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣ. ಇದಕ್ಕಾಗಿ ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸಿಕೊಟ್ಟು ಅದಕ್ಕೆ ಸೂಕ್ತ ಹಣಕಾಸು ಅಧಿಕಾರವನ್ನು ವಹಿಸಿಕೊಡುವುದು ಹಾಗೂ ಇದರಲ್ಲಿ ಜನಗಳ ಭಾಗವಹಿಸುವಿಕೆಗೆ ಅವಕಾಶ.
- ಶಿಕ್ಷಣದ ಲಂಗುಲಗಾಮಿಲ್ಲದ ವ್ಯಾಪಾರೀಕರಣಕ್ಕೆ ತಡೆ. ಉಚ್ಚ ಶಿಕ್ಷಣ ಸಂಸ್ಥೆಗಳ ಉತ್ತಮಿಕೆಯನ್ನು ಹೆಚ್ಚಿಸುವುದು.
- ಶಿಕ್ಷಣವನ್ನು ರಾಜ್ಯಪಟ್ಟಿಗೆ ವರ್ಗಾಯಿಸಬೇಕು. ಜತೆಗೆ ಸೂಕ್ತ ಹಣಕಾಸು ಅಧಿಕಾರಗಳನ್ನು ನೀಡಬೇಕು. ಕೇಂದ್ರ ಬಜೆಟ್‌ನ ಶೇ. 10ನ್ನು ಶಿಕ್ಷಣಕ್ಕೆ ನೀಡಬೇಕು. ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ. 6ನ್ನು ಶಿಕ್ಷಣದಲ್ಲಿ ಹೂಡಬೇಕು.
- ಎಲ್ಲಾ ಮಟ್ಟಗಳಲ್ಲಿ ಮಾತೃಭಾಷೆ ಶಿಕ್ಷಣದ ಮಾಧ್ಯಮವಾಗಬೇಕು. ತಕ್ಷಣದಿಂದಲೇ ಎಲ್ಲಾ ಅಖಿಲ ಭಾರತ ಮಟ್ಟದ ಪ್ರವೇಶ ಪರೀಕ್ಷೆಗಳನ್ನು ಮಾತೃಭಾಷೆಯಲ್ಲಿ ನಡೆಸಬೇಕು.
- ಕೃಷಿ ಮತ್ತು ತಾಂತ್ರಿಕ ಶಿಕ್ಷಣವನ್ನು ಶಿಕ್ಷಣದ ಮುಖ್ಯ ಪ್ರವೇಶಕ್ಕೆ ತರಬೇಕು. ಸಾರ್ವತ್ರಿಕ ಶಿಕ್ಷಣದಲ್ಲಿ ಶೇ. 50 ರನ್ನಾದರೂ ವೈಜ್ಞಾನಿಕ ವೃತ್ತಿಪರ ಶಿಕ್ಷಣವಾಗಿರುವಂತೆ ಮಾಡಬೇಕು. ಇದಕ್ಕೆ ಅನುಕೂಲವಾಗುವಂತೆ ಶಿಕ್ಷಣ ಯೋಜನೆಗೂ ಕೃಷಿ ಹಾಗೂ ಕೈಗಾರಿಕಾ ಉತ್ಪಾದನಾ ಪ್ರಕ್ರಿಯೆಗೂ ಸಂಪರ್ಕ ಕಲ್ಪಿಸಬೇಕು.

ಎಸ್‌ಎಫ್‌ಐನ 9ನೇ ಸಮ್ಮೇಳನ 81 ಸದಸ್ಯರುಳ್ಳ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಆರಿಸಿತು. ಈ ಸಮಿತಿ ಕರ್ನಾಟಕದ ಕೆ.ಪ್ರಕಾಶ್‌ರವರೂ ಸೇರಿದಂತೆ 15 ಸದಸ್ಯರು ಹಾಗೂ ಒಬ್ಬ ವಿಶೇಷ ಆಹ್ವಾನಿತರಿರುವ ಕೇಂದ್ರ ಕಾರ್ಯದರ್ಶಿ ಮಂಡಳಿಯನ್ನು ಆರಿಸಿತು. ಎಸ್‌ಎಫ್‌ಐನ ಈ ಹೊಸ ಪದಾಧಿಕಾರಿಗಳ ಹೆಸರುಗಳು ಹೀಗಿವೆ:

ಅಧ್ಯಕ್ಷರು

ಕೆ.ಎನ್.ಬಾಲಗೋಪಾಲ್

ಉಪಾಧ್ಯಕ್ಷರು

ಸೋಮನಾಥ್ ಭಟ್ಟಾಚಾರ್ಯ

ಪಿ.ರಾಜೇಶ್

ತಪನ್ ದತ್ತ

ಎಂ.ರಾಮಕೃಷ್ಣನ್

ಸುಪ್ರಕಾಶ್ ತಾಲೂಕ್‌ದಾರ್

ಕುಶಲ್ ಭಾರದ್ವಾಜ್

ಪ್ರಧಾನ ಕಾರ್ಯದರ್ಶಿ

ಬ್ರತಿನ್ ಸೇನ್‌ಗುಪ್ತಾ

ಜಂಟಿ ಕಾರ್ಯದರ್ಶಿಗಳು

ಸಮಿಕ್ ಲಾಹಿರಿ

ಪಿ.ಕೃಷ್ಣಪ್ರಸಾದ್

ಪಾರ್ಥೊ ಮುಖರ್ಜಿ

ಸಿ.ಹೆಚ್.ಅಶಿಕ್

ಕೆ.ಪ್ರಕಾಶ್

ಜೆ.ವೆಂಕಟೇಶ್

ಝಾಕಿರ್ ಅಲಿ

ವಿಶೇಷ ಆಹ್ವಾನಿತರು

ಪುಷ್ಪೇಂದರ್ ಕೆ.ತ್ಯಾಗಿ

(ಐಎನ್‌ಎಸ್)

ಸಿಐಟಿಯು ಸಮ್ಮೇಳನ ಮುಂದಿಟ್ಟ ಬೇಡಿಕೆಗಳು

ಬೆಂಗಳೂರಿನಲ್ಲಿ ನಡೆದ ಸಿಐಟಿಯು. 7ನೇ ರಾಜ್ಯ ಸಮ್ಮೇಳನ ರೂಪಿಸಿದ ರಾಜ್ಯವ್ಯಾಪಿ ಚಳುವಳಿಯ ಬೇಡಿಕೆಗಳು ಈ ಕೆಳಗಿನಂತಿವೆ:

1. ಕಾರ್ಮಿಕ ಸಂಘಗಳೊಂದಿಗೆ, ಸಾಮೂಹಿಕ ಸಂಘಟನೆಗಳೊಂದಿಗೆ, ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚಿಸಿ ಏರಿಸಿರುವ ಬಸ್ ದರಗಳನ್ನು ಇಳಿಸಬೇಕು.
2. ಕೆ.ಎಸ್.ಆರ್.ಟಿ.ಸಿ.ಯನ್ನು ವಿಭಜನೆ ಮಾಡುವುದನ್ನು, ಖಾಸಗೀಕರಣ ಮಾಡುವುದನ್ನು ಕೈಬಿಡಬೇಕು.
3. ಫ್ಯಾಕ್ಟರಿ ಆಕ್ಟ್, ಪ್ಲಾಂಟೇಶನ್ ಲೇಬರ್ ಆಕ್ಟ್ ಮೊದಲಾದ ಎಲ್ಲಾ ಕಾರ್ಮಿಕ ಕಾನೂನುಗಳಲ್ಲಿರುವ ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಿಸಿದ ಅಂಶಗಳನ್ನು ಜ್ಯಾರಿ ಮಾಡಬೇಕು.
4. ಕೈಗಾರಿಕಾ ವಿವಾದಗಳಲ್ಲಿ ಮಾಲೀಕರ ಪರವಾಗಿ ಪೋಲೀಸರು ಮಧ್ಯಪ್ರವೇಶ ಮಾಡುವುದು ನಿಲ್ಲಬೇಕು.
5. ಕಾರ್ಮಿಕ ಇಲಾಖೆಯ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಬೇಕು.
6. ಕಾರ್ಮಿಕ ನ್ಯಾಯಾಲಯಗಳು ಕೊಡುವ ಅವಾರ್ಡುಗಳ ಪ್ರಯೋಜನ ಕಾರ್ಮಿಕರಿಗೆ ಕೂಡಲೇ ಸಿಕ್ಕಬೇಕು. ಗೆಜೆಟ್‌ನಲ್ಲಿ ಪ್ರಕಟವಾಗುವವರೆಗೆ ಕಾಯಿಸಬಾರದು.
7. ಕನಿಷ್ಠ ಕೂಲಿಯು ಬಡತನದ ರೇಖೆಯ ಮೇಲೆ ಇರಬೇಕು, ಕನಿಷ್ಠ ಕೂಲಿಯನ್ನು ಕಾಲಕಾಲಕ್ಕೆ ಪುನರ್ವಿಮರ್ಶೆ ಮಾಡುವಂತೆ ಮತ್ತು ಕನಿಷ್ಠ ಕೂಲಿಯನ್ನು ಬೆಲೆ ಸೂಚ್ಯಂಕಕ್ಕೆ ಜೋಡಿಸುವಂತೆ ಕನಿಷ್ಠ ಕೂಲಿ ಕಾಯಿದೆಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಬೇಕು.
8. ಕೃಷಿ ಕೂಲಿಕಾರರಿಗೆ ದಿನಕ್ಕೆ ರೂ. 60 ಕನಿಷ್ಠ ಕೂಲಿಯನ್ನು ನಿಗದಿ ಮಾಡಿ ಪ್ರಕಟಿಸಬೇಕು. ಕನಿಷ್ಠ ಕೂಲಿಯನ್ನು ಬೆಲೆಸೂಚ್ಯಂಕಕ್ಕೆ ಜೋಡಿಸಿ ಬೆಲೆ ಏರಿದಂತೆ ತುಟ್ಟಿಭತ್ತೆ ಸಿಕ್ಕುವಂತಾಗಬೇಕು.
9. ಖಾಯಂಸ್ವರೂಪದ ಕೆಲಸದಲ್ಲಿ ಕಾಂಟ್ರಾಕ್ಟ್ ಪದ್ಧತಿಯನ್ನು ನಿಷೇಧಿಸಬೇಕು. ಈಗಾಗಲೇ ಖಾಯಂ ಕೆಲಸಗಳಲ್ಲಿ ಇರುವ ಕಾರ್ಮಿಕರ ಸೇವೆಯನ್ನು ಕ್ರಮಬದ್ಧಗೊಳಿಸಬೇಕು.
10. ರೋಗಗ್ರಸ್ತ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಿ ನಡೆಸಬೇಕು. ಈ ಸಂಬಂಧವಾಗಿ ಕಾರ್ಮಿಕ ಸಂಘಗಳೊಂದಿಗೆ ಸಮಾಲೋಚಿಸಬೇಕು.
11. ಸಾರ್ವಜನಿಕ ಕ್ಷೇತ್ರದಲ್ಲಿರುವ ಕೈಗಾರಿಕೆಗಳ ಖಾಸಗೀಕರಣ ನಿಲ್ಲಬೇಕು. ವಿದ್ಯುಚ್ಛಕ್ತಿಯನ್ನು ಕರ್ನಾಟಕ ಪವರ್ ಕಾರ್ಪೋರೇಶನ್ ಮೂಲಕ ಉತ್ಪಾದಿಸಬೇಕು. ಆಗ ಉತ್ಪಾದನಾ ವೆಚ್ಚ ಕಡಿಮೆಯಾಗುವುದು. ಗ್ರಾಹಕರಿಗೆ ಯೋಗ್ಯ ದರದಲ್ಲಿ ವಿದ್ಯುಚ್ಛಕ್ತಿಯನ್ನು ಪೂರೈಸಬಹುದು. ಕೈಗಾರಿಕೆಗಳು ನಡೆಯಲು ಅವಶ್ಯಕವಾದ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು.
12. ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಕೊಟ್ಟಿರುವ ತೀರ್ಪಿನ ಪ್ರಕಾರ ಅಂಗನವಾಡಿ ಸಹಾಯಕಿಯರ ಸೇವೆಯನ್ನು ಕ್ರಮಬದ್ಧಗೊಳಿಸಿ ಆ ಪ್ರಕಾರ ಅವರಿಗೆ ವೇತನವನ್ನು ಕೊಡಬೇಕು.
13. ಪಂಚಾಯತ್ ನೌಕರರಿಗೆ ಸೇವಾ ನಿಯಮಗಳನ್ನು ಸೇವಾಭದ್ರತೆಯನ್ನು ಒದಗಿಸಬೇಕು. ಪುರಸಭೆ, ನಗರ ಸಭೆಗಳ ನೌಕರರಿಗೆ ಸಿಕ್ಕುವ ಸಂಬಳ ಸವಲತ್ತುಗಳು ಸಿಕ್ಕಬೇಕು.
14. ಕೆಲಸ ಒದಗಿಸಲಾಗದ ದಿನಗಳಿಗೆ ನೇಕಾರರಿಗೆ ಕೆ.ಎಚ್.ಡಿ.ಸಿ. ಆಡಳಿತವು ಫಾಲ್‌ಬ್ಯಾಕ್ ವೇಜ್ ಕೊಡಬೇಕು ಮತ್ತು 1994ರಿಂದ ಅನ್ವಯಿಸಲಾದ ತುಟ್ಟಿಭತ್ತೆ ಕೊಡಬೇಕು.
15. ಇ.ಎಸ್.ಐ. ಡಿಸ್ಪೆನ್ಸರಿಗಳಲ್ಲಿ ಮತ್ತು ಆಸ್ಪತ್ರೆಗಳಲ್ಲಿ ಡಾಕ್ಟರುಗಳನ್ನು ಲೇಡಿ ಡಾಕ್ಟರು ಮತ್ತು ಅವಶ್ಯಕ ಸಿಬ್ಬಂದಿಯನ್ನು ನೇಮಿಸಬೇಕು. ಅಗತ್ಯವಾದ ಔಷಧಿಗಳನ್ನು ಒದಗಿಸಬೇಕು.
16. ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಗಿರಣಿಯ ಕಾರ್ಮಿಕರು ರಸ್ತೆ ತಡೆ ನಡೆಸುವಾಗ ಆದ ಪೋಲೀಸು ಗೋಳೀಬಾರಿನಲ್ಲಿ ಅಸು ನೀಗಿದವರಿಗೆ ತಲಾ ರೂ. 5 ಲಕ್ಷ ಪರಿಹಾರ ಕೊಡಬೇಕು, ಗಾಯಗೊಂಡವರಿಗೆ ತಲಾ ಒಂದು ಲಕ್ಷ ಪರಿಹಾರ ಕೊಡಬೇಕು, ವಿ.ಜೆ.ಕೆ.ನಾಯರ್ ಮತ್ತು ಇತರರ ಮೇಲೆ ಹಾಕಿದ ಸುಳ್ಳು ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು, ಗೋಳೀಬಾರಿಗೆ ಸಂಬಂಧಿಸಿದ ಪೋಲೀಸು ಅಧಿಕಾರಿಗಳನ್ನು ಬಂಧಿಸಬೇಕು, ಆ ಕಾರ್ಮಿಕರುಗಳ ಬೇಡಿಕೆಗಳನ್ನು ತಕ್ಷಣವೇ ಈಡೇರಿಸಬೇಕು.

ಅಣಕ — ಶರತ್‌ಚಂದ್ರ

ಕುರಿಗಳು ಸಾರ್...... ಕುರಿಗಳು.....

ಇತೀಚೆಗೆ ಸ್ಕಾಟ್ಲೆಂಡಿನಲ್ಲಿ ವಿಜ್ಞಾನಿಗಳು ಒಂದು ಕುರಿಯ ಕಾಲಿನಿಂದ ಜೀವಾಣು ತೆಗೆದು ಗಂಡು-ಹೆಣ್ಣಿನ ಕುರಿಗಳು ಲೈಂಗಿಕ ಕ್ರಿಯೆಯಿಲ್ಲದೆ ತದ್ರೂಪಿ ಕುರಿ ಸೃಷ್ಟಿಸಿದರಂತೆ. ಅದಕ್ಕೆ ಡಾಲಿ ಅಂತ ಹೆಸರಿಟ್ಟಿದ್ದಾರಂತೆ. ಇದು ಜಗತ್ತಿನ ವಿಜ್ಞಾನಿಗಳು, ಅಲ್ಪಜ್ಞಾನಿಗಳು ಹಾಗೂ ಅಜ್ಞಾನಿಗಳನ್ನು ಎಲ್ಲರನ್ನೂ ಕಳವಳಕ್ಕೀಡು ಮಾಡಿದೆಯಂತೆ. ಕೆಲವರಿಗೆ ಇವತ್ತು ಕುರಿಸೃಷ್ಟಿ ಮಾಡಿದವರು, ನಾಳೆ ಮನುಷ್ಯರ ತದ್ರೂಪಿ ಸೃಷ್ಟಿ ಮಾಡಿಯಾರು. ಹಿಟ್ಲರ್‌ನ, ರೇಗನ್‌ನ, ಥ್ಯಾಚರ್‌ನ, ಗೋರ್ಬಚೇವ್‌ನ, ಯೆಲ್ಸಿನ್‌ನ, ಲೆಕ್ ವಲೇಸಾನ, ಸದ್ದಾಂ ಹುಸೇನ್‌ನ, ಯೋಹ್ವಾ ಖಾನನ, ಸಾವಿರಾರು ತದ್ರೂಪಿಗಳನ್ನು ಸೃಷ್ಟಿಸಿ ಜನರ ಮೇಲೆ ಛೂ ಬಿಟ್ಟರೆ ಏನು ಗತಿ ಅಂತ. ಇನ್ನೂ ಕೆಲವರು ಈ ತಂತ್ರಜ್ಞಾನಕ್ಕೆ ಒಳ್ಳೆಯ ಉಪಯೋಗವೂ ಇದೆ. ಈ ತಂತ್ರಜ್ಞಾನವನ್ನು ದುರುಪಯೋಗಕ್ಕೆ ಅವಕಾಶ ಕೊಡಬಾರದು ಅಷ್ಟೇ ಅಂತಾರೆ.

ಏನೋ ಇರಲಿ ನಮ್ಮ ನಕ್ಷತ್ರಿಕ ಈ 'ಡಾಲಿ' ಕುರಿಯನ್ನು ಸೃಷ್ಟಿಸಿದ ತಂತ್ರಜ್ಞಾನದ ಉಪಯೋಗಗಳು(ದುರುಪಯೋಗ ಅಲ್ಲ) ಏನಾದರೂ ಇದೆಯಾ ಅಂತ ಸಮೀಕ್ಷೆ ಮಾಡಲು ಹೋಗಿದ್ದಾನೆ. ಆತ ಹಲವಾರು ನಮ್ಮ ದೇಶದ ವಿದೇಶದ ಗಣ್ಯರು, ನಮ್ಮ ನಿಮ್ಮಂಥ ನಗಣ್ಯರನ್ನೆಲ್ಲಾ ಸಂದರ್ಶಿಸಿ ವರದಿ ಮಾಡಿದ್ದಾನೆ.

ಕುಪ್ಪೆಪದವಿನ ತಬರಣ್ಣ 'ಇವರ‍್ಯಾಕೆ ಕುರಿಯ ತದ್ರೂಪಿ ಸೃಷ್ಟಿ ಮಾಡ್ತಾ ಇದ್ದಾರೆ ಮಾರಾಯ್ರೇ. ಕುರಿಗಳು ಎಲ್ಲ ತದ್ರೂಪಿಗಳೇ ಅಲ್ವಾ. ಇವರಿಗೆ ಬೇರೆ ಕೆಲ್ಸ ಇಲ್ವ' ಎಂದರಂತೆ.

ಹಗರಿಬೊಮ್ಮನಹಳ್ಳಿಯ ಫಕ್ಕೀರಪ್ಪನವರೂ ಕುರಿಗಳು, ಮನುಷ್ಯರ ತದ್ರೂಪಿಗಳನ್ನು ಸೃಷ್ಟಿ ಮಾಡಿದರೆ ಗಾಡ್ರಿ ಯಾಕೆ ಎಂದರಂತೆ.

ಕವಿ ನಿಸ್ಸಾರ್ ಅಹಮದ್‌ರವರು ಹಿಟ್ಲರನ ತದ್ರೂಪಿಗಳನ್ನು ಮಾಡುವ ಅಪಾಯದ ಬಗ್ಗೆ ಬರೆದ 'ತದ್ರೂಪಿಗಳು ಸಾರ್... ನಾವು ತದ್ರೂಪಿಗಳು' ಕವನ ಓದಿದರಂತೆ.

ಗಾಂಧಿನಗರದ ಚಿತ್ರನಿರ್ಮಾಪಕ ಶೋಕಿಲಾಲ್ ಪ್ರಮುಖ ಚಿತ್ರ ನಟನಟಿಯರ ತದ್ರೂಪಿ ತಯಾರಿಸಲು ಆಗಲೇ ಕಪ್ಪು ಹಣ ಕೊಟ್ಟಿದ್ದಾರಂತೆ.

ಅಶೋಕ ಸಿಂಘಾಲ್‌ರವರು ಅಧಿಕೃತವಾಗಿ ಪ್ರತಿಕ್ರಿಯಿಸಲು ನಿರಾಕರಿಸಿದರಂತೆ. ಆದರೆ ವಿಶ್ವ ಹಿಂದೂ ಪರಿಷತ್‌ನವರು ರಾಮನ ಬಂಟ ಹನುಮಂತರನ ತದ್ರೂಪಿಗಳನ್ನು ಸೃಷ್ಟಿಸುವ ಗುಪ್ತ ಯೋಜನೆಯನ್ನು ಹಾಕಿದೆಯಂತೆ.

ಅದೇ ರೀತಿ ಗುಜರಾತಿನ ಬಿಜೆಪಿ ಒಂದು ಗುಪ್ತ ಯೋಜನೆ ಹಾಕಿದೆಯಂತೆ. ವಾಘೇಲಾ ಹಾಗೂ ಬಿಜೆಪಿ ಬಿಟ್ಟು ಹೋದ ಇತರ ಬಿಜೆಪಿ ಎಂಎಲ್‌ಎಗಳ ತದ್ರೂಪಿಗಳನ್ನು ಸೃಷ್ಟಿಸಿ, ಬಹುಮತ ಪುನಃ ಸೃಷ್ಟಿಸಲು ವಿಜ್ಞಾನಿಗಳ ತಂಡವನ್ನು ಗುಪ್ತವಾಗಿ ಸಂಪರ್ಕಿಸಿದೆಯಂತೆ. ಅದಕ್ಕಾಗಿ ಯಾವುದಾದರೂ ಭಾಗ ಕಿತ್ತುಕೊಂಡು ಬರಲು ಭಜರಂಗದಳದ ತುಕಡಿಯೊಂದನ್ನು ತಯಾರಿಸಿದೆಯಂತೆ. ಇದೇ ರೀತಿ ತದ್ರೂಪಿಗಳಿಂದ ಉತ್ತರ ಪ್ರದೇಶದಲ್ಲೂ ಬಹುಮತ ಸೃಷ್ಟಿಸಬಹುದೇ ಎಂದು ನಾಗಪುರದಲ್ಲಿ ಆರೆಸ್ಸಸ್‌ನ ಉನ್ನತ ಮಟ್ಟದ ಸಭೆ ನಡೆದಿದೆಯಂತೆ.

ನಮ್ಮ ರಾಜ್ಯ ಸರಕಾರದ ವಕ್ತಾರರು ಅಧಿಕೃತವಾಗಿ ಪ್ರತಿಕ್ರಿಯಿಸಲು ನಿರಾಕರಿಸಿದರೂ, ಗುಪ್ತವಾಗಿ ಒಂದು ಯೋಜನೆ ಹಾಕಲಾಗಿದೆಯಂತೆ. ಬಸ್ ದರ, ವಿದ್ಯುತ್ ದರ, ವಿದ್ಯುತ್ ಕಡಿತ, ಹಾಲು ಬೆಲೆಯೇರಿಕೆ ಇತ್ಯಾದಿ ಏರಿಕೆಗಳನ್ನು ಗೋಣು ಆಡಿಸಿ ಕೊಡುವ ಕುರಿ ಹಾಗೂ ಮನುಷ್ಯನ ಸಮಾನ ಗುಣವುಳ್ಳ ತದ್ರೂಪಿಗಳನ್ನು ಸೃಷ್ಟಿಸಲು ಸಾಧ್ಯವೇ ಎಂದು ಪರಿಶೀಲಿಸಲು ವಿಜ್ಞಾನಿಗಳ ಸಮಿತಿ ನೇಮಿಸಿದೆಯಂತೆ.

ಬಾಳಾ ಠಾಕ್ರೆಯವರು ಹಿಟ್ಲರನ ತದ್ರೂಪಿಗಳನ್ನು ಸೃಷ್ಟಿಸಿದರೆ ತಪ್ಪೇನು? ಭಾರತದ ಸಮಸ್ಯೆ ಎಲ್ಲಾ ಪರಿಹಾರವಾಗುತ್ತದೆ ಎಂದಿದ್ದಾರಂತೆ.

ಈ ಬಾರಿಯ ಬಜೆಟ್ ನಂತರ ನವದೆಹಲಿಯಲ್ಲಿ ಇನ್ನೊಂದು ಪುಕಾರು ತೀವ್ರವಾಗಿ ಹಬ್ಬಿದೆಯಂತೆ. ಸಿಐಎ ಮತ್ತು ಐಎಂಎಫ್ ಸೇರಿ ಮನಮೋಹನಸಿಂಗ್‌ರ ರೂಪದಲ್ಲಿ ಇಲ್ಲದಿದ್ದರೂ ಅದೇ ರೀತಿ ಕೃತಕವಾಗಿ ತಯಾರಿಸುವ ತಂತ್ರಜ್ಞಾನದಲ್ಲಿ ಸಫಲವಾಗಿದೆ. ಅದರ ಫಲವೇ ಚಿದಾಂಬರಂ ಅಂತ ವದಂತಿ ಹಬ್ಬಿದೆಯಂತೆ. ಕೆಲವರು ಅದೇ ರೀತಿ ದೇವೇಗೌಡರು ನರಸಿಂಹರಾಯರ ತದ್ರೂಪಿ ಎಂದಿದ್ದಾರಂತೆ. ಆದರೆ ಇದು ಸುಳ್ಳು ವದಂತಿ. ರೂಪ ಬೇರೆ 'ತದ್ರೂಪಿ ಸಿದ್ಧಾಂತದ ತಲೆ' ಇರುವ ಮನುಷ್ಯನ ಸೃಷ್ಟಿ ಅಸಾಧ್ಯ ಎಂದು ಒಬ್ಬ ವಿಜ್ಞಾನಿ ಅಭಿಪ್ರಾಯ ಪಟ್ಟಿದ್ದಾರಂತೆ.

"ನಿಮ್ಮಯ ಸ್ಮರಣೆ ನಮಗೆ ಚಿರನೂತನ ಪ್ರೇರಣೆ"

ಹುತಾತ್ಮಸ್ಥಳದಿಂದ ರೈತ-ಕಾರ್ಮಿಕರ ಕಾಲ್ನಡಿಗೆ ಜಾಥಾ

ಮಾರ್ಚ್ 13ರಂದು ಬೆಂಗಳೂರಿನಲ್ಲಿ ಸಿಐಟಿಯುವಿನ 7ನೇ ರಾಜ್ಯ ಸಮ್ಮೇಳನ. ಅದರ ಹಿಂದಿನ ದಿನ ನಗರದಲ್ಲಿ ದುಡಿಯುವ ಮಹಿಳೆಯರ ರಾಜ್ಯ ಸಮಾವೇಶ. ಈ ಸಮ್ಮೇಳನ ಮತ್ತು ಸಮಾವೇಶಗಳಿಂದ ರಾಜ್ಯದ ದುಡಿಯುವ ವರ್ಗಕ್ಕೆ ಉಲ್ಲಾಸ ಮತ್ತು ಸಡಗರ ಕಾರಣ ತಮ್ಮ ಬವಣೆಗಳನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ನಡೆಯುತ್ತಿರುವ ಸಮಾವೇಶ ಮತ್ತು ಸಮ್ಮೇಳನಗಳೆಂದು.



ಇತ್ತ ಬಿಡದಿಯ ಮೇಡನಹಳ್ಳಿ, ಮಂಚನಾಯಕನಹಳ್ಳಿ ಹಾಗೂ ಹೆಜ್ಜಾಲ ಗೇಟ್‌ಗಳಿಂದ ಮೂರು ಜ್ಯೋತಿಗಳು ಬರುತ್ತಿವೆ, ಸಮ್ಮೇಳನಕ್ಕೆ ಸಮಾವೇಶಕ್ಕೆ ಸ್ಫೂರ್ತಿ ಮತ್ತು ಪ್ರೇರಣೆ ನೀಡಲು.

ನಿಮ್ಮಯ ಸ್ಮರಣೆ ನಮಗೆ ಪ್ರೇರಣೆ

ಫೆಬ್ರವರಿ 3ರಂದು ವೆಳ್ಳಿಯಪ್ಪ ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕರ, ನ್ಯಾಯಯುತ ಹೋರಾಟದಲ್ಲಿ ನಾಗರಾಜು, ಸೀತಾ ಮತ್ತು ಕೃಷ್ಣಪ್ಪ ಪ್ರಾಣಾರ್ಪಣೆ ಮಾಡಿದರು. ಇವರ ನೆನಪಿಗಾಗಿ ಬೆಂಗಳೂರುಜಿಲ್ಲಾ ಪ್ರಾಂತ ರೈತ ಸಂಘ ಮತ್ತು ಸಿಐಟಿಯು ಇವರ ವಾಸಸ್ಥಳಗಳಿಂದ ಕಾಲ್ನಡಿಗೆ ಜಾಥಾವನ್ನು ಸಂಘಟಿಸಿದ್ದವು.

ಮಾರ್ಚ್ 12ರಂದು ಬೆಳಿಗ್ಗೆ 9 ಗಂಟೆಗೆ ಮೇಡನಹಳ್ಳಿಯಲ್ಲಿ ವೆಳ್ಳಿಯಪ್ಪ ಕಾರ್ಖಾನೆಯ ಕಾರ್ಮಿಕ ಕೃಷ್ಣಪ್ಪನವರ ತಾಯಿ ಜ್ಯೋತಿ ಬೆಳಗಿಸಿದರೆ ಮಡಿದ ಮತ್ತೊಬ್ಬ ಕಾರ್ಮಿಕ ಮಂಚನಾಯಕನ ಹಳ್ಳಿಯ ನಾಗರಾಜುವಿನ ಬಂಧುಗಳು ಜ್ಯೋತಿ ಬೆಳಗಿಸಿದರು. ಹೆಜ್ಜಾಲ ಗೇಟ್‌ನಲ್ಲಿ ತನ್ನ ಗಂಡನ ಹೋರಾಟಕ್ಕೆ ಪ್ರಾಣ ನೀಡಿದ ಸೀತಾ ಮನೆಯವರು ಜ್ಯೋತಿ ಬೆಳಗಿಸಿದರು. ಈ ಮೂರು ಜ್ಯೋತಿಗಳನ್ನು ವಳ್ಳಿಯಪ್ಪ ಕಾರ್ಖಾನೆಯ ಕಾರ್ಮಿಕ ಮುಖಂಡ ಎನ್.ಎಂ.ರಾಜು ಜಿಲ್ಲಾ ರೈತ ಸಂಘದ ಮುಖಂಡ ವೆಂಕಟಾಚಲಯ್ಯನವರಿಗೆ ಅರ್ಪಿಸಿದರು.

ರೈತ ಸಂಘದ ಮುಖಂಡರಾದ ಪಿ.ಜಗನ್ನಾಥ್ ನೇತೃತ್ವದ ನೂರಾರು ರೈತ-ಕಾರ್ಮಿಕರ ಕಾಲ್ನಡಿಗೆ ಜಾಥಾವು "ನಿಮ್ಮಯ ಸ್ಮರಣೆ ನಮಗೆ ಪ್ರೇರಣೆ", 'ನೀವು ಬಿದ್ದ ಮರಗಳಲ್ಲ ಬಿತ್ತಿದ ಬೀಜಗಳು', 'ರೈತ ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ' ಎಂಬ ಘೋಷಣೆಯೊಂದಿಗೆ ಹೊರಟಿದ್ದ ಕಾಲ್ನಡಿಗೆ ಜಾಥಾವನ್ನು ನಾಯುಂಡನಹಳ್ಳಿಯಲ್ಲಿ ಮೈಸೂರು ಫೀಡ್ಸ್ ಕಾರ್ಮಿಕರು ಹಾರ್ದಿಕವಾಗಿ ಬರಮಾಡಿಕೊಂಡರು. ಅಲ್ಲೊಂದು ಬಹಿರಂಗ ಸಭೆ. ಸಾವಿರಾರು ಜನ ಸೇರಿದ್ದ ಸಭೆಯಲ್ಲಿ ಹುತಾತ್ಮರ ತ್ಯಾಗ ಬಲಿದಾನಗಳ ಸ್ಮರಣೆ, ಸಭೆಯನ್ನುದ್ದೇಶಿಸಿ ಕಾಂ.ಸೂರ್ಯನಾರಾಯಣರಾವ್, ಮೀನಾಕ್ಷಿ ಸುಂದರಂ, ಪಿ.ಜಗನ್ನಾಥ್ ಮೊದಲಾದವರು ಮಾತನಾಡಿದರು. ಜಾಥಾ ರಾತ್ರಿ ಅಲ್ಲಿಯೇಉಳಿದಿತ್ತು.

40 ಕಿ.ಮೀ. ಕಾಲ್ನಡಿಗೆ ಜಾಥಾ

ಬೆಳಿಗ್ಗೆ ನಾಯಂಡಹಳ್ಳಿಯಿಂದ ಹೊರಟ ಜಾಥಾವು ಸಿಐಟಿಯು ಸಮ್ಮೇಳನದ ಉದ್ಘಾಟನಾ ಸ್ಥಳವಾದ ಪುರಭವನಕ್ಕೆ ಮಧ್ಯಾಹ್ನ 12ಕ್ಕೆ ಬಂದು ತಲುಪಿತು. ಹುತಾತ್ಮಸ್ಥಳದಿಂದ ಪುರಭವನಕ್ಕೆ ಸುಮಾರು 40 ಕಿ.ಮೀ. ದೂರದ ಕಾಲ್ನಡಿಗೆ ಜಾಥಾವಾಗಿತ್ತು.

ಪುರಭವನದ ಬಳಿ ಬಂದ ಹುತಾತ್ಮ ಜ್ಯೋತಿಗಳನ್ನುಸೇರಿದ್ದಕಾರ್ಮಿಕರುಗೌರವಪೂರ್ವಕವಾಗಿ ಹಿರಿಯ ಅವಿರತ ಮುಖಂಡರುಗಳಾದಕಾಂ.ಎನ್.ಕೆ.ಉಪಾಧ್ಯಾಯ, ಕಾಂ.ವಿ.ಜೆ.ಕೆ.ನಾಯರ್, ಕಾಂ.ವಿಮಲಾ ರಣದಿವೆ ಹಾಗೂ ಕಾಂ. ಕೆ.ಎಸ್.ಸುಬ್ರಹ್ಮಣ್ಯಸಮ್ಮೇಳನದಉದ್ಘಾಟನಾ ಸ್ಥಳಕ್ಕೆ ಬರಮಾಡಿಕೊಂಡರು.

– ಜಯರಾಂ

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು–9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು

ಐಕ್ಯರಂಗ ಪುರವಣಿ

ಮಾರ್ಚ್ 17-23, 1997 ರೂ. 1.00



ಈಗಷ್ಟೇ ಮುಕ್ತಾಯಗೊಂಡಿರುವ ಸಿಐಟಿಯುನ 7ನೇ ರಾಜ್ಯ ಸಮ್ಮೇಳನ ಮೇ 1997ರಲ್ಲಿ ಒಂದು ತೀವ್ರ ಕಾರ್ಯಾಚರಣೆ ನಡೆಸಬೇಕು ಎಂದು ಕರೆ ನೀಡಿದೆ. ನಮ್ಮ ರಾಜ್ಯದ ಕಾರ್ಮಿಕ ವರ್ಗ ತನ್ನ ಆಂದೋಲನವನ್ನು ಉಳಿಸಿ ಮುನ್ನಡೆಸಲು ಕಷ್ಟಕರವಾದಂತಹ ಪರಿಸ್ಥಿತಿಯನ್ನು ಈಗ ಎದುರಿಸುತ್ತಿದ್ದು ಈ ಪರಿಸ್ಥಿತಿಗಳನ್ನು ಬದಲಿಸಿ ಒಂದು ದೃಢ ಹಾಗೂ ನಿರ್ಣಾಯಕ ಹೋರಾಟ ನಡೆಸಲು ಮುಂದಾಗಬೇಕು ಎಂಬ ಕರೆ ಇದು.

ಲೇಬರ್ ಕಾನೂನುಗಳ ಅನುಷ್ಠಾನಕ್ಕಾಗಿ ನಾವೀಗ ಬಲಿಷ್ಟ ಹೋರಾಟ ನಡೆಸಲೇಬೇಕಾಗಿದೆ

- ವಿ.ಜೆ.ಕೆ.ನಾಯರ್

ಅಕ್ಟೋಬರ್ 1992ರಲ್ಲಿ 6ನೇ ಸಮ್ಮೇಳನ ನಡೆದ ನಂತರದ ಈ ಐದು ವರ್ಷಗಳಲ್ಲಿ ಪ್ರತಿಬಾರಿಯೂ ನಾವು ಪ್ರತ್ಯೇಕ - ಪ್ರತ್ಯೇಕ ಘಟಕಗಳಲ್ಲಿ ಅಥವಾ ಉದ್ದಿಮೆಗಳಲ್ಲಿ ಕಾರ್ಮಿಕ ಕಾನೂನುಗಳನ್ನು ಮುರಿಯುವ ಮಾಲಕರ ವಿರುದ್ಧ ಅಥವಾ ತನ್ನ ಜವಾಬ್ದಾರಿಗಳನ್ನು ನಿರ್ವಹಿಸದ ರಾಜ್ಯ ಸರಕಾರದ ವಿರುದ್ಧ ಹೋರಾಟಕ್ಕಿಳಿಯಬೇಕಾಗಿ ಬಂದಿದೆ. ಈ ಪ್ರತಿಯೊಂದು ಹೋರಾಟದಲ್ಲೂ ವಿವಿಧ ಘಟಕಗಳ ಅಥವಾ ಉದ್ದಿಮೆಗಳ ಕಾರ್ಮಿಕರ ಹೋರಾಟದ ಮಟ್ಟ ಹಾಗೂ ತೀವ್ರತೆ ಭಿನ್ನವಾಗಿತ್ತು. ಅದೇ ರೀತಿ ಈ ಹೋರಾಟಗಳಲ್ಲಿ ಅವರ ಸಾಧನೆಗಳೂ ಭಿನ್ನವಾಗಿದ್ದು, ಯಶಸ್ಸು ಸೀಮಿತವಾಗಿದೆ.

ನಮ್ಮ ಮುಂದೆ ಗುಲ್ಬರ್ಗಾ ಜಿಲ್ಲೆಯ ಮಳಖೇಡದ ರಾಜಶ್ರೀ ಸಿಮೆಂಟ್ ಕಾರ್ಮಿಕರ ಹೋರಾಟದ ಉದಾಹರಣೆಯಿದೆ. ಅದೇ ರೀತಿ ಬೆಂಗಳೂರಿನ ಸಾಮ್ರಾಟ್ ಅಶೋಕ ಗುಂಪಿನ ಗಾರ್ಮೆಂಟ್ ಕಾರ್ಮಿಕರು ನಡೆಸಿದ ಹೋರಾಟದ ಉದಾಹರಣೆಯಿದೆ. ವಳ್ಳಿಯಪ್ಪ ಕಾರ್ಮಿಕರ ಹೋರಾಟದ ಗಾಯಗಳು ಇನ್ನೂ ಮಾಸಿಲ್ಲ. ರಾಜ್ಯಾದ್ಯಂತ ಇದೇ ರೀತಿಯಲ್ಲಿ ಕಾರ್ಮಿಕರು ಹೋರಾಟಗಳನ್ನು ನಡೆಸಿದ್ದಾರೆ. ಹೆಚ್ಚಾಗಿ ಈ ಹೋರಾಟಗಳು ಸಂಘ ಕಟ್ಟಿಕೊಳ್ಳುವ ಹಕ್ಕಿಗಾಗಿಯೋ ಅಥವಾ ಸಾಮೂಹಿಕ ಚೌಕಾಸಿಯ ಹಕ್ಕಿಗಾಗಿಯೇ ನಡೆದಿರುವ ಹೋರಾಟಗಳು.

ಕಾನೂನಿನ ಆಳ್ವಿಕೆ ಮಾಯವಾಗುತ್ತಿದೆ ಭ್ರಷ್ಟರ ಆಳ್ವಿಕೆ ಪ್ರಬಲವಾಗುತ್ತಿದೆ

ಕಾರ್ಮಿಕ ಕಾನೂನುಗಳು ಜಾರಿಯಾಗುವಂತೆ ನೋಡಿಕೊಳ್ಳುವುದು ರಾಜ್ಯ ಸರಕಾರದ ಕರ್ತವ್ಯ. ಒಂದು ಕಾರ್ಮಿಕ ಸಂಘದೊಡನೆ ಮಾತುಕತೆಗೆ ಕೂರಲು ನಿರಾಕರಿಸುವವರ ಮೇಲೆ ಕಾನೂನುಕ್ರಮ ಕೈಗೊಂಡು ಜೈಲಿಗೆ ಕಳಿಸುವುದು ರಾಜ್ಯ ಸರಕಾರದ ಕರ್ತವ್ಯ. ಈ ಮೇಲಿನ ಪ್ರತಿಯೊಂದು ಹೋರಾಟದಲ್ಲೂ ಸರಕಾರ ಸಂಬಂಧಪಟ್ಟ ಉದ್ದಿಮೆಗಳ ಡೈರಕ್ಟರುಗಳು, ಮ್ಯಾನೇಜರುಗಳ, ಮಾಲಕರು ಕೈಗಾರಿಕಾ ವಿವಾದಗಳ ಶಾಸನ(ಐಡಿ ಆಕ್ಟ್)ದ ಅಂಶಗಳನ್ನು ಉಲ್ಲಂಘಿಸಿದ್ದಕ್ಕೆ ಅವರ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು. ಏಕೆಂದರೆ ಈ ಕಾನೂನಿನ ಉದ್ದೇಶ ಕೈಗಾರಿಕಾ ಶಾಂತಿಯನ್ನು ಕಾಪಾಡುವುದು. ಆದ್ದರಿಂದ ಎರಡೂ ಪಕ್ಷಗಳು ಕಾನೂನನ್ನು ಪರಿಪಾಲಿಸುವಂತೆ ಮಾಡಲು ಸರಕಾರ ಮಧ್ಯ ಪ್ರವೇಶಿಸಬೇಕು. ಅದರೇನು ಮಾಡುವುದು? ಈ ದೇಶದಲ್ಲಿ ಕಾನೂನಿನ ಆಳ್ವಿಕೆ ಮಾಯವಾಗುತ್ತಿದೆ. ವ್ಯಕ್ತಿಗಳ ಆಳ್ವಿಕೆ, ಅದರಲ್ಲೂ ಭ್ರಷ್ಟ ವ್ಯಕ್ತಿಗಳ ಆಳ್ವಿಕೆ ಪ್ರಬಲವಾಗುತ್ತಿದೆ. ಈ ಕುಬ್ಜರು, ಅಲ್ಪರು ಆ ಮಾಲಕರ ಹಿತಾಸಕ್ತಿಗಳನ್ನು ಈಡೇರಿಸಲು ಸರ್ವಾಧಿಕಾರಿಗಳಾಗಿ ಬಿಡುತ್ತಾರೆ. ಇದಕ್ಕಾಗಿ ಕಾನೂನನ್ನು ನಿರ್ಲಕ್ಷಿಸುತ್ತಾರೆ, ಬದಿಗೊತ್ತುತ್ತಾರೆ, ಉಪಾಯದಿಂದ ತಪ್ಪಿಸುತ್ತಾರೆ ಅಥವಾ ನೇರವಾಗಿ ಉಲ್ಲಂಘಿಸಲೂ ಹೇಸುವುದಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ಕಾನೂನು ಮತ್ತು ವ್ಯವಸ್ಥೆಯ ಹೆಸರಲ್ಲಿ ಇದು ನಡೆಯುತ್ತದೆ. ಇವರನ್ನು ಕಾರ್ಮಿಕ ಕಾನೂನುಗಳ ಜಾರಿಗಾಗಿಯೇ ನೇಮಿಸಿ, ಸಾರ್ವಜನಿಕರ ಹಣದಿಂದಲೇ ಅವರಿಗೆ ಸಂಬಳ ಕೊಡುತ್ತಿದ್ದರೂ, ಪೋಷಿಸುತ್ತಿದ್ದರೂ, ಈ ಭ್ರಷ್ಟ ವ್ಯಕ್ತಿಗಳು ಮಾಲಕರಿಗೆ ಕಾನೂನುಗಳನ್ನೇ ಮುರಿಯಲು ಸಹಾಯ ಮಾಡುತ್ತಾರೆ. ರಾಜಶ್ರೀ ಸಿಮೆಂಟ್ಸ್‌ನಲ್ಲಾದಂತೆ ಕಾರ್ಮಿಕರನ್ನು ಮತ್ತು ಅವರ ಮುಖಂಡರನ್ನು ಮತ್ತೆ ಮತ್ತೆ ಜೈಲಿನಲ್ಲಿಡಲೂ ಅವರು ಹಿಂಜರಿಯುವುದಿಲ್ಲ; ಹೆಜ್ಜಾಲದಲ್ಲಿ ಮುಗ್ಧರ ಮೇಲೆ ಗುಂಡು ಹಾರಿಸಿ, ಕೊಲ್ಲಲೂ ಹೇಸುವುದಿಲ್ಲ, ಈ ಲೇಖಕ ಹಾಗೂ ಇತರ 15 ಜನ ಮುಗ್ಧರನ್ನೂ ಜೈಲಿಗೆ ಹಾಕಲೂ ಹಿಂಜರಿಯಲಿಲ್ಲ; ಗೂಂಡಾಗಳಿಗೆ ಕುಮ್ಮಕ್ಕು ನೀಡಲು, ಲಾಠಿ ಪ್ರಹಾರ ನಡಿಸಿ ಹಲವು ಗಾರ್ಮೆಂಟ್ಸ್ ಕಾರ್ಮಿಕರನ್ನು ಗಾಯಗೊಳಿಸಲೂ ಹಿಂಜರಿಯಲಿಲ್ಲ.

ಇದೆಂತಹಾ ಸಾಮಾಜಿಕ ನ್ಯಾಯ?

ಮೇಲೆ ಹೇಳಿದ ಪ್ರತಿಯೊಂದು ಹೋರಾಟದಲ್ಲೂ ಹಾಗೂ ಕಾರ್ಮಿಕರು ಸಂಘ ಕಟ್ಟಿಕೊಂಡ 90% ಸಂದರ್ಭಗಳಲ್ಲೂ ಇದು ನಡೆದಿದೆ. ಅಂದರೆ ಮಾಲಕರು ಕಾರ್ಮಿಕ ಸಂಘವನ್ನು ಮಾನ್ಯ ಮಾಡಲು ನಿರಾಕರಿಸುತ್ತಾರೆ. ರಾಜ್ಯ ಸರಕಾರ ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡಲು ನಿರಾಕರಿಸುತ್ತದೆ!

ಅಷ್ಟೇ ಅಲ್ಲ ಇವುಗಳಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ರಾಜ್ಯಸರಕಾರದ ಅಧಿಕಾರಿಗಳು ಮುಖ್ಯವಾಗಿ ಪೋಲೀಸರು ಕಾರ್ಮಿಕರ ಮೇಲೆ ಹದ್ದುಗಳಂತೆ ಎರಗುತ್ತಾರೆ. ಇದೇ ಅವರ 'ಮಾನವ ಹಕ್ಕು'! ಇದು ಅವರ 'ಸಾಮಾಜಿಕ ನ್ಯಾಯ'! 'ಸಾಮಾಜಿಕ ನ್ಯಾಯ'ದ ಬಗ್ಗೆ ಬಹಳ ಮಾತನಾಡುವ ಈ ಮಂದಿ ಬಂಡವಾಳಶಾಹಿಗಳ ಏಜೆಂಟರಾಗಿಬಿಟ್ಟಿದ್ದಾರೆ.

ಬೆಳಗಾವಿಯ ರಾಮದುರ್ಗ ವಿಲಾಸ್ ಬೀಡಿ ಕಾರ್ಮಿಕರ ಅನುಭವ ಇದೇ ಅಲ್ಲವೇ? ಯೂನಿಯನ್ ಕಟ್ಟಿಕೊಂಡ ಮಹಾಪರಾಧಕ್ಕೆ ಅವರ ಜೀವನಾಧಾರವನ್ನೇ ಕಸಿದುಕೊಳ್ಳಲಾಗಿದೆ. ಅದೇ ಬೆಳಗಾವಿಯ ಬೆಳಗಂಡಿ ಸಿಮೆಂಟ್ಸ್ ಕಾರ್ಮಿಕರೂ ಯೂನಿಯನ್ ಕಟ್ಟಿಕೊಂಡಿದ್ದಕ್ಕಾಗಿ ಬೀದಿ ಪಾಲಾಗಿಲ್ಲವೇ? ನಾನಕೇಶ್ವರ ಮಿಲಿನ ಕಾರ್ಮಿಕರ ಅನುಭವವೂ ಇದೇ ಅಲ್ಲವೇ?

ಉತ್ತರ ಕನ್ನಡ ಜಿಲ್ಲೆಯ ಹಂಚು ಕಾರ್ಮಿಕರದ್ದೂ ಇದೇ ಕಥೆ. ಮಾವಿನ ಕುರ್ವೆ ಕಾರ್ಖಾನೆ, ಮುರ್ಡೇಶ್ವರ ಕಾರ್ಖಾನೆ ಅಥವಾ ಹೊನ್ನಾವರ ಬಳಿಯಿರುವ ಸಹಕಾರಿ ಹಂಚಿನ ಕಾರ್ಖಾನೆ- ಇನ್ನಷ್ಟು ಇಂತಹ ಉದಾಹರಣೆಗಳನ್ನು ಕೊಡಬಹುದು. ಬೆಂಗಳೂರಿನಲ್ಲಿ ಹೋಟೆಲ್‌ಗಳಲ್ಲಿ, ಸರಕಾರಿ ಕಾರ್ಖಾನೆಗಳಲ್ಲಿ, ಪವರ್‌ಲೂಂಗಳಲ್ಲಿ, ಆಟೋ ಮ್ಯಾಕ್ ಮುಂತಾದ ಪೀಣ್ಯಾದ ಸಣ್ಣ ಉದ್ದಿಮೆಗಳಲ್ಲಿ-ಎಲ್ಲೆಲ್ಲೂ ಇದೇ ಅನುಭವ.

ಚಾರಿತ್ರಿಕ ಜವಾಬ್ದಾರಿ

ಮಾಲಕರ ಹಿತಾಸಕ್ತಿಗಳನ್ನು ರಕ್ಷಿಸುವ ಕಾನೂನುಗಳನ್ನು ಮುರಿಯುವ, ನಮ್ಮ ಮೂಳೆಗಳನ್ನು ಮುರಿಯುವ ಸರ್ವಾಧಿಕಾರ ಶಾಹಿಯ ಕರಾಳ ಛಾಯೆ ಹೆಚ್ಚುತ್ತಿರುವ ಪ್ರಜಾಪ್ರಭುತ್ವ ಕಾನೂನಿನ ಆಳ್ವಿಕೆಯ ಸಮರವನ್ನು ಗೆಲ್ಲಬೇಕಾದ್ದು ನಮ್ಮ ರಾಜ್ಯದ ಕಾರ್ಮಿಕ ವರ್ಗದ ಆದ್ಯ ಕರ್ತವ್ಯವಾಗಿದೆ. ಹೋರಾಟ ನಿರತ ಜನಗಳ ಮೇಲೆ ಪ್ರಭುತ್ವದ ದಮನ ಯಂತ್ರ ಹಾಗೂ ಗೂಂಡಾ ಪಡೆಗಳ ಹಿಂಸಾಚಾರ ಭಯೋತ್ಪಾದನೆಯನ್ನು ತಡೆಯಲು ಕಾರ್ಮಿಕ ವರ್ಗ ಸಮರಶೀಲತೆಯಿಂದ ಎದ್ದು ನಿಲ್ಲಬೇಕು. ಆಗ ಮಾತ್ರ ಕೊನೆಗೂ ಶಾಂತಿ ನೆಲೆಸುವಂತೆ ಮಾಡಲು ಸಾಧ್ಯ. ಸರ್ವಾಧಿಕಾರ ಶಾಹಿಯ ವಿರುದ್ಧ ಸಮರದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಮತ್ತು ಕಾನೂನಿನ ಆಳ್ವಿಕೆಗಾಗಿ ನಡೆಯುವ ಹೋರಾಟವನ್ನು ಕಾರ್ಮಿಕ ವರ್ಗ ನಡೆಸಬೇಕು ಮತ್ತು ಗೆಲ್ಲಬೇಕು.

ಆದ್ದರಿಂದ ನಾವು ಯೂನಿಯನ್ ಮಾನ್ಯತೆಗಾಗಿ ನಮ್ಮ ಘಟಕಗಳಲ್ಲೇ ಅಥವಾ ಉದ್ದಿಮೆ/ಪ್ರದೇಶಗಳಲ್ಲೇ ಸೀಮಿತವಾದ ಹೋರಾಟ ನಡೆಸುವ ಪ್ರವೃತ್ತಿಯನ್ನು ಬದಲಿಸಿಕೊಳ್ಳಬೇಕು. ಲೇಬರ್ ಕಾನೂನುಗಳ ಅನುಷ್ಠಾನವಾಗಬೇಕು, ಈ ಕಾನೂನುಗಳ ಉಲ್ಲಂಘನೆಗಳನ್ನು ದುರಾಚರಣೆಗಳನ್ನು ತಡೆಯಬೇಕು, ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುವ ಮಾಲಕರನ್ನು ಜೈಲಿನಲ್ಲಿಡಬೇಕು ಎಂದು ಒತ್ತಾಯಿಸಿ ಒಂದು ಬಲಿಷ್ಠ ಚಳುವಳಿಯನ್ನು ಆರಂಭಿಸಬೇಕಾಗಿದೆ. ಇಲ್ಲವಾದರೆ ನಾವು ಹಲವಾರು ಹೋರಾಟಗಳನ್ನು ಗೆಲ್ಲಲು ಸಾಧ್ಯವಾಗದು. ಅಷ್ಟೇ ಅಲ್ಲ, ಸರ್ವಾಧಿಕಾರಶಾಹಿಯನ್ನು ತಡೆಯುವ, ಪ್ರಜಾಪ್ರಭುತ್ವನ್ನು ಉಳಿಸಿ, ಬೆಳೆಸುವ ಹಾಗೂ ಕಾನೂನಿನ ಆಳ್ವಿಕೆಯಿರುವಂತೆ ಮಾಡುವ ನಮ್ಮ ಚಾರಿತ್ರಿಕ ಜವಾಬ್ದಾರಿಯನ್ನು ನೇರವೇರಿಸುವಲ್ಲಿ ವಿಫಲರಾಗುತ್ತೇವೆ. ಎಲ್ಲಕ್ಕೂ ಮಿಗಿಲಾಗಿ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ರಕ್ಷಿಸಿ, ಮುನ್ನಡೆಸುವಲ್ಲಿ ವಿಫಲರಾಗುತ್ತೇವೆ.

ಇಂಜಂಕ್ಷನ್ ರಾಜ್ಯ!

ಎಲ್ಲಾ ಕಡೆ ಮಾಲಕರು ಇಂಜಂಕ್ಷನ್ (ತಡೆಯಾದೇಶ ಅಥವಾ ನಷ್ಟ ಪರಿಹಾರ ಆದೇಶ) ಆದೇಶಗಳನ್ನು ಪಡೆಯಲು ಸಿವಿಲ್ ನ್ಯಾಯಾಲಯಗಳಿಗೆ ಧಾವಿಸುತ್ತಿದ್ದಾರೆ. ಈ ನ್ಯಾಯಾಲಯಗಳೂ ಕೂಡಾ ಕಾನೂನು ಬಾಹಿರ ಕೆಲಸಗಳನ್ನು ಮಾಡಬಾರದು ಎಂದು ದೊಡ್ಡ ಕರ್ತವ್ಯ ಪರಾಯಣರಂತೆ ಇಂಜಂಕ್ಷನ್ ಕೊಡುತ್ತವೆ. ಕಾನೂನುಬಾಹಿರ ಕೆಲಸ ಮಾಡಬಾರದು ಎನ್ನುವುದಕ್ಕೆ ಇಂಜಂಕ್ಷನ್ ಯಾಕೆ? ಜನ ಸಾಮಗ್ರಿಗಳನ್ನು ಸಾಗಿಸುವುದನ್ನು ತಡೆಯಬಾರದು ಎನ್ನುವುದಕ್ಕೆ ಇಂಜಂಕ್ಷನ್ ಯಾಕೆ.? ನಮಗೆ ಯಾವುದೇ ಕಾನೂನು ಬಾಹಿರ ಚಟುವಟಿಕೆ ನಡೆಸುವ, ಹಿಂಸಾಚಾರ ನಡೆಸುವ, ಜನ-ಸಾಮಗ್ರಿಗಳನ್ನು ಸಾಗಿಸುವುದನ್ನು ತಡೆಯುವ ಅವಕಾಶ ಕಾನೂನಿನಲ್ಲಿ ಇಲ್ಲ ಎಂದು ತಿಳಿಯದಷ್ಟು ನಾವು ತಿಳಿಗೇಡಿಗಳೇ? ಯಾರೂ ಹಿಂಸಾತ್ಮಕವಾಗಿ ವರ್ತಿಸಬಾರದು, ಯಾವುದೇ ವ್ಯಕ್ತಿಯ ಚಲನೆಯ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಬಾರದು ಎಂದು ಈ ದೇಶದ ಕಾನೂನುಗಳು ಸಾಕಷ್ಟು ಸ್ಪಷ್ಟವಾಗಿ ಸಾರುತ್ತಿಲ್ಲವೇ? ಹಿಂಸಾತ್ಮಕವಾಗಿ ವರ್ತಿಸುವ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಲು ಪಿನಲ್ ಕೋಡ್ ಸಾಲುವುದಿಲ್ಲವೇ? ಇದಕ್ಕೆ ಇಂಜಂಕ್ಷನ್ ಪಡೆಯಬೇಕಾದ ಅಗತ್ಯವೇನಿದೆ? ಅವರು ಈ ರೀತಿ ಇಂಜಂಕ್ಷನ್‌ಗಳನ್ನು ಕೋರ್ಟ್‌ಗಳು ನೀಡುವುದು ಸಮರ್ಥನೀಯವೇ?

ಸಿವಿಲ್ ಪ್ರೊಸಿಜರ್ ಕೋಡ್ ಪ್ರಕಾರ ಒಂದು ಸ್ಪಷ್ಟ ಕಾನೂನಿನ ಅವಕಾಶ ಇಲ್ಲದಿದ್ದಲ್ಲಿ ಇಂಜಂಕ್ಷನ್‌ಗಳನ್ನು ನೀಡಬಹುದು. ವಿವಾದಕ್ಕೊಳಗಾಗಿರುವ ಒಂದು ಆಸ್ತಿಯ ಪರಭಾರೆ ಮಾಡುವುದನ್ನು ಅಥವಾ ಹಾಳುಗೆಡುಗುವ ರೀತಿಯಲ್ಲಿ ಯಾವುದೇ ವ್ಯಕ್ತಿ ವರ್ತಿಸದಂತೆ ತಡೆಯಲು ಇಂಜಂಕ್ಷನ್ ನೀಡಲಾಗುತ್ತದೆ. ಒಬ್ಬ ವ್ಯಕ್ತಿ ಕೊಲೆ, ಸುಲಿಗೆ, ಲೂಟಿ ಇತ್ಯಾದಿಗಳನ್ನು ನಡೆಸದಂತೆ ಇಂಜಂಕ್ಷನ್ ಪಡೆಯಲು ಸಾಧ್ಯವೇ? ವಾಸ್ತವವಾಗಿ ಇಲ್ಲಿ ಇಂಜಂಕ್ಷನ್‌ನ ಅಗತ್ಯವೇ ಇಲ್ಲ. ಈ ಎಲ್ಲಾ ಕ್ರಿಮಿನಲ್ ಕೃತ್ಯಗಳನ್ನು ತಡೆಯುವ ಕಾನೂನುಗಳು ಈಗಾಗಲೇ ಇವೆ. ಆದರೆ ಯಾರಾದರೂ ಒಬ್ಬ ಗೇಣಿದಾರನನ್ನು ಬಲವಂತದಿಂದ ಎಬ್ಬಿಸಿದರೆ ಅಥವಾ ಆಸ್ತಿಯನ್ನು ಮಾರಿದರೆ ಅಥವಾ ವಿವಾದಾತ್ಮಕ ಆಸ್ತಿಯೊಂದನ್ನು ರಕ್ಷಿಸದಿದ್ದರೆ ಇಂಜಂಕ್ಷನ್ ಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ನ್ಯಾಯ ದೊರಕಿಸಿ ಕೊಡಲು ಈ ಇಂಜಂಕ್ಷನ್‌ಗಳು ಅವಕಾಶ ನೀಡುತ್ತವೆ.

ಆದರೆ ನಮ್ಮ ಈ ತುಚ್ಛ ಮಂದಿ ಮಾಲಕರು, ವಕೀಲರು ಮೆರವಣಿಗೆಗ

ಪುಟ III ನೋಡಿ

> ಮಾಲಕರ ಹಿತಾಸಕ್ತಿಗಳನ್ನು ರಕ್ಷಿಸುವ ಕಾನೂನುಗಳನ್ನು ಮುರಿಯುವ, ನಮ್ಮ ಮೂಳೆಗಳನ್ನು ಮುರಿಯುವ ಸರ್ವಾಧಿಕಾರ ಶಾಹಿಯ ಕರಾಳ ಛಾಯೆ ಹೆಚ್ಚುತ್ತಿರುವಾಗ ಪ್ರಜಾಪ್ರಭುತ್ವ ಕಾನೂನಿನ ಆಳ್ವಿಕೆಯ ಸಮರವನ್ನು ಗೆಲ್ಲಬೇಕಾದ್ದು ನಮ್ಮ ರಾಜ್ಯದ ಕಾರ್ಮಿಕ ವರ್ಗದ ಆದ್ಯ ಕರ್ತವ್ಯವಾಗಿದೆ.

> ಮಾಲಕರು ಕಾರ್ಮಿಕ ಸಂಘವನ್ನು ಮಾನ್ಯ ಮಾಡಲು ನಿರಾಕರಿಸುತ್ತಾರೆ. ರಾಜ್ಯ ಸರಕಾರ ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡಲು ನಿರಾಕರಿಸುತ್ತದೆ!

ಒಂದೇ ಬಳ್ಳಿಯ ಕುಡಿಗಳು

- ನಿತ್ಯಾನಂದ ಸ್ವಾಮಿ

ದಾವಣಗೆರೆಯಲ್ಲಿ ಗಿರಣಿಗಳು ಉಳಿಯಬೇಕಾದರೆ, ಗಿರಣಿಯಲ್ಲಿ ನನ್ನ ಕೆಲಸ ಉಳಿಯಬೇಕಾದರೆ ಹನುಮನಕೊಪ್ಪದ ಭೂಹೀನರಿಗೆ ಭೂಮಿ ಸಿಗಬೇಕು. ಪಕ್ಕದ ಬಾಳಿಹಳ್ಳಿ ಗ್ರಾಮದ ಭೂಹೀನರಿಗೆ ಭೂಮಿ ಸಿ ಗಬೇಕು. ಎಲ್ಲ ಭೂಹೀನ ಬಡವರಿಗೆ ಭೂಮಿ ಸಿಗಬೇಕು. ಭೂಮಿ ಇಲ್ಲದವರಿಗೆ ಭೂಮಿ ಹಾಗೇ ಸಿಗುವುದಿಲ್ಲ. ಹಾಗೇ ಸಿಗುವುದಾಗಿದ್ದರೆ ಹನುಮನ ಕೊಪ್ಪದ ಪಕ್ಕದಲ್ಲಿರುವ ಆ 200 ಎಕರೆ ಭೂಮಿ ಇಷ್ಟು ಕಾಲದಿಂದ ಬೀಳು ಬಿದ್ದಿರುತ್ತಿರಲಿಲ್ಲ. ಭೂಮಿಗಾಗಿ ಭೂ ಹೀನರು ಹೋರಾಟ ಮಾಡಬೇಕು. ಹೋರಾಟ ಮಾಡಲು ಮೊದಲು ಸಂಘಟಿತರಾಗಬೇಕು. ಸಂಘಟನೆಯ ಗುಟ್ಟು ಹನುಮನಕೊಪ್ಪದವರಿಗೆ ಯಾರು ಹೇಳಬೇಕು? "ನಾನೇ ಹೇಳಬೇಕು" ಅಂದುಕೊಂಡ ಮಂಜ ಮನಸ್ಸಿನಲ್ಲಿ.

"ನಾನಾಗಲಿ, ನಮ್ಮ ಕರಿಯನಾಗಲೀ ದುಡಿಮೆ ಎಂಬ ತಾಯಿಯ ಮಕ್ಕಳು. ಕೈಗಾರಿಕಾ ಕಾರ್ಮಿಕರು, ಮತ್ತು ಗ್ರಾಮೀಣ ಕೃಷಿ ಕೂಲಿಕಾರರು ನಾವು ಒಂದೇ ಬಳ್ಳಿಯ ಕುಡಿಗಳು"

ಇಲ್ಲಿ ಹೆಸರುಗಳು ಮಾತ್ರ ಕಾಲ್ಪನಿಕ, ಆದರೆ ಅವರ ಅನುಭವಗಳು ಮಾತ್ರ ನೂರಕ್ಕೆ ನೂರು ವಾಸ್ತವ.

ಮಂಜ ಅಂದು ಕೆಲಸಕ್ಕೆ ರಜೆ ಹಾಕಿ ಊರಿಗೆ ಹೊರಟಿದ್ದ. ಕಳೆದ ಏಳೆಂಟು ವರ್ಷಗಳಿಂದ ಆತ ದಾವಣಗೆರೆ ಜವಳಿ ಗಿರಣಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಮದುವೆಯಾಗಿ ಎರಡು ವರ್ಷಗಳಾಗಿದ್ದವು. ಒಂದು ವರ್ಷದ ಹೆಣ್ಣುಮಗು ಹಾಗೂ ಹೆಂಡತಿ ರತ್ನಳೊಂದಿಗೆ ಊರ ಹೊರವಲಯದ ಬಡಾವಣೆಯಲ್ಲಿ ಒಂದು ಚಿಕ್ಕ ಬಾಡಿಗೆ ಮನೆಯಲ್ಲಿ ಕಾಲಕಳೆಯುತ್ತಿದ್ದ ಅರ್ಜೆಂಟ್ ಊರಿಗೆ ಬಂದು ಹೋಗಬೇಕಂತ ಅಪ್ಪ ದುರ್ಗಪ್ಪ ಹೇಳಿಕಳುಹಿಸಿದ್ದ.

ಧಾರವಾಡ ಜಿಲ್ಲೆಗೆ ಸೇರಿದ ಹಾನಗಲ್ ತಾಲ್ಲೂಕಿನ ಹನುಮನ ಕೊಪ್ಪ ಮಂಜನ ಹುಟ್ಟೂರು. ದಲಿತ ಕುಟುಂಬದಲ್ಲಿ ಹುಟ್ಟಿದ ಆತನಿಗೆ ಶಿಕ್ಷಣದ ಸೌಭಾಗ್ಯ ದೊರೆತಿರಲಿಲ್ಲ. ದುರ್ಗಪ್ಪನಿಗೆ ಆತ ಮೂರನೆಯ ಮಗ. ಒಡಹುಟ್ಟಿದ ಇಬ್ಬರು ಅಕ್ಕಂದಿರ ಮದುವೆಯಾಗಿ ಗಂಡಂದಿರ ಮನೆ ಸೇರಿದ್ದರು. ಮನೆಯಲ್ಲಿ ತಮ್ಮ ಕರಿಯ ವಯಸ್ಸಾದ ತಂದೆತಾಯಿಗಳಿಗೆ ನೆರವಾಗುತ್ತಿದ್ದ.

ಚಿಕ್ಕ ವಯಸ್ಸಿನಿಂದ ಸಾಹುಕಾರರ ಮನೆಯಲ್ಲಿ ಜೀತ ಕೆಲಸ ಮಾಡಿಕೊಂಡು ಬಂದಿದ್ದ ದುರ್ಗಪ್ಪ ಈಗ ಎಲುಬುಗಳ ಹಂದರವಾಗಿದ್ದ. ಒಂದು ಎಕರೆ ಭೂಮಿಯನ್ನು ದಾನವಾಗಿ ಕೊಡುವ ವಾಗ್ದಾನ ಮಾಡಿದ್ದಸಾಹುಕಾರ ಶಿವರಾಯಪ್ಪ ಈಗ ಬದುಕಿರಲಿಲ್ಲ. ಕರಿಯ ದನಕಾಯುವ ಕೆಲಸ ಬಿಟ್ಟು ಇನ್ನೂ ಸ್ವಲ್ಪ ಹೆಚ್ಚು ಸಂಪಾದನೆ ಮಾಡುವ ಆಸೆಯಿಂದ ಕೂಲಿ ಕೆಲಸಕ್ಕೆ ಹೋಗಲಾರಂಭಿಸಿದ್ದ.

ಮಂಜ ಮನೆ ತಲುಪಿದಾಗ ಸಂಜೆಯಾಗಿತ್ತು. ಮುದುಕರಿಬ್ಬರೂ ತನ್ನ ದಾರಿಯನ್ನೇ ನೋಡುತ್ತಾ ಕುಳಿತಿರುವುದನ್ನು ನೋಡಿ ಆತನಲ್ಲಿ ಆತಂಕ ಉಂಟಾಯಿತು. ತಮ್ಮಕರಿಯ ಮನೆಯಲ್ಲಿದ್ದಂತೆ ಕಾಣಲಿಲ್ಲ. ಪಕ್ಕದ ಮನೆಯ ತಿರ್ಕಪ್ಪ ಬಂದು ಮಾತಿಗಾರಂಭಿಸಿದಾಗಲೇ ಕರಿಯ ಧಾರವಾಡ ಜೈಲಿನಲ್ಲಿದ್ದಾನೆ ಎಂದು ಮಂಜನಿಗೆ ತಿಳಿಯಿತು. ಕೃಷಿ ಕೂಲಿಕಾರರ ಸಂಘದವರು ಸಂಘಟಿಸಿದ್ದ ಸರಕಾರಿ ಭೂಮಿ ಅತಿಕ್ರಮಣ ಚಳುವಳಿಯಲ್ಲಿ ಭಾಗವಹಿಸಿದ್ದ ಗ್ರಾಮದ ನೂರಾರು ಜನ ಸ್ತ್ರೀ ಪುರುಷರನ್ನು ಬಂಧಿಸಿ ಧಾರವಾಡ ಮತ್ತು ಬೆಳಗಾಂವ್ ಜೈಲುಗಳಿಗೆ ರವಾನಿಸಲಾಗಿತ್ತು.

ಗ್ರಾಮದ ಕೆಲವು ಭೂರಹಿತ ಕುಟುಂಬಗಳು ಆ ಸರಕಾರಿ ಪಡಭೂಮಿಯಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಲು ಹತ್ತಾರು ಸಲ ಪ್ರಯತ್ನ ಪಟ್ಟಿದ್ದರು. ಗ್ರಾಮದ ಕೆಲವು ಶ್ರೀಮಂತರ ಬೆಂಬಲದಿಂದ ಅರಣ್ಯ ಇಲಾಖೆಯ ಸಿಬ್ಬಂದಿಯವರು ದೌರ್ಜನ್ಯ ಮಾಡಿ ಇವರನ್ನು ಒಕ್ಕಲೆಬ್ಬಿಸುತ್ತಿದ್ದರು.

ಉದ್ಯೋಗ ಹುಡುಕಿಕೊಂಡು ಮಂಜ ದಾವಣಗೆರೆಗೆ ಬರುವ ಮೊದಲು ಸಾಹುಕಾರರ ದನಗಳನ್ನು ಮೇಯಿಸಲು ಹೋಗುತ್ತಿದ್ದಾಗ ಆತ ಈ ಭೂಮಿಯನ್ನು ನೋಡಿದ್ದ. ಅಲ್ಲಿ ಎಂದೂ ಯಾವ ಮರಗಳೂ ಇರಲಿಲ್ಲ. ಅರಣ್ಯ ಇಲಾಖೆಯವರು ಬೇರೆ ಕಡೆ ಬೆಳೆದಂತೆ ಸುಮಾರು 200 ಎಕರೆಗಳಷ್ಟು ಇರುವ ಈ ಭೂಮಿಯಲ್ಲಿ ಯಾವ ನೀಲಗಿರಿ ಮರಗಳನ್ನಾಗಲಿ ಬೇರೆ ಯಾವ ಮರಗಳನ್ನಾಗಲೀ ಬೆಳೆದಿರಲಿಲ್ಲ. ನಮಗೂ ಈ ಭೂಮಿಯಲ್ಲಿ ಒಂದು ನಾಲ್ಕು ಎಕರೆ ಭೂಮಿಸಿಕ್ಕರೆ ಸಾಹುಕಾರರ ಚಾಕ್ರಿ ಕೆಲಸದಿಂದ ಬಿಡುಗಡೆ ಹೊಂದಬಹುದೆಂದು ಮಂಜನ ಎಳೆಯ ತಲೆಯಲ್ಲಿ ವಿಚಾರವೊಂದು ಮಿಂಚಿ ಮಾಯವಾಗಿತ್ತು.

ಹನುಮನ ಕೊಪ್ಪದ ದಲಿತರೆಲ್ಲರು ಸೇರಿ ಸಂಘವನ್ನು ರಚಿಸಿಕೊಂಡು ಸರಕಾರದಿಂದ ಈ ಭೂಮಿಯನ್ನು ಪಡೆಯಲು ಪ್ರಯತ್ನ ಮಾಡಿ ವಿಫಲರಾಗಿದ್ದರು. ಇತರ ಜಾತಿಗಳಲ್ಲಿನ ಭೂಹೀನ ಬಡವರ ಸಹಾನುಭೂತಿ ದೊರೆಯದೆ ಹೋದದ್ದು ಇವರನ್ನು ಮತ್ತೊಮ್ಮೆ ಒಕ್ಕಲೆಬ್ಬಿಸಿ ಓಡಿಸಲು ಸಾಧ್ಯವಾಯಿತು. ಅಂದಿನಿಂದ ಇವರೆಲ್ಲರು ಕಾಫಿ ಸೀಮೆ ಕಡೆ ಮುಖ ಮಾಡಿಕೊಂಡಿದ್ದರು.

ಅದೊಂದು ವರ್ಷ ಮಂಜನು ಸಹ ಕಾಫಿ ಸೀಮೆಗೆ ಹೋಗಿದ್ದ. ಚಳಿಗಾಲದ ದಿನಗಳು ಕಾಫಿ ತೋಟಗಳಲ್ಲಿ ಹಣ್ಣು ಹರಿಯುವ ಸೀಜನ್. ಉದ್ಯೋಗ ಹುಡುಕಿಕೊಂಡು ಬಂದ ಕೂಲಿಕಾರರು ಈ ತೋಟಗಳಲ್ಲಿಯೇ ನೆಲೆ ನಿಂತು ಕಾಯಂ ಕೆಲಸಗಾರರು ಎನಿಸಿಕೊಂಡವರು. ಸೀಜನ್ ಬಂದಾಗ ಕೆಲಸಕ್ಕೆ ಹೆಚ್ಚಿಗೆ ಜನ ಬೇಕಾಗುತ್ತಾರೆ. ಜನರನ್ನು ಒದಗಿಸಲು ಮಧ್ಯವರ್ತಿಗಳಿರುತ್ತಾರೆ. ಉದ್ಯೋಗವಿಲ್ಲದ ಕೂಲಿಕಾರರಿಗೆ ಈ ತೋಟಗಳಲ್ಲಿ ಕೆಲಸ ಒದಗಿಸಿ, ತೋಟ ಮಾಲೀಕರಿಗೆ ಅವಶ್ಯಕ ಕೂಲಿ ಆಳುಗಳನ್ನು ಒದಗಿಸಿ ಕಾರ್ಮಿಕರಿಂದಲೂ ಅವರ ಮಾಲೀಕರಿಂದಲೂ ಕಮಿಷನ್ ಹೊಡೆಯುವುದು ಇವರ ಕಾಯಕ.

ಮಂಜ ಕಾಫಿಸೀಮೆಗೆ ಹೋದ ಆ ವರ್ಷ ಅಲ್ಲಿ ಅವನು ಕಂಡದ್ದೇಬೇರೆ. ತೋಟಗಳಲ್ಲಿ ಕಾರ್ಮಿಕರು ಕೆಂಪು ಬಾವುಟಗಳನ್ನು ಏರಿಸಿಕೊಂಡು ಕೆಲಸವನ್ನು ಸ್ಥಗಿತಗೊಳಿಸಿದ್ದರು. ಕೂಲಿ ಹೆಚ್ಚಳದ ಬೇಡಿಕೆ ಮುಂದಿಟ್ಟು ಕಾರ್ಮಿಕರು ಮುಷ್ಕರ ನಡೆಸುತ್ತಿದ್ದರು. ಮುಷ್ಕರದ ಅಂಗವಾಗಿ ಸಭೆಗಳನ್ನು ಮೆರವಣಿಗೆಗಳನ್ನು ನಡೆಸಲಾಗುತ್ತಿತ್ತು. ಅಂತಹ ಒಂದು ಸಭೆಯ ಕಾರ್ಯಕಲಾಪಗಳನ್ನು ಹತ್ತಿರದಿಂದ ನೋಡುವ ಅವಕಾಶ ಮಂಜನಿಗೂ ದೊರೆಯಿತು.

ಒಂದು ಸಭೆಗೆ ಹಿರಿಯ ಕಾರ್ಮಿಕ ಮುಖಂಡರೊಬ್ಬರು ಬೆಂಗಳೂರಿನಿಂದ ಬಂದಿದ್ದರು. "ಇಂದು ಸರಕಾರದ ನೀತಿಯಿಂದಾಗಿ ಹಳ್ಳಿಗಳಲ್ಲಿ ಬಡ ರೈತರು ತಮ್ಮ ಒಡೆತನದಲ್ಲಿದ್ದ ಅಲ್ಪಸ್ವಲ್ಪ ಭೂಮಿಯನ್ನು ಕಳೆದುಕೊಂಡು ಕೂಲಿಕಾರರಾಗುತ್ತಿದ್ದಾರೆ. ಭೂಹೀನ ಕೃಷಿ ಕೂಲಿಕಾರರ ಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಈ ಕೃಷಿ ಕೂಲಿಕಾರರ ಅಸಹಾಯಕತೆಯ ಪೂರ್ಣ ಲಾಭ ಈ ತೋಟದ ಮಾಲೀಕರು ಪಡೆಯುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಲಭ್ಯ ಇರುವ ಕೃಷಿ ಯೋಗ್ಯ ಸರಕಾರಿ ಭೂಮಿ ಈ ಭೂಹೀನ ಕೂಲಿಕಾರರಿಗೆ ಸಿಕ್ಕರೆ ಅವರು ಪ್ರತಿವರ್ಷ ತಮ್ಮ ಹೆಂಡರು ಮಕ್ಕಳನ್ನು ಕಟ್ಟಿಕೊಂಡು ಕಾಫಿ ಸೀಮೆಗೆ ಅಲೆಯುವುದು ತಪ್ಪಬಹುದು. ತೋಟ ಕಾರ್ಮಿಕರಂತೆ ಕೃಷಿ ಕಾರ್ಮಿಕರು ಸಹ ಅವರವರ ಗ್ರಾಮಗಳಲ್ಲಿ ಸಂಘಟಿತರಾಗಿ ಭೂಮಿಗಾಗಿ ಹೋರಾಡಲು ಸಾಧ್ಯವಾಗಬೇಕು" ಎಂದಿದ್ದರು ಅವರು ತಮ್ಮ ಭಾಷಣವನ್ನು ಮುಕ್ತಾಯ ಮಾಡುತ್ತಾ.

ಭಾಷಣವನ್ನು ಆಲಿಸುತ್ತಾ ಕುಳಿತಿದ್ದ ಮಂಜನಿಗೆ ತಕ್ಷಣ ತಮ್ಮ ಗ್ರಾಮದ ಪಕ್ಕದ ಸರಕಾರಿ ಪಡಭೂಮಿಯ ನೆನಪಾಗಿತ್ತು.

ಊರಿಗೆ ವಾಪಸ್ ಬಂದ ನಂತರ ಭೂಮಿಯ ಪ್ರಸಂಗವನ್ನು ಅಪ್ಪನೊಂದಿಗೆ ಚರ್ಚಿಸಲು ಮಂಜ ಮರೆಯಲಿಲ್ಲ. ಆದರೆ ಅಪ್ಪ ದುರ್ಗಪ್ಪನಲ್ಲಿ ಭೂಮಿಯ ಬಗ್ಗೆ ಆಸಕ್ತಿ ಉಳಿದಿರಲಿಲ್ಲ. "ನೀನು ನಾಳೆಯೇ ದಾವಣಗೆರೆ ಹೋಗು, ಅಲ್ಲಿ ನಿನ್ನ ಅತ್ತೆಯ ಮಗ ಯಾವುದೋ ಮಿಲ್ಲಿನಲ್ಲಿ ಕೆಲ್ಸ ಮಾಡುತ್ತಿದ್ದಾನಂತೆ, ನಿನಗೂ ಏನಾದರೂ ಕೆಲ್ಸ ಹುಡುಕಿಕೊಡು ಅಂತ ಕೇಳು" ಎಂದ ದುರ್ಗಪ್ಪ.

ತಂದೆಯ ಅಭಿಪ್ರಾಯಕ್ಕೆ ತಲೆಬಾಗಿ ದಾವಣಗೆರೆ ಬಂದ ಮಂಜ ಕೆಲಕಾಲ ಅಲ್ಲಿ ಇಲ್ಲಿ ಅಲೆದಾಡಿ ಕೊನೆಗೆ ಜವಳಿ ಗಿರಣಿ ಕೆಲಸಕ್ಕೆ ಸೇರಿಕೊಂಡ, ಒಂದು ವರ್ಷ ಕೆಲ್ಸ ಕಲಿಯುವುದಕ್ಕೆ ಹೋದರೆ ಇನ್ನೆರಡು ವರ್ಷ ಆತ ಬದಲಿ ಕೆಲಸಗಾರನಾಗಿ ಕೆಲ್ಸ ಮಾಡಿದ.

ಕೆಂಪು ಬಾವುಟದ ಕಾರ್ಮಿಕ ಸಂಘದ ಶಕ್ತಿಸಾಮರ್ಥ್ಯವನ್ನು ಮಂಜ ಕಾಫಿ ತೋಟಕ್ಕೆ ಹೋದಾಗಲೇ ಕಂಡಿದ್ದ. ಅದೇ ಕುಡುಗೋಲು ಮತ್ತು ಸುತ್ತಿಗೆಯ ಬಾವುಟದ ಸಂಘಕ್ಕೆ ಸದಸ್ಯತ್ವ ಶುಲ್ಕ ಪಾವತಿ ಮಾಡಿ ಮಂಜ ಸಂಘದ ಸದಸ್ಯನಾದ.

ದಾವಣಗೆರೆ ಒಂದು ಕಾಲದಲ್ಲಿ ಜವಳಿ ಗಿರಣಿಗಳಿಗೆ ಹೆಸರುವಾಸಿಯಾಗಿತ್ತು. ಆದರೆ ಈಗ ಒಂದರ ನಂತರ ಒಂದರಂತೆ ಜವಳಿ ಗಿರಣಿಗಳು ಬಾಗಿಲು ಹಾಕಲಾರಂಭಿಸಿದವು. ಜವಳಿ ಕೈಗಾರಿಕೆಯಲ್ಲಿ ಹೆಚ್ಚುತ್ತಿರುವ ಬಿಕ್ಕಟ್ಟಿನ ಬಗ್ಗೆ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ ವಿಚಾರ ಸಂಕಿರಣವೊಂದರಲ್ಲಿ ಮಂಜ ಭಾಗವಹಿಸಿದ್ದ. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾರ್ಮಿಕ ಧುರೀಣರೊಬ್ಬರು ದೇಶದಲ್ಲಿ ಇಂದು ಕಾರ್ಖಾನೆಗಳು ಹೆಚ್ಚೆಚ್ಚಾಗಿ ಮುಚ್ಚುತ್ತಿರುವುದಕ್ಕೆ ಕಾರಣಗಳನ್ನು ಹೇಳುತ್ತಿದ್ದರು. ಸರಕಾರದ ತಪ್ಪು ಧೋರಣೆ ಇಂದು ಕಾರ್ಖಾನೆಗಳು ಮುಚ್ಚಿ ಹೋಗುವುದಕ್ಕೆ ಒಂದು ಕಾರಣವಾಗಿದೆ. ದೇಶದಲ್ಲಿ ತಯಾರಾಗುತ್ತಿರುವ ಗ್ರಾಹಕ ವಸ್ತುಗಳನ್ನು ವಿದೇಶಗಳಿಂದ ಆಯಾತ ಮಾಡಿಕೊಳ್ಳುತ್ತಿರುವುದರಿಂದ ಇಲ್ಲಿಯ ಕಾರ್ಖಾನೆಗಳಲ್ಲಿ ತಯಾರಾಗುವ ವಸ್ತುಗಳು ಪೈಪೋಟಿಯನ್ನು ಎದುರಿಸಲಾಗದೆ ಕಾರ್ಖಾನೆಗಳು ಮುಚ್ಚಿಹೋಗುತ್ತವೆ. ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ಸರಕುಗಳನ್ನು ಕಂಡುಕೊಳ್ಳಲು ಜನರ ಹತ್ತಿರ ಹಣ ಇಲ್ಲದಿದ್ದರೆ ಅಂತಹ ವಸ್ತುಗಳ ಬೇಡಿಕೆ ಕುಸಿದು ಕಾರ್ಖಾನೆಗಳು ಮುಚ್ಚಿಹೋಗುತ್ತವೆ. ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಬಡ ರೈತರ ಮತ್ತು ಕೃಷಿ ಕೂಲಿಕಾರರ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಾಗದೆ ಹಳೆಯ ಕೈಗಾರಿಕೆಗಳು ಉಳಿಯುವುದಿಲ್ಲ. ಹೊಸ ಕೈಗಾರಿಕೆಗಳು ಬೆಳೆಯುವುದಿಲ್ಲ.ಪ್ರಗತಿಪರ ಭೂಸುಧಾರಣೆಗಳು ಜಾರಿಗೆ ಬಾರದೆ ಭೂಹೀನ ಬಡವರಿಗೆಭೂಮಿ ಸಿಗುವಂತಾಗದೆ ಗ್ರಾಮೀಣ ಬಡವರ ಕೊಂಡುಕೊಳ್ಳುವ ಶಕ್ತಿ ವೃದ್ಧಿಯಾಗುವುದಿಲ್ಲ. ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ತಮ್ಮ ಉದ್ಯೋಗವನ್ನು ಮತ್ತು ಅದಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗಬೇಕಾದರೆ ಗ್ರಾಮೀಣ ಪ್ರದೇಶದಲ್ಲಿ ಭೂಮಿಯ ಸಮಸ್ಯೆ ಇತ್ಯರ್ಥವಾಗಲೇಬೇಕು" ಎಂದಿದ್ದರು.

ಮಂಜನ ಮನಸ್ಸಿನಲ್ಲಿ ಮತ್ತೆ ತಳಮಳ. ದಾವಣಗೆರೆಯಲ್ಲಿ ಗಿರಣಿಗಳು ಉಳಿಯಬೇಕಾದರೆ, ಗಿರಣಿಯಲ್ಲಿ ನನ್ನ ಕೆಲಸ ಉಳಿಯಬೇಕಾದರೆ ಹನುಮನ ಕೊಪ್ಪದ ಭೂಹೀನರಿಗೆ ಭೂಮಿ ಸಿಗಬೇಕು. ಪಕ್ಕದ ಬಾಳಿಹಳ್ಳಿ ಗ್ರಾಮದ ಭೂಹೀನರಿಗೆ ಭೂಮಿ ಸಿಗಬೇಕು. ಎಲ್ಲ ಭೂಹೀನ ಬಡವರಿಗೆ ಭೂಮಿ ಸಿಗಬೇಕು. ಭೂಮಿ ಇಲ್ಲದವರಿಗೆ ಭೂಮಿ ಹಾಗೇ ಸಿಗುವುದಿಲ್ಲ. ಹಾಗೇ ಸಿಗುವುದಾಗಿದ್ದರೆ ಹನುಮನ ಕೊಪ್ಪದ ಪಕ್ಕದಲ್ಲಿರುವ ಆ 200 ಎಕರೆ ಭೂಮಿ ಇಷ್ಟು ಕಾಲದಿಂದ ಬೀಳು ಬಿದ್ದಿರುತ್ತಿರಲಿಲ್ಲ. ಭೂಮಿಗಾಗಿ ಭೂ ಹೀನರು ಹೋರಾಟ ಮಾಡಬೇಕು. ಹೋರಾಟ ಮಾಡಲು ಮೊದಲು ಸಂಘಟಿತರಾಗಬೇಕು. ಸಂಘಟನೆಯ ಗುಟ್ಟು ಹನುಮನಕೊಪ್ಪದವರಿಗೆ ಯಾರು ಹೇಳಬೇಕು? "ನಾನೇ ಹೇಳಬೇಕು" ಅಂದುಕೊಂಡ ಮಂಜ ಮನಸ್ಸಿನಲ್ಲಿ.

ದೀಪಾವಳಿ ರಜೆಗೆಂದು ಮಂಜ ಊರಿಗೆ ಬಂದಿದ್ದ. ಸಮಯ ನೋಡಿಕೊಂಡು ಕರಿಯ ಮತ್ತು ಅವನ ಕೆಲವು ಸ್ನೇಹಿತರನ್ನು ಒಂದೆಡೆ ಸೇರಿಸಿದ. ಕರಿಯ ಒಳ್ಳೆಯ ಹಾಡುಗಾರ. ಹೀಗಾಗಿ ಇತರ ಜಾತಿಯ ಹುಡುರು ಸಹ ಅವನೊಂದಿಗೆ ಇರಲು ಇಷ್ಟಪಡುತ್ತಿದ್ದರು. ಕೆಲವರು ಮೇಲ್ಜಾತಿಗಳಿಗೆ ಸೇರಿದವರಾಗಿದ್ದರೂ ಇವರಂತೆ ಅವರೂ ಭೂ ಹೀನರಾಗಿದ್ದರು. ಒಬ್ಬಿಬ್ಬರು ಮಾತ್ರ ಅಲ್ಪಸ್ವಲ್ಪ ಹಿಡುವಳಿವುಳ್ಳ ಕುಟುಂಬಗಳಿಂದ ಬಂದವರು.

"ನೋಡ್ರಪ್ಪಾ, ನೀವೇನೋ ಈಗ ಹುಡುಗರು" ಮಂಜ ಪೀಠಿಕೆ ಹಾಕಿದ. "ಇನ್ನೊಂದೆರಡು ವರ್ಷಕ್ಕೆ ನಿಮಗೆ ಮದ್ವೆ ಆಗ್ತದೆ. ಕುಟುಂಬದ ಜವಾಬ್ದಾರಿ ತಲೆ ಮೇಲೆ ಬೀಳ್ತದೆ. ಹೆಂಡರು ಮಕ್ಕಳನ್ನು ಕಟ್ಟಿಕೊಂಡು ನೀವು ಊರೂರು ಅಲೆಯುವುದು ತಪ್ಪುವಂತಾಗಬೇಕಾದರೆ ಊರ ಪಕ್ಕದಲ್ಲಿರುವ ಸರಕಾರಿ ಭೂಮಿಗೆ ನೀವು ಕೈ ಹಾಕಬೇಕು. ಭೂಮಿ ಇಲ್ಲದವರನ್ನು ಮತ್ತು ಅಲ್ಪಸ್ವಲ್ಪ ಭೂಮಿ ಇದ್ದವರನ್ನು ಈ ಕೆಲಸಕ್ಕಾಗಿ ಒಂದುಗೂಡಿಸಬೇಕು" ಎನ್ನುವಷ್ಟರಲ್ಲಿ "ಸರಕಾರಿ ಭೂಮಿ ಹೊಡೆಯುವುದೆಂದ್ರೆ ಅದು ಕಾನೂನಿಗೆ ವಿರುದ್ಧ ಆಗ್ಲಿಕಿಲ್ವಾ?" ಆತಂಕದ ಪ್ರಶ್ನೆ ವೀರೇಶನಿಂದ.

"ಒಂದು ಕಾನೂನು ಮುರಿದ್ರೆ ಇನ್ನೊಂದು ಕಾನೂನು ಬರುತ್ತದೆ. ಸರಕಾರಿ ಭೂಮಿ ಮುಟ್ಟಬಾರದೆಂಬ ಕಾನೂನು ಭಂಗವಾದರೆ ಸರಕಾರಿ ಭೂಮಿಯನ್ನು ಬಡವರಿಗೆ ಹಂಚುವ ಕಾನೂನನು ಬಂದೇ ಬರುತ್ತದೆ. ಕಾಯ್ದೆ ಭಂಗ ಚಳುವಳಿಯನ್ನು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರಲ್ವೇ ಕಲಿಸಿದ್ದು" ಮಂಜನ ತರ್ಕ.

"ಪೋಲೀಸರು ಹಿಡ್ಕೊಂಡು ಹೋಗಿ ಜೈಲಿಗೆ ಹಾಕಿದರೆ ಜೈಲಿನಲ್ಲಿಟ್ಟು ಊಟ ಹಾಕುವುದಾದರೆ ಬೇರೆ ಏನು ಚಿಂತೆ? ನಾಲ್ಕು ದಿನ ಒಳಗಿಟ್ಟು ಕಳುಹಿಸುವುದಾದರೆ ಮತ್ತೆ ಭೂಮಿಗೆ". ತಂತ್ರ ಬಿಡಿಸಿ ಹೇಳಿದ ಮಂಜ.

"ಗ್ರಾಮದ ಇನ್ನುಳಿದ ಜನ ವಿರೋಧ ಮಾಡಬಹುದಲ್ವೇ?" ಇನ್ನೊಬ್ಬನ ಸಂಶಯದ ಧ್ವನಿ. "ಅವರಿಗೆ ಸರಿಯಾಗಿ ತಿಳಿಸಿ ಹೇಳಿದರೆ ಅವರು ವಿರೋಧ ಮಾಡುವ ಪ್ರಶ್ನೆ ಉದ್ಭವಿಸದು. ಗ್ರಾಮದ ಭೂ ಹೀನರಿಗೆ ಭೂಮಿ ಸಿಕ್ಕರೆ ಅವರ ಆದಾಯ ಹೆಚ್ಚಾಗುತ್ತದೆ. ಆ ಆದಾಯವನ್ನು ಅವರು ಗ್ರಾಮದಲ್ಲಿಯೇ ಖರ್ಚು ಮಾಡುವುದರಿಂದ ಅಂಗಡಿಗಳಲ್ಲಿ ವ್ಯಾಪಾರ ಹೆಚ್ಚುತ್ತದೆ. ಊರು ಅಭಿವೃದ್ಧಿಯಾಗುತ್ತದೆ" ಎಂದ ಮಂಜ.

ಆತನ ಮಾತಿನಲ್ಲಿದ್ದ ನಿಖರತೆ ಉಳಿದವರ ಮೇಲೆ ಪರಿಣಾಮ ಬೀರದಿರಲಿಲ್ಲ.

"ಆದರೆ ಮಂಜಣ್ಣ, ನಮ್ಮ ಮಾತು ಯಾರು ಕೇಳಬೇಕು, ಇಂತಹ ವಿಷಯದಲ್ಲಿ" ಎಂದ ಕರಿಯ ನಿರಾಶೆಯ ಧ್ವನಿಯಲ್ಲಿ.

"ನೀವು ನಾಲ್ಕು ಜನ ಅಕ್ಕಿ ಆಲೂರಿಗೆ ಹೋಗಿ ಅಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಆಫೀಸ್ ಇದೆ ಎಂದು ಕೇಳಿದ್ದೇನೆ. ಕೂಲಿಕಾರರ ಸಂಘದ ನೇತೃತ್ವದಲ್ಲಿ ಈಗಾಗಲೇ ಹಾನಗಲ್ ಮತ್ತು ಅಕ್ಕಪಕ್ಕದ ತಾಲ್ಲೂಕುಗಳಲ್ಲಿ ಸರಾಕರಿ ಭೂಮಿ ಅತಿಕ್ರಮಣ ಚಳುವಳಿ ನಡೆದಿದೆ. ಹೆಚ್ಚಿನ ಮಾರ್ಗದರ್ಶನ ಅವರಿಂದ ಪಡೆಯಿರಿ" ಎಂದ ಮಂಜ ತನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಾ. ಮಂಜನ ಈ ಸೂಚನೆಗೆ ಅಂದು ಎಲ್ಲರೂ ಒಪ್ಪಿಗೆ ಕೊಟ್ಟಿದ್ದರು.

ಅಷ್ಟು ಹೇಳಿ ಮಂಜ ಮಿಲ್ಲಿನಲ್ಲಿ ತನ್ನ ಕೆಲಸಕ್ಕೆ ವಾಪಾಸಾಗಿದ್ದ. ಮತ್ತೆ ಬಿಡುವು ಸಿಕ್ಕಾಗ ಊರಿಗೆ ಹೋಗಿ ಗ್ರಾಮದಲ್ಲಾಗುತ್ತಿರುವ ಬೆಳವಣಿಗೆಯನ್ನು ಗಮನಿಸುತ್ತಾ ಅವಶ್ಯಕ ಮಾರ್ಗದರ್ಶನ ನೀಡುತ್ತಾ ಬಂದಿದ್ದ. ಗ್ರಾಮದ ಕೂಲಿಕಾರರ ಅನುಮಾನಗಳಿಗೆ ಪರಿಹಾರ ಒದಗಿಸಿದ್ದ. ಹೊಟ್ಟೆಕಿಚ್ಚಿನ ಜನ ಮಾಡುವ ಅಪಪ್ರಚಾರಗಳಿಗೆ ಉತ್ತರ ನೀಡಿದ್ದ. ಕೂಲಿಕಾರರ ಸಂಘದವರ ಸಂಪರ್ಕದ ನಂತರ ಮಂಜನ ಜವಾಬ್ದಾರಿ ಕಡಿಮೆಯಾಗಿತ್ತು.

ಐದಾರು ತಿಂಗಳುಗಳ ನಂತರ ಇಂದು ಮಂಜ ಹನುಮನ ಕೊಪ್ಪಕ್ಕೆ ಹೋದಾಗ ಅಲ್ಲಿಯ ಬೆಳವಣಿಗೆಗಳನ್ನು ಕಂಡು ಹೆಮ್ಮೆಪಟ್ಟುಕೊಂಡ. ಗ್ರಾಮದಲ್ಲಿಯೂ ಕೂಲಿಕಾರರ ಸಂಘ ಘಟಕ ಸ್ಥಾಪನೆಯಾಗಿತ್ತು. ಎಲ್ಲ ಜಾತಿಗಳ ಬಡವರು ಸಂಘದಲ್ಲಿ ಒಂದಾಗಿದ್ದರು. ಪುರುಷರ ಹೆಗಲಿಗೆ ಹೆಗಲು ಕೊಟ್ಟು ಹೋರಾಡಲು ಮಹಿಳೆಯರೂ ಮುಂದೆ ಬಂದಿದ್ದರು. ಅರಣ್ಯ ಅಧಿಕಾರಿಗಳ ಕಣ್ಣು ತಪ್ಪಿಸಿ ಸುಮಾರು 150 ಎಕರೆಯಷ್ಟು ಭೂಮಿಯಲ್ಲಿ ಬೀಜ ಬಿತ್ತುವ ಕೆಲಸ ಪೂರ್ಣವಾಗಿತ್ತು. ಸಂಘದ ಮುಖಂಡರನ್ನು ಬಂಧಿಸಲು ಪೋಲೀಸರು ಬಂದಿದ್ದರು. ಮುಖಂಡರನ್ನು ಮಾತ್ರ ಒಪ್ಪಿಸಲು ನಿರಾಕರಿಸಲಾಯಿತು. ಎರಡನೇ ಬಾರಿ ದೊಡ್ಡ ವ್ಯಾನೊಂದು ಗ್ರಾಮದ ಅಗಸಿಗೆ ಬಂದು ನಿಂತಾಗ ಸಂಘದ ಸದಸ್ಯರು ಮಾತ್ರವಲ್ಲ ಇದರ ಹೋರಾಟಕ್ಕೆ ಬೆಂಬಲ ನೀಡಲಾರಂಭಿಸಿದ್ದ ರೈತರೂ ಸೇರಿಕೊಂಡಂತೆ ಒಟ್ಟು 128 ಜನ ಬಂಧನಕ್ಕೆ ಒಳಗಾಗಿದ್ದರು. ಅವರಲ್ಲಿ ಮಂಜನ ತಮ್ಮ ಕರಿಯನೂ ಸೇರಿದ್ದನು.

"ಅಪ್ಪ, ಅಳಬೇಡ" ಎಂದ ಮಂಜ ತಂದೆಗೆ ಸಮಾಧಾನ ಹೇಳುತ್ತಾ. "ನಮ್ಮ ಕರಿಯನಿಗೆ ಏನೂ ಆಗುವುದಿಲ್ಲ, ಕೂಲಿಕಾರರ ಸೈನ್ಯ ದೊಡ್ಡದಿದೆ. ಅವರಿಗೆ ಪಟ್ಟಣದ ಕಾರ್ಮಿಕರ ಬೆಂಬಲ ಇದೆ. ನಾನಾಗಲಿ, ನಮ್ಮ ಕರಿಯನಾಗಲೀ ದುಡಿಮೆ ಎಂಬ ತಾಯಿಯ ಮಕ್ಕಳು. ಕೈಗಾರಿಕಾ ಕಾರ್ಮಿಕರು, ಮತ್ತು ಗ್ರಾಮೀಣ ಕೃಷಿ ಕೂಲಿಕಾರರು ನಾವು ಒಂದೇ ಬಳ್ಳಿಯ ಕುಡಿಗಳು ಎಂದು ಮಂಜ ಅಪ್ಪ ದುರ್ಗಪ್ಪನನ್ನು ಅಪ್ಪಿಕೊಂಡ. □